# ಅಧ್ಯಾಯ-೧೦

# ಕಾನೂನು, ಸುವ್ಯವಸ್ಥೆ ಮತ್ತು ನ್ಯಾಯಾಡಳಿತ

ಇತ್ತೀಚಿನವರೆಗೂ ಮೈಸೂರು ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದ್ದ ಚಾಮರಾಜನಗರವನ್ನು ಜಿಲ್ಲಾ ಕೇಂದ್ರವನ್ನಾಗಿಸಿಕೊಂಡು ಕಸಬಾ, ಕೊಳ್ಳೇಗಾಲ, ಯಳಂದೂರು, ಹಾಗೂ ಗುಂಡ್ಲುಪೇಟೆ ತಾಲೂಕುಗಳನ್ನೊಳಗೊಂಡಂತೆ ನೂತನ ಜಿಲ್ಲೆಯು ೧೯೯೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ಚಾಮರಾಜನಗರ ಜಿಲ್ಲೆಯ ನ್ಯಾಯಾಡಳಿತ ಹಾಗೂ ಪೊಲೀಸ್ ಆಡಳಿತ ವ್ಯವಸ್ಥೆಯು ನೆರೆಯ ಮೈಸೂರು ಜಿಲ್ಲೆಯ ಮಾದರಿಯಲ್ಲಿಯೇ ರೂಪುಗೊಂಡಿದೆ. ಪ್ರಸ್ತುತ ಚಾಮರಾಜನಗರ ಜಿಲ್ಲೆಯ ನ್ಯಾಯಾಡಳಿತ ವ್ಯವಸ್ಥೆಯ ಪ್ರಮುಖ ಘಟಕಗಳಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ, ಪೊಲೀಸ್ ಠಾಣೆ ಹಾಗೂ ಪೊಲೀಸ್ ಔಟ್‌ಪೋಸ್ಟುಗಳು, ಜಿಲ್ಲಾ ಸತ್ರ ನ್ಯಾಯಾಲಯಗಳು, ಜಿಲ್ಲಾ ಕಾರಾಗೃಹ, ಲೋಕಾಯುಕ್ತ ಕಚೇರಿ, ಮುಂತಾದವು ಜಿಲ್ಲೆಯಲ್ಲಿ ಶಾಂತಿ, ಮತ್ತು ಕಾನೂನು ಪರಿಪಾಲನಾ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ.

**ಐತಿಹಾಸಿಕ ಹಿನ್ನೆಲೆ:** ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಿತವಾಗಿರುವಂತೆ, ರಾಜನನ್ನು ದೇವರೆಂದೇ ಭಾವಿಸಿದ್ದ ಆ ಕಾಲದಲ್ಲಿ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆಗಳು ಅರಸನ ಆದ್ಯ ಕರ್ತವ್ಯವಾಗಿದ್ದು, ನ್ಯಾಯಾಡಳಿತದ ಪರಮಾಧಿಕಾರವನ್ನು ಹೊಂದಿದ್ದ ಆಳರಸನು, ಅದನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದು, ಅವನ ನೆರವಿಗೆ ಗ್ರಾಮ, ನಾಡು ಹಾಗೂ ವಿಭಾಗೀಯ ಮಟ್ಟದಲ್ಲಿ ಕ್ರಮವಾಗಿ ಗೌಡ, ನಾಡಗೌಡ, ಹಾಗೂ ರಾಜ್ಯಪಾಲರು ಇರುತ್ತಿದ್ದರು. ಸಾಮಾನ್ಯ ಪ್ರಜೆಯಿಂದ ಮೊದಲುಗೊಂಡು ಉನ್ನತಾಧಿಕಾರಿಗಳವರೆವಿಗೂ ಜನರಲ್ಲಿ ನೀತಿ, ನ್ಯಾಯ, ಗೌರವ, ಆದರ, ಸನ್ನಡತೆ ಮುಂತಾದ ಸದ್ಗುಣಗಳು ಪ್ರಕೃತಿದತ್ತವಾಗಿದ್ದು, ಇವುಗಳನ್ನು ಯಾರೂ ಮೀರದಂತಹ ಧಾರ್ಮಿಕ ನೆಲೆಗಟ್ಟು ಸಾಮಾಜಿಕ ಕಟ್ಟುಪಾಡು ನ್ಯಾಯಾಂಗದ ನೀತಿಕಟ್ಟು ಹಾಗೂ ನೈತಿಕ ಚೌಕಟ್ಟುಗಳು ಕ್ರಿಯಾಶೀಲವಾಗಿದ್ದವು. ಆದುದರಿಂದ ನ್ಯಾಯಪರಿಪಾಲನೆ ಇಂದಿನಂತೆ ಒಂದು ಸಾಮಾಜಿಕ ಸಮಸ್ಯೆಯಾಗಿರಲಿಲ್ಲ. ಆದರೂ ಇಲ್ಲಿ ಸಂಪೂರ್ಣ ರಾಮರಾಜ್ಯವನ್ನು ಕಲ್ಪಿಸಿಕೊಳ್ಳಲಾಗುವುದಿಲ್ಲ. ಏಕೆಂದರೆ ವಿವಿಧ ಪ್ರಕೃತಿ ಹಾಗೂ ಮನೋಧರ್ಮದಿಂದ ಕೂಡಿದ ಸಾಮಾಜಿಕರಲ್ಲಿ ಹಲವು ವೈರುಧ್ಯಗಳು ಪ್ರಕೃತಿ ಸಹಜವಾಗಿಯೇ ಇರುತ್ತಿದ್ದವು. ಗಂಗರ ಕಾಲದಲ್ಲಿ ಧರ್ಮಾಧ್ಯಕ್ಷ ಅಥವಾ ಧರ್ಮಾಧಿಕಾರಿ ಮತ್ತು ರಾಜ್ಯಾಧ್ಯಕ್ಷರು ನ್ಯಾಯಮೂರ್ತಿಗಳಾಗಿರುತ್ತಿದ್ದರು. ಕಂದಾಯ ವ್ಯಾಜ್ಯಗಳನ್ನು ಧರ್ಮಕರಣಿಕರು ಸಾಕ್ಷಿ ಹಾಗೂ ಪುರಾವೆಗಳಿಂದ ಪರಿಹರಿಸುತ್ತಿದ್ದರು. ಸಾಕ್ಷಿ-ಪುರಾವೆಗಳು ಇಲ್ಲದ ಸಂದರ್ಭಗಳಲ್ಲಿ 'ಅಗ್ನಿದಿವ್ಯ', 'ಜಲದಿವ್ಯ' ಮುಂತಾದ 'ಪಂಚದಿವ್ಯ' ಅಥವಾ ಸಪ್ತದಿವ್ಯ ಪ್ರಮಾಣದ ಮೂಲಕ ಪರಿಹಾರವನ್ನು ಕಂಡುಕೊಳ್ಳಲಾಗುತ್ತಿದ್ದು, ನ್ಯಾಯ

ವಿತರಣೆಗೆ ಸ್ಮೃತಿಗಳೇ ಆಧಾರವಾಗಿದ್ದವು. ಆರೋಪಿಯ ಕೈಯನ್ನು ಕುದಿಯುವ ತುಪ್ಪದಲ್ಲಿ ಅದ್ದಿಸುವ ಅಥವಾ ಬರಿಗೈಯಿಂದ ಕಾದ ಕಬ್ಬಿಣದ ಸಲಾಕೆಯನ್ನು ಹಿಡಿಸುವ ಭಯ ಒಡ್ಡಿ, ಆತನಿಂದ ಸತ್ಯ ಹೊರಬರುವಂತೆ ಮಾಡಲಾಗುತ್ತಿತ್ತು. ಇದಲ್ಲದೆ ಅಂಗೈಮೇಲೆ ಕರ್ಪೂರ ಹಚ್ಚಿಸಿ, ಇಲ್ಲವೆ ಮಕ್ಕಳ ಮೇಲೆ, ಮನೆ ದೇವರ ಮೇಲೆ ಪ್ರಮಾಣ ಮಾಡಿಸಿ, ಸತ್ಯವನ್ನು ಹೊರಗೆಡವಲಾಗುತ್ತಿತ್ತು. ಹದಿನೇಳನೇ ಶತಮಾನದ ಆದಿಯಲ್ಲಿ ರಾಮರಾಜನಾಯಕನ ಆಡಳಿತದಲ್ಲಿ ಇಂತಹ ದಿವ್ಯ ಪ್ರಮಾಣದ ಮೂಲಕ ನ್ಯಾಯ ತೀರ್ಮಾನಿಸಿದ ಉಲ್ಲೇಖ ಯಳಂದೂರಿನ ಶಾಸನವೊಂದರಲ್ಲಿ ಲಭ್ಯವಿದೆ. ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯವು ದಿವ್ಯ ಪರೀಕ್ಷಾ ಪ್ರಮಾಣಕ್ಕೆ ಹೆಸರಾಗಿದ್ದ ಅಂಶ ಈ ಶಾಸನದಿಂದ ಸ್ಪಷ್ಟವಾಗುತ್ತಿದ್ದು, ಇದನ್ನು ಆ ದೇವರ ಹೆಸರೇ ಮಾರ್ದನಿಸುತ್ತದೆ.

**ಸೋಲಿಗರ ನ್ಯಾಯ ಪದ್ಧತಿ:** ಸೋಲಿಗರ ನ್ಯಾಯ ಪದ್ಧತಿಯು ಪ್ರಾಚೀನವಾದರೂ, ಸೃಜನ ಶೀಲ ಹಾಗೂ ಕ್ರಿಯಾತ್ಮಕವಾಗಿ ರೂಪುಗೊಂಡಿದ್ದು, ಇಂದಿಗೂ ಜೀವಂತವಾಗಿದ್ದು, ಕೆಲವೇ ದಿನ ಅಥವಾ ವಾರಗಳಲ್ಲಿ ಬಿಡಿಗಾಸು ಖರ್ಚಿಲ್ಲದೆ, ನ್ಯಾಯ ಸಿಗುತ್ತದೆ. ಸೋಲಿಗ ಜನಾಂಗವು ಶಾಂತಿ ಪ್ರಿಯತೆಗೆ ಹೆಸರಾಗಿದ್ದು, ನಿಷ್ಠುರ ಭಾಷೆಯನ್ನು ಆಡದ ಇವರ ಜೀವನ ಶೈಲಿಯು ಮಾರ್ಗದರ್ಶಕವಾಗಿದೆ.

ಕಟ್ಟೇಮನೆ ಅಥವಾ ನ್ಯಾಯದಕಟ್ಟೆ ಇವರು ನ್ಯಾಯ ತೀರ್ಮಾನ ಮಾಡುವ ಸ್ಥಳ. ನ್ಯಾಯ ತೀರ್ಮಾನವನ್ನು ಕೋರಿಬಂದ ವ್ಯಕ್ತಿಯು ದೂರನ್ನು ಮೊದಲು ಕೋಲುಕಾರನಿಗೆ ಕೊಡಬೇಕು. ಆನಂತರ ಆ ದೂರು ಚಲವಾದಿ ಮತ್ತು ಯಜಮಾನ ಇಬ್ಬರಿಗೂ ತಲುಪುತ್ತದೆ. ಯಜಮಾನ, ಪಟ್ಟೆಗಾರ, ಚಲವಾದಿ, ಕೋಲುಕಾರ, ದಳವಾದಿ ಹಾಗೂ ಪೋಡಿನ ಇತರೆ ಗಣ್ಯರು ನ್ಯಾಯಕಟ್ಟೆಯಲ್ಲಿ ಸೇರುತ್ತಾರೆ. ಕೋಲುಕಾರ ವಿದ್ಯುಕ್ತವಾಗಿ ಕುಸುಮಾಲೆಯ ಮುದ್ರೆಯುಂಗುರ ಹಾಗೂ ಮೊಹರು ಪೆಟ್ಟಿಗೆಯನ್ನು ತರುತ್ತಾರೆ. ಚಿಕ್ಕ ಚಪ್ಪರವನ್ನು ನಿರ್ಮಿಸಿ, ಅದರೊಳಗೆ ಭಕ್ತಿ ಭಾವದಿಂದ ಆ ಪೆಟ್ಟಿಗೆಯನ್ನಿಡುತ್ತಾರೆ. ಅದಕ್ಕೆ ನಮಸ್ಕರಿಸಿ ಅದರ ಎದುರಿನಲ್ಲಿ ಸಭೆಯನ್ನು ಮಾಡುತ್ತಾರೆ.

ಕುಸುಮಾಲೆಯ ಮುದ್ರೆಯುಂಗುರದ ಎದುರಿನಲ್ಲಿ ಕುಳಿತ ಎಲ್ಲರ ಸಮ್ಮುಖದಲ್ಲಿ ನ್ಯಾಯ ತೀರ್ಮಾನ ಆರಂಭಗೊಳ್ಳುತ್ತದೆ. ಒಂದೇ ಪೋಡಿನ ಸಮಸ್ಯೆಯಾದರೆ ಆ ಪೋಡಿನ ಜನರು, ಅಥವಾ ಹೆಚ್ಚಿನ ಪೋಡುಗಳು ಭಾಗಿಯಾಗಿದ್ದರೆ ಆ ಎಲ್ಲಾ ಪೋಡುಗಳ ಗಣ್ಯರು ಮತ್ತು ಇತರರು ಭಾಗವಹಿಸಬೇಕಾಗಿರುತ್ತದೆ. ಕೋಲುಕಾರ ಸ್ವೀಕರಿಸಿದ ದೂರನ್ನು ಚಲವಾದಿ ಹಾಗೂ ಯಜಮಾನರಿಗೆ ತಲುಪಿಸಿದ ನಂತರ ನ್ಯಾಯ ತೀರ್ಮಾನದ ಅನುಕೂಲಕರ ದಿನವನ್ನು ಗೊತ್ತುಪಡಿಸುತ್ತಾರೆ. ಕೋಲುಕಾರನು ತಮಟೆಯೊಂದಿಗೆ ಪೋಡಿನ ಸುತ್ತ ಸುತ್ತಿ ವಿಚಾರಣಾ ದಿನವನ್ನು ಸಾರುತ್ತಾನೆ. ಆ ದಿನದಂದು ದೂರು ಕೊಟ್ಟ ವ್ಯಕ್ತಿ, ಸಾಕ್ಷಿ ನೀಡುವ ವ್ಯಕ್ತಿ ಹಾಗೂ ಆಪಾದಿತರೆಲ್ಲರೂ ಕಟ್ಟೆಮನೆಯಲ್ಲಿ ಹಾಜರಿರಲೇಬೇಕು. ಕೋಲುಕಾರನ ಎದುರು ಯಾರು ನಿಲ್ಲುವಂತಿಲ್ಲ. ನಿಂತರೆ ಅದು ಮಹಾ ಅಪರಾಧ. ಆಲಸ್ಯ, ಅನಾದರ ತೋರುವಂತಿಲ್ಲ, ಹಾಗೇ ಮಾಡಿದರೆ ಮತ್ತೊಂದು ಮಹಾಪರಾಧ. ಯಜಮಾನನು ಒಂದು ಚಾಪೆಯನ್ನು ಹಾಸಿ ಐದು ಕುಲ ಪ್ರತಿನಿಧಿಗಳಿಗೆ ವೀಳ್ಯೆದೆಲೆ ಹಂಚುತ್ತಾನೆ. ಯಜಮಾನ ಮತ್ತು ಪ್ರತಿನಿಧಿಗಳು ಪೆಟ್ಟಿಗೆಯ ಮುಂದೆ ಕುಳಿತುಕೊಂಡ ನಂತರ ವಿಚಾರಣೆ ಪ್ರಾರಂಭವಾಗುತ್ತದೆ. ಇದಕ್ಕೆ ದೇವಸಭೆ ಎನ್ನುತ್ತಾರೆ.

ಸಾಮಾನ್ಯವಾಗಿ ನ್ಯಾಯ ವಿಚಾರಣೆ ಸಂಜೆಯ ಒಳಗೆ ಮುಗಿಯುತ್ತಾದರೂ, ಕೆಲವು ಸಂದರ್ಭಗಳಲ್ಲಿ ರಾತ್ರಿಯವರೆಗೂ ನಡೆದು, ಮುಗಿಯದಿದ್ದರೆ ಮತ್ತೊಂದು ದಿನಕ್ಕೆ ಮುಂದುವರೆಯುವುದು. ಒಂದೆರಡು ವಾರಗಳಲ್ಲಿ ವಿಚಾರಣೆ ಮುಗಿದು ನ್ಯಾಯ ತೀರ್ಮಾನವಾಗುತ್ತದೆ.

ಸಮುದಾಯದ ಆಳವಾದ ಅನುಭವ ಹಾಗೂ ಹೃದಯವಂತಿಕೆಯೊಡನೆ ನ್ಯಾಯ ಹೊರಬರುತ್ತದೆ. ಅಪರಾಧಿಯ ವಯಸ್ಸು, ಒತ್ತಡ ಹಾಗೂ ಸಂದರ್ಭಗಳನ್ನು ಗಮನದಲ್ಲಿಸಿಕೊಳ್ಳಲಾಗುತ್ತದೆ. ಮಕ್ಕಳಿಗೆ ಹಾಗೂ ಸ್ತ್ರೀಯರಿಗೆ ಮೃದು ಧೋರಣೆ ತಾಳಲಾಗುತ್ತದೆ. ಆಪಾದಿತರು ಪಾದರಕ್ಷೆಗಳನ್ನು ದೂರದಲ್ಲಿ ಬಿಟ್ಟು ಬಂದು ಮಾತನಾಡಬೇಕು. ಮಾತಿನಲ್ಲಿ ನಯ ವಿನಯ, ಗೌರವಗಳಿರಬೇಕು. ಕೆಟ್ಟ ಮಾತುಗಳನ್ನು ಆಡುವಂತಿಲ್ಲ ಕೂಲಂಕುಶ ವಿಚಾರಣೆ ಹಾಗೂ ಚರ್ಚೆಗಳ ನಂತರ ಪದಾಧಿಕಾರಿಗಳೆಲ್ಲರೂ ಒಪ್ಪಿದ ತೀರ್ಮಾನಗಳನ್ನು ಯಜಮಾನರು ಘೋಷಿಸುತ್ತಿದ್ದು, ತಪ್ಪಿತಸ್ಥರಿಗೆ ದಂಡ ಹಾಕುವುದು ರೂಢಿಯಲ್ಲಿದೆ. ದಂಡವು ಪ್ರಾರಂಭಿಕವಾಗಿ ₹ ೧೦೦೧ರಷ್ಟು ಇದ್ದರೂ ತಪ್ಪಿತಸ್ಥನ ವಿನಂತಿಯ ನಂತರ ₹ ೧೦೦ ಹಾಗೂ ₹ ೫೦ಗಳಿಗೆ ಇಳಿಯುತ್ತಿತ್ತು. ಎದುರಾಳಿ ಪಕ್ಷದಲ್ಲಿರುವ ವ್ಯಕ್ತಿಗಳಿಗೆ "ಒಮ್ಮ ಸೊಮ್ಮಗಿರಿ" (ಒಂದಾಗಿ ಇರಿ) ಎಂಬ ನುಡಿಗಳನ್ನು ಹೇಳುತ್ತಿದ್ದರು.

ಹಿಂದಿನ ಕಾಲದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಗಳು ಕಠೋರವಾಗಿರುತ್ತಿದ್ದವು. ಸೊಂಟಕ್ಕೆ ನಾರು ಕಟ್ಟಿ ನೇತು ಹಾಕಿ ಹೊಡೆಯುವುದು, ಮೈಗೆ ಜೇನು ಬಳಿದು ಇರುವೆ ಗೂಡಿನ ಮೇಲೆ ಕೂರಿಸುವುದು, ಕಾದ ಕಬ್ಬಿಣವನ್ನು ಕೈಯಲ್ಲಿ ಹಿಡಿಸುವುದು ಇತ್ಯಾದಿ. ಈಗ ನಾಲ್ಕು ಛಡಿಯೇಟು, ಜಾತಿಯಿಂದ ಹೊರ ಹಾಕುವುದು, ದಂಡ ಹಾಕುವುದನ್ನು ಸಾಮಾನ್ಯವಾಗಿ ವಿಧಿಸುವರು. ಹಿಂದೆ ತಪ್ಪಿತಸ್ಥರಿಗೆ " ಕೈಲಿ ಕಕ್ಕೆ ಸೊಪ್ಪು ಕೊಟ್ಟು ದನಿನ ಮೂಳೆ ಸರ" ಹಾಕುತ್ತಿದ್ದರಂತೆ. ಇವರು "ಜನಕ್ಕಿಲ್ಲ, ಜಾತಿಗಿಲ್ಲ, ಕುಲಕ್ಕಿಲ್ಲ, ಕೂಟಕ್ಕಿಲ್ಲ, ಇವರ ಹತ್ತಿರ ಬೆಂಕಿ, ಬಿಸಿನೀರು ಎತ್ತಬೇಡಿ" ಎಂದು ಕಟ್ಟಪ್ಪಣೆ ಮಾಡುತ್ತಿದ್ದರು. ಈಗೀಗ ಬೇರೆ ಜಾತಿಯವರೊಡನೆ ವಿವಾಹವಾಗುವುದನ್ನು ಉದಾರತೆಯಿಂದ ಸ್ವೀಕರಿಸುತ್ತಾರೆ. ನ್ಯಾಯದ ದುಡ್ಡಿನಲ್ಲಿ ಒಮ್ಮೊಮ್ಮೆ ತಾಯಿ ಕುಸುಮಾಲೆಗೆ ಪೂಜೆ ಮಾಡಿ ಕೋಳಿ ಊಟ ಮಾಡಿಸುತ್ತಿದ್ದರು.

ಪರಸ್ಪರರ ವೈಮನಸ್ಸನ್ನು ಹೋಗಲಾಡಿಸಲು ಒಬ್ಬರಿಗೊಬ್ಬರು ವೀಳ್ಯ ಕೊಟ್ಟು ಕೈಗಳನ್ನು ಹಿಡಿದುಕೊಳ್ಳುವ ರೀತಿ ನೀತಿ ಗಿರಿಜನರ ಬದುಕಿನ ಮುಗ್ಧತೆಯನ್ನು ತೋರಿಸುತ್ತದೆ. ಅವರ ನ್ಯಾಯ ಪದ್ಧತಿಯಲ್ಲಿ 'ಕಟ್ಟು' ಎನ್ನುವ ವಿಶೇಷ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಕಟ್ಟು ಎಂದರೆ ನಿಯಮದಂತೆ ನಡೆದುಕೊಳ್ಳುವುದು. ಒಳ್ಳೆಯ ನಡತೆಯನ್ನು ಸಾಬೀತುಪಡಿಸಲು ಕಾಲಾವಕಾಶ ನೀಡುತ್ತಾರೆ. ಕಟ್ಟಿಗೆ ಒಳಗಾದವರ ಹತ್ತಿರವೇ ವಾಸ ಮಾಡುವ ಇಬ್ಬರು ಹಿರಿಯರನ್ನು ಆಯ್ಕೆ ಮಾಡಿ ಅವರಿಂದ ಭಾಷೆ ಹಾಕಿಸಿ ಒಳ್ಳೆಯ ನಡತೆಯನ್ನು ಒಂದು ತಿಂಗಳೊಳಗೆ ಪ್ರದರ್ಶಿಸಲು ಗಡುವು ನೀಡುತ್ತಾರೆ. ಹಿರಿಯರಿಬ್ಬರು ಕಷ್ಟಪಟ್ಟು ಅವರವರ ವಾರಸುದಾರರನ್ನು ಸನ್ಮಾರ್ಗಕ್ಕೆ ತರುವ ಹೊಣೆ ಹೊರುತ್ತಾರೆ. ಒಂದು ತಿಂಗಳಿನ ನಂತರ ನ್ಯಾಯಸಭೆ ಸೇರಿ 'ಒಮ್ಮ ಸೊಮ್ಮಾಗಿರಿ" ಎಂದು ತೀರ್ಮಾನಿಸಿ ನ್ಯಾಯ ಬಗೆಹರಿಸುತ್ತಾರೆ. ಇಲ್ಲಿ ಹಿರಿಯರ ಸಾಧನೆಯನ್ನು ನೋಡಬಹುದು. ಸಾಮಾನ್ಯವಾಗಿ ಗಂಡಸರಿಗೆ ದಂಡ ವಿಧಿಸಲಾಗುತ್ತದೆ. ಆದರೆ ಹೆಣ್ಣಿಗೆ ದಂಡ ಇರುವುದಿಲ್ಲ. ಬುದ್ಧಿ ಹೇಳುವುದು, ಛೀಮಾರಿ ಹಾಕುವುದು ಎಲ್ಲರಿಗೂ ಇರುತ್ತದೆ.

**ಕಂಬಳಿ ಗದ್ದುಗೆ:** ನ್ಯಾಯಸಭೆಯ ಪ್ರಾರಂಭದಲ್ಲಿ ದಂಡ ಹಾಕಲ್ಪಟ್ಟ ವ್ಯಕ್ತಿಯು ಕಳಸ, ನೀರು, ಹೂ, ವೀಳ್ಯದೆಲೆ, ತೆಂಗಿನ ಕಾಯಿ ಇಟ್ಟು, ನಂತರ ಐದು ಕುಲಕ್ಕೆ ಧಾರೆ ಎರೆಯುತ್ತಾನೆ. ನಂತರ ಯಜಮಾನರು ಕಂಬಳಿ ಗದ್ದುಗೆ ಹಾಸುತ್ತಾರೆ. ದಂಡ ಹಾಕಲ್ಪಟ್ಟವರು ಮೂರು ಸಾರಿ ಪಂಚಾಯಿತಿಗೆ ಅಡ್ಡ ಬೀಳಬೇಕು.

**ಪ್ರಾಯಶ್ಚಿತ್ತ:** ಕುಲ ಬಿಟ್ಟು ಹೊರ ಹೋದವರು, ಬೇರೆಯವರಿಂದ ಪಾದರಕ್ಷೆ ಏಟು ತಿಂದವರು ಪ್ರಾಯಶ್ಚಿತ್ತ ರೂಪದಿಂದ ಪುನಃ ಸಮುದಾಯಕ್ಕೆ ಸೇರಬಹುದು. ಪ್ರಾಯಶ್ಚಿತ್ತ ಮಾಡಿಕೊಳ್ಳುವ ಸಂದರ್ಭದಲ್ಲಿ ಆ ವ್ಯಕ್ತಿಯು ನುಣ್ಣಗೆ ತಲೆ ಬೋಳಿಸಿಕೊಂಡು ಹಳ್ಳದಲ್ಲಿ ಮಿಂದು ಏಳು ಬಣ್ಣದ ತೆರೆಗಳನ್ನು ದಾಟಬೇಕು. ಹೀಗೆ ದಾಟಿಸುವ ಕೆಲಸವನ್ನು ಕೋಲುಕಾರ ಹಾಗೂ ಚಲವಾದಿ ಇಬ್ಬರು ಏಳು ದೇವರುಗಳ ಬಳಿ ಮಾಡುತ್ತಾರೆ. ಪ್ರತಿ ಬಾರಿ ತೆರೆ ಹಾರಿಸುವಾಗಲೂ ಒಂದೊಂದಾಗಿ ತೊಪ್ಪೆ, ಸಗಣಿ ನೀರು, ತುಳಸಿ ನೀರು, ನಾಮದ ನೀರು, ಅರಿಶಿನದ ನೀರು, ಹೀಗೆ ಬಣ್ಣದ ನೀರನ್ನು ಹಾಕಿಸಿಕೊಂಡ ಮೇಲೆ ಆ ನೀರನ್ನು ಕುಡಿಯುತ್ತಾರೆ. ಅಲ್ಲಿಗೆ ಆತನ ಕಾಟ–ಕರ್ಮ ಕಳೆಯುತ್ತದೆ. ಎಲ್ಲರೂ ಕೂತು ಊಟ ಮಾಡಿ ಸಭೆ ಮುಗಿಸುತ್ತಾರೆ.

ಅತಿ ಜಾಣ್ಮೆಯಿಂದ ರೂಪಿಸಿರುವ ಇಂತಹ ನ್ಯಾಯ ಪದ್ಧತಿಯನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಸಾಧ್ಯವಾದಷ್ಟು ಕಾನೂನಿನ ವ್ಯಾಪ್ತಿಯಲ್ಲಿ ಸ್ವಾಯತ್ತತೆ ನೀಡಿದಲ್ಲಿ ಇಂತಹ ನ್ಯಾಯ ಪದ್ಧತಿಯನ್ನು ಆಳಿಸಿ ಹೋಗದಂತೆ ಕಾಪಾಡಬಹುದು.

ಸುವ್ಯವಸ್ಥಿತ ನ್ಯಾಯಾಡಳಿತ ಕ್ರಮ ಜಾರಿಯಾಗುವ ಪೂರ್ವದಲ್ಲಿ ಜಿಲ್ಲೆಯಲ್ಲಿ ಗ್ರಾಮೀಣ ನ್ಯಾಯಾಡಳಿತ ಜಾರಿಯಲ್ಲಿತ್ತು. ದಿನನಿತ್ಯ ಸಾಮಾಜಿಕವಾಗಿ ಉದ್ಭವಿಸುತ್ತಿದ್ದ ಸಣ್ಣ ಪುಟ್ಟ ಜಗಳ, ಭಿನ್ನಾಭಿಪ್ರಾಯಗಳನ್ನು ಜನ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು. ಇಲ್ಲವೇ ಜಾತಿಯ ಹಿರಿಯರ (ಕಟ್ಟೆಮನೆ) ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಈ ವಿವಾದಗಳು ಹಲವು ಹಂತಗಳಲ್ಲಿ ನಡೆಯುತ್ತಿತ್ತು. ಆಯಾ ಗ್ರಾಮದ ಹಿರಿಯರ ಮುಂದೆ ತೀರ್ಮಾನವಾಗದ ವ್ಯಾಜ್ಯಗಳು ಹಳ್ಳಿಗಳ ಹಿರಿಯರ ಕೂಟಕ್ಕೆ ಹೋಗಿ, ಅಲ್ಲಿಯೂ ಆಗದಿದ್ದಲ್ಲಿ, ಹೋಬಳಿ ಮಟ್ಟದ ಹಿರಿಯರಲ್ಲಿಗೆ ಒಯ್ಯಲ್ಪಡುತ್ತಿದ್ದವು. ಈ ಹಂತದಲ್ಲಿಯೂ ಪರಿಹಾರವಾಗದೆ ಮುಂದುವರೆದಲ್ಲಿ, ಅವುಗಳನ್ನು ರಾಜನ ಆಸ್ಥಾನದ ನ್ಯಾಯಾಧೀಶರು ಬಗೆಹರಿಸುತ್ತಿದ್ದರು. ಈ ಮಟ್ಟ ಮುಟ್ಟಿದ ವ್ಯಾಜ್ಯಗಳು ಗಂಭೀರ ಸ್ವರೂಪದ್ದಾಗಿರುತ್ತಿದ್ದವು. ಆದರೆ ತಂತಮ್ಮ ಹಳ್ಳಿಯ ಮರ್ಯಾದೆ ಕಾಪಾಡಿಕೊಳ್ಳುವ ದೃಷ್ಟಿಯಿಂದ ಹಳ್ಳಿಯ ಹಿರಿಯರು ವ್ಯಾಜ್ಯಗಳನ್ನು ಆ ಮಟ್ಟದವರೆವಿಗೂ ಬೆಳೆಯಲು ಬಿಡುತ್ತಿರಲಿಲ್ಲ.

ನ್ಯಾಯಮೂರ್ತಿಗಳ ಸ್ಥಾನದಲ್ಲಿ ಕುಳಿತುಕೊಳ್ಳುವ ಹಿರಿಯರು ಸಮಾಜದ ವಿವಿಧ ಸ್ತರ, ಜಾತಿ, ಕೇರಿಗಳಿಗೆ ಸೇರಿದವರಾಗಿದ್ದು, ಈ ವಿಷಯದಲ್ಲಿ ಸಮಾನತೆಯನ್ನು ಕಾಪಾಡಿಕೊಳ್ಳಲಾಗುತ್ತಿತ್ತು. ನ್ಯಾಯ ನಿರ್ಣಾಯಕಾರರಾಗುವವರು ತಕ್ಕಮಟ್ಟಿಗೆ ಅನುಭವಸ್ಥರೂ ಬುದ್ಧಿವಂತರೂ, ವಾಕ್ ಚತುರರೂ, ವೈಯಕ್ತಿಕ ವರ್ಚಸ್ಸುಳ್ಳವರೂ ಆಗಿರುತ್ತಿದ್ದರು. ಹಲವೆಡೆ ಈ ಗೌರವ ಪದವಿ ಅನುವಂಶೀಯವಾಗಿರುತ್ತಿತ್ತು. ಇಂತಹ ಹಿರಿಯರನ್ನೊಳಗೊಂಡ ಸಭೆಯನ್ನು 'ಪಂಚಾಯ್ತಿ ಕಟ್ಟೆ' ಎನ್ನಲಾಗುತ್ತಿದ್ದು, ಪ್ರಾಚೀನ ಶಾಸನಗಳಲ್ಲಿ ಗ್ರಾಮ ಸಭೆಗಳ ಉಲ್ಲೇಖಗಳು ಸಾಕಷ್ಟು ಸಂಖ್ಯೆಯಲ್ಲಿ ಲಭಿಸುತ್ತವೆ.

ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗುವವರೆಗೆ ಮೇಲ್ಕಂಡ ನ್ಯಾಯಾಡಳಿತ ಪದ್ಧತಿ ಪ್ರಚಲಿತದಲ್ಲಿದ್ದಿತು. ಹೈದರ್ ಮತ್ತು ಟಿಪ್ಪು ಕಾಲದಲ್ಲಿಯೂ ಸಹ ಮೈಸೂರರಸರು ಅನುಸರಿಸಿದ ನ್ಯಾಯಾಡಳಿತ ಪದ್ಧತಿಯೇ ಜಾರಿಯಲ್ಲಿದ್ದಿತು. ಆದರೆ ಮುಸ್ಲಿಂ ಜನರಿಗಾಗಿ ಖಾಜಿಗಳನ್ನೊಳಗೊಂಡ ನ್ಯಾಯವ್ಯವಸ್ಥೆಯು ಚಲಾವಣೆಗೆ ಬಂದಿತು. ಕಂದಾಯ ಅಧಿಕಾರಿಗಳು ನ್ಯಾಯಾಡಳಿತ ಅಧಿಕಾರವನ್ನೂ ಹೊಂದಿದ್ದರು. 'ಅಮಲ್' ಮತ್ತು 'ತಹಸೀಲ್'ಗಳಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ಪರಿಹರಿಸಲಾಗುತ್ತಿತ್ತು. ಆ ಕಾಲದಲ್ಲಿ ಮೈಸೂರಿನಲ್ಲಿ ಮಹಮ್ಮದೀಯ ನ್ಯಾಯಾಡಳಿತದಂತೆ ಒಂದು 'ಸದರ್' (ಮುಖ್ಯ) ನ್ಯಾಯಾಲಯವು ಸ್ಥಾಪನೆಯಾಯಿತು. ಹಲವೆಡೆ ಮುಸ್ಲಿಮರ ವ್ಯಾಜ್ಯ ಪರಿಹಾರವು 'ಖಾಜಿ' ಗಳಿಂದ ನಡೆಯುತ್ತಿತ್ತು.

ಬ್ರಿಟಿಷ್ ಕಮೀಷನರುಗಳ ಆಡಳಿತಾವಧಿಯಲ್ಲಿ ಸ್ಥಳೀಯ ನ್ಯಾಯಾಡಳಿತ ಪದ್ಧತಿಯು ಸಾಕಷ್ಟು ಬದಲಾವಣೆಗೊಂಡು, ೧೮೩೪ರಲ್ಲಿ ಜಾರಿಯಾದ ಆಜ್ಞೆಯಂತೆ ವಿಧಿವತ್ತಾದ ಅಮಲ್, ಟೌನ್ ಮುನ್ಸಿಫ್, ಸದರ್ ಮುನ್ಸಿಫ್, ಪ್ರಿನ್ಸಿಪಲ್ ಸದರ್ ಮುನ್ಸಿಫ್ ಹಾಗೂ ಯೂರೋಪಿಯನ್ ಸೂಪರಿಂಟೆಂಡೆಂಟರ ನ್ಯಾಯಾಲಯಗಳು ಸ್ಥಾಪನೆಗೊಂಡವು. ಅಮಲ್ ಹಾಗೂ ಟೌನ್ ಮುನ್ಸಿಫ್ ನ್ಯಾಯಾಲಯಗಳಿಗೆ ಮೂಲ ನ್ಯಾಯವ್ಯಾಪ್ತಿ ನೀಡಲಾಗಿತ್ತು. ಮೈಸೂರು ಟೌನ್ ಮುನ್ಸೀಫ್‌ರಿಗೆ ಅಮಲ್ ಮುನ್ಸಿಫರ ಅಧಿಕಾರ ದತ್ತವಾಗಿದ್ದಿತು. ಎಲ್ಲಾ ನ್ಯಾಯಾಲಯಗಳ ನಿರ್ಣಯಗಳು ಲಿಖಿತ ರೂಪದಲ್ಲಿ ಉಲ್ಲೇಖಿಸಲ್ಪಡುತ್ತಿದ್ದವು. ಪ್ರಿನ್ಸಿಪಲ್ ಸದರ್ ಮುನ್ಸಿಫ್ ಹಾಗೂ ಯೂರೋಪಿಯನ್ ಸೂಪರಿಂಟೆಂಡೆಂಟರ ನ್ಯಾಯಾಲಯಗಳು ಮೂಲ ಹಾಗೂ ಮೇಲ್ಮನವಿಯ ನ್ಯಾಯವ್ಯಾಪ್ತಿಯನ್ನು ಹೊಂದಿದ್ದವು. ೧೮೬೨–೧೮೮೨ರ ದಶಕಗಳಲ್ಲಿ ನ್ಯಾಯಾಡಳಿತ ವ್ಯವಸ್ಥೆಯಲ್ಲಿ ಹಲವಾರು ಮಾರ್ಪಾಡುಗಳನ್ನು ತರಲಾಯಿತು. ತತ್ಪರಿಣಾಮವಾಗಿ ಹುಜೂರ್ ಅದಾಲತ್ ಹಾಗೂ ಮುನ್ಸಿಫ್ ನ್ಯಾಯಾಲಯಗಳು ರದ್ದಾದವು. ನ್ಯಾಯಾಡಳಿತದ ಕ್ರಮದಲ್ಲಿ ಉನ್ನತ ಮಟ್ಟದಲ್ಲಿ ಜ್ಯುಡಿಷಿಯಲ್ ಕಮಿಷನರರು, ನಂತರ ವಿಭಾಗೀಯ ಸೂಪರಿಂಟೆಂಡೆಂಟರು, ಉಪಸೂಪರಿಂಟೆಂಡೆಂಟ್‌ರವರು ಮತ್ತು ತಾಲೂಕು ಅಮಲ್ದಾರರು ಕಾರ್ಯನಿರ್ವಹಿಸುವಂತಾಯಿತು. ಅಮಲ್ದಾರರಿಗೆ ಸಹಾಯಕರಾಗಿ ಪೇಷ್ಕಾರ್‌ರನ್ನು ನೇಮಿಸಲಾಯಿತು. ಕೆಲವು ಯೋಗ್ಯ ಪೇಷ್ಕಾರರಿಗೆ ಎರಡನೇ ದರ್ಜೆ ಸಬ್–ಮ್ಯಾಜಿಸ್ಟ್ರೇಟರ ಅಧಿಕಾರವನ್ನೂ ನೀಡಲಾಗಿತ್ತು.

ಮೈಸೂರು ಸಿವಿಲ್ ನ್ಯಾಯಾಲಯಗಳ ಕಾನೂನು, ೧೬ನೇ ಜೂನ್ ೧೮೮೩ರಲ್ಲಿ ಜಾರಿಯಾಗಿ, ಅದರಂತೆ ಜಿಲ್ಲಾ ನ್ಯಾಯಾಲಯ, ಸಬಾರ್ಡಿನೇಟ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮುನ್ಸಿಫ್ ನ್ಯಾಯಾಲಯ ಎಂಬ ಮೂರು ದರ್ಜೆಯ ಸಿವಿಲ್ ನ್ಯಾಯಾಲಯಗಳು ಸ್ಥಾಪನೆಗೊಂಡವು. ಈ ನ್ಯಾಯಾಲಯಗಳ ನ್ಯಾಯಮೂರ್ತಿಗಳನ್ನು ಸರಕಾರ ನೇಮಿಸಿದರೆ, ಮುನ್ಸಿಫ್ ದರ್ಜೆಯ ಇತರ ಅಧಿಕಾರಿಗಳನ್ನು ಮುಖ್ಯ ನ್ಯಾಯಮೂರ್ತಿಗಳು ನೇಮಿಸುತ್ತಿದ್ದರು. ಜಿಲ್ಲಾ ನ್ಯಾಯಾಲಯವು ಎಲ್ಲಾ ರೀತಿಯ ಮೂಲ ದಾವೆಗಳನ್ನು ಪರಿಹರಿಸುವ ನ್ಯಾಯವ್ಯಾಪ್ತಿಯನ್ನು ಹೊಂದಿದ್ದಿತು. ಜಿಲ್ಲಾ ನ್ಯಾಯಾಲಯಕ್ಕಿಂತ ಕೆಳಮಟ್ಟದ ನ್ಯಾಯಾಲಯಗಳ ಆಡಳಿತಾತ್ಮಕ ಹತೋಟಿಯನ್ನು ಮುಖ್ಯ ನ್ಯಾಯಾಲಯವು ಹೊಂದಿದ್ದು, ಅಧೀನ ನ್ಯಾಯಾಲಯಗಳ ಆರ್ಥಿಕ ವ್ಯಾಪ್ತಿ ₹ ೫,೦೦೦/–ಗಳಾದರೆ ಮುನ್ಸಿಫ್ ನ್ಯಾಯಾಲಯಗಳ ಆರ್ಥಿಕ ವ್ಯಾಪ್ತಿ ₹ ೧,೦೦೦ ಗಳಾಗಿದ್ದಿತು. ಜಾತಿ, ವಿವಾಹ, ಆಸ್ತಿ, ಧರ್ಮ ಮುಂತಾದ ವಿವಾದಗಳಿಗೆ ಸಂಬಂಧಿಸಿದಂತೆ, ಆರೋಪಿಗಳ ಧರ್ಮವನ್ನನುಸರಿಸಿ, ಹಿಂದೂ ಕಾನೂನು ಹಾಗೂ ಮುಸ್ಲಿಂ ಕಾನೂನುಗಳಡಿ ನ್ಯಾಯ ನಿರ್ಣಯವಾಗುತ್ತಿತ್ತು. ಹಲವೆಡೆ ಈ ಎರಡೂ ಕಾನೂನುಗಳು ಅನ್ವಯಿಸದಿದ್ದಲ್ಲಿ, ಸಹಜ ಸಾಮಾಜಿಕ ಹಾಗೂ ನೈತಿಕತೆಗಳನ್ನವಲಂಬಿಸಿ, ನ್ಯಾಯ ನಿರ್ಣಯ ಮಾಡಲಾಗುತ್ತಿತ್ತು.

ಕ್ರಿಮಿನಲ್ ಪ್ರಕರಣಗಳ ನ್ಯಾಯ ನಿರ್ಣಯದಲ್ಲಿ, ನ್ಯಾಯ ವ್ಯಾಪ್ತಿಯನ್ನು ಜಿಲ್ಲಾ ಮಟ್ಟದಲ್ಲಿ ಡೆಪ್ಯೂಟಿ ಸೂಪರಿಂಟೆಂಡೆಂಟ್, ತಾಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಹಾಗೂ ಅಮಲ್ದಾರರೂ ಹೊಂದಿದ್ದರು. ೧೮೯೮ರಲ್ಲಿ ರಾಜ್ಯದಾದ್ಯಂತ ಅಪರಾಧ ದಂಡ ಸಂಹಿತೆ (ಕ್ರಿಮಿನಲ್ ಪ್ರೊಸೀಜರ್ ಕೋಡ್) ಜಾರಿಯಾಗಿ ತಾಲೂಕು ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಮುನ್ಸೀಫರಿಗೆ ನೀಡಲಾಯಿತು. ಕ್ರಿಮಿನಲ್ ಕೋರ್ಟುಗಳು ಅನುಕ್ರಮವಾಗಿ ಸೆಷನ್ಸ್ ಜಡ್ಜ್, ಅಸಿಸ್ಟೆಂಟ್ ಸೆಷನ್ಸ್ ಜಡ್ಜ್, ಜಿಲ್ಲಾ ಮ್ಯಾಜಿಸ್ಟ್ರೇಟ್, ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟ್, ಎರಡನೇ ಹಾಗೂ ಮೂರನೇ ದರ್ಜೆ ಮ್ಯಾಜಿಸ್ಟ್ರೇಟ್ ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೧೯೪೦ರಲ್ಲಿ ಮೈಸೂರಿನಲ್ಲಿ ಸೆಷನ್ಸ್ ನ್ಯಾಯಾಲಯವು ಸ್ಥಾಪಿಸಲ್ಪಟ್ಟು, ಇದು ಮೈಸೂರು ಹಾಗೂ ಹಾಸನ ಜಿಲ್ಲೆಗಳ ನ್ಯಾಯ ವ್ಯಾಪ್ತಿಯನ್ನು ಹೊಂದಿತ್ತು. ೧೯೪೨–೪೩ರಲ್ಲಿ ಮೈಸೂರಿನಲ್ಲಿ ಅಡಿಷನಲ್ ಸೆಷನ್ಸ್

ನ್ಯಾಯಾಲಯ ಸ್ಥಾಪನೆಗೊಂಡಿತು. ತದನಂತರ ಸ್ಥಾಪನೆಗೊಂಡ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಲಯದಲ್ಲಿ ಸೆಷನ್ಸ್ ನ್ಯಾಯಾಲಯದಿಂದ ವರ್ಗಾವಣೆಗೊಂಡ ಪ್ರಕರಣಗಳನ್ನು ಆಲಿಸಲಾಗುತ್ತಿತ್ತು.

ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಕರ್ತವ್ಯಗಳನ್ನು ಬೇರ್ಪಡಿಸಲು ೧೯೦೭ರಲ್ಲಿ ಪ್ರಾಯೋಗಿಕವಾಗಿ ಮೈಸೂರಿನ ಅಮಲ್ದಾರರ ದಂಡಾಧಿಕಾರವನ್ನು ರದ್ದುಪಡಿಸಿ, ಅದನ್ನು ನಗರ ಮ್ಯಾಜಿಸ್ಟ್ರೇಟರಿಗೆ ನೀಡಲಾಯಿತು. ಗಂಭೀರ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಗೊಳಿಸುವ ಸಲುವಾಗಿಯೇ ಸರಕಾರ ಹಂಗಾಮಿ ನ್ಯಾಯಾಲಯಗಳನ್ನು ಸ್ಥಾಪಿಸಿತು. ಇಂತಹ ನ್ಯಾಯಾಲಯವು ಯಳಂದೂರಿನಲ್ಲಿ, ಆ ತಾಲೂಕಿನ ಹೊನ್ನೂರಿನಲ್ಲಿ ೧೯೨೫-೨೬ರಲ್ಲಿ ನಡೆದ ರೈತರ ಗಲಭೆಗಳನ್ನು ಆಲಿಸುವ ಸಲುವಾಗಿಯೇ ಸ್ಥಾಪನೆಗೊಂಡಿತು. ನ್ಯಾಯಾಂಗ ಹಾಗೂ ಕಾರ್ಯಾಂಗಗಳ ಕರ್ತವ್ಯಗಳನ್ನು ಬೇರ್ಪಡಿಸುವ ಯೋಜನೆಯ ಮುಂದುವರಿದ ಕಾರ್ಯಕ್ರಮವಾಗಿ ೧೯೨೫ರಲ್ಲಿ ತಾಲೂಕು ಮಟ್ಟದಲ್ಲಿ ಸ್ವತಂತ್ರ ಮ್ಯಾಜಿಸ್ಟ್ರೇಟರ (ಎರಡನೇ ದರ್ಜೆ) ನ್ಯಾಯಾಲಯ ಹಾಗೂ ಜಿಲ್ಲಾ ಮಟ್ಟದಲ್ಲಿ ಮ್ಯಾಜಿಸ್ಟ್ರೇಟ್ (ಪ್ರಥಮ ದರ್ಜೆ) ನ್ಯಾಯಾಲಯಗಳು ಸ್ಥಾಪನೆಗೊಂಡವು. ಅಸಿಸ್ಟೆಂಟ್ ಕಮೀಷನರು ಪದನಿಮಿತ್ತ ಮ್ಯಾಜಿಸ್ಟ್ರೇಟರಾಗಿ ಪೊಲೀಸ್ ಅಧಿಕಾರವನ್ನು ಮಾತ್ರ ಹೊಂದಿದ್ದರು. ಡೆಪ್ಯುಟಿ ಕಮೀಷನರಿಗೆ ನ್ಯಾಯಾಂಗ (ಜುಡಿಷಿಯರಿ) ಅಧಿಕಾರವೂ ದತ್ತವಾಗಿತ್ತು. ಜಿಲ್ಲೆಯ ವಿವಿಧ ಸ್ತರದ ಮ್ಯಾಜಿಸ್ಟ್ರೇಟರೂ ಜಿಲ್ಲಾ ಮ್ಯಾಜಿಸ್ಟ್ರೇಟರ ಆಡಳಿತಕ್ಕೊಳಪಟ್ಟಿದ್ದರು. ಸಂವಿಧಾನ ಜಾರಿಯಾದ ನಂತರ ನ್ಯಾಯಾಂಗ ಹಾಗೂ ಕಾರ್ಯಾಂಗಗಳು ಬೇರ್ಪಟ್ಟು, ಮ್ಯಾಜಿಸ್ಟ್ರೇಟರು ಉಚ್ಚ ನ್ಯಾಯಾಲಯದ (ಆಗಿನ ಚೀಫ್ ಕೋರ್ಟ್) ಆಡಳಿತ ವ್ಯಾಪ್ತಿಗೆ ಒಳಪಟ್ಟರು. ರಾಜ್ಯ ಪುನರ್ವಿಂಗಡಣೆಯ ಪೂರ್ವದಲ್ಲಿ ಈ ಜಿಲ್ಲೆಯ ಕೊಳ್ಳೇಗಾಲ ತಾಲೂಕು, ಮದ್ರಾಸ್ ರಾಜ್ಯದ ಕೊಯಂಬತ್ತೂರು ಜಿಲ್ಲೆಗೆ ಸೇರಿದ್ದು, ಈ ತಾಲೂಕು ಸೇರಿದಂತೆ, ಸತ್ಯಮಂಗಲದ ವಾಯವ್ಯ ಪ್ರಾಂತವೂ ಅದರ ನ್ಯಾಯವ್ಯಾಪ್ತಿಗೆ ಒಳಪಟ್ಟಿತ್ತು. ಕೊಳ್ಳೇಗಾಲದ ಕಚೇರಿಯಲ್ಲಿ ಒಂಬತ್ತು ಮಂದಿ ಗುಮಾಸ್ತರು, ಇಬ್ಬರು ಜವಾನರು ಹಾಗೂ ಒಬ್ಬ ಮಸಾಲ್ಚಿ ಕಾರ್ಯನಿರ್ವಹಿಸುತ್ತಿದ್ದರು. ಜಿಲ್ಲಾ ಮುನ್ಸೀಫರಿಗೆ ₹ ೫೦೦/-ಗಳ ಸಣ್ಣ ವ್ಯಾಜ್ಯಗಳ ನಿರ್ಣಯದ ಅಧಿಕಾರ ಮಾತ್ರ ಇದ್ದಿತು. ೧೮೭೩ರ ಕಾಯ್ದೆ ಮೂರರ ಪ್ರಕಾರ ಇವರಿಗೆ ₹ ೨,೫೦೦/-ಗಳವರೆಗಿನ ಪ್ರಕರಣಗಳನ್ನು ಆಲಿಸಿ ನಿರ್ಣಯಿಸುವ ಅಧಿಕಾರ ನೀಡಲಾಯಿತು. ಇದನ್ನು ೧೮೮೬ರ ನಿಯಮ ಆರರ ಪ್ರಕಾರ ರೂಪಿಸಲಾಗಿದ್ದು, ಮುನ್ಸೀಫರನ್ನು ನಾಮಕರಣ ಮಾಡುವ ಹಕ್ಕು ಜಿಲ್ಲಾ ನ್ಯಾಯಾಧೀಶರದ್ದಾಗಿದ್ದು, ಅದಕ್ಕೆ ಪ್ರಾಂತೀಯ ನ್ಯಾಯಾಲಯದ ಅನುಮೋದನೆ ಅತ್ಯಗತ್ಯವಾಗಿತ್ತು.

ರಾಜ್ಯ ಪುನರ್ವಿಂಗಡಣೆಯ ತರುವಾಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಕಾಯ್ದೆಯಡಿ ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಅತ್ಯುನ್ನತ ನ್ಯಾಯಾಲಯವಾಗಿ ಒಂದು ಜಿಲ್ಲಾ ನ್ಯಾಯಾಲಯ ಮತ್ತು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ತಾಲೂಕು ಮಟ್ಟದಲ್ಲಿ ಮುನ್ಸಿಫ್ ನ್ಯಾಯಾಲಯಗಳು ಸ್ಥಾಪಿಸಲ್ಪಟ್ಟವು. ಈ ಕಾಯ್ದೆ ೧೯೬೪ರ ಅಕ್ಟೋಬರ್ ಒಂದರಂದು ಜಾರಿಯಾಗಿ ರಾಜ್ಯದಾದ್ಯಂತ ಏಕರೂಪದ ನ್ಯಾಯಾಧಿಕಾರಿಗಳ ಹುದ್ದೆಗಳು ರಚನೆಗೊಂಡವು. ಹೀಗೆ ರಚಿತವಾದ ಹುದ್ದೆಗಳಲ್ಲಿ ಚಾಮರಾಜನಗರ ಹಾಗೂ ಕೊಳ್ಳೇಗಾಲಗಳಲ್ಲಿ ಮುನ್ಸಿಫ್ ಹಾಗೂ ಜೆ.ಎಂ.ಎಫ್.ಸಿ. (ಜೂನಿಯರ್ ಮುನ್ಸಿಫ್ ಪ್ರಥಮದರ್ಜೆ ಕೋರ್ಟ್) ಗಳ ನ್ಯಾಯಮೂರ್ತಿಗಳ ಹುದ್ದೆಗಳೂ ಸೇರಿದ್ದವು. ನಂಜನಗೂಡಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯು ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳ ವ್ಯಾಪ್ತಿಯನ್ನು ಹೊಂದಿದ್ದು, ₹ ೧೦,೦೦೦ಗಳಿಗಿಂತ ಅಧಿಕ ಮೌಲ್ಯದ ಸಿವಿಲ್ ಮೊಕದ್ದಮೆಗಳನ್ನು ಹಾಗೂ ತಾಲೂಕು ಮುನ್ಸಿಫ್ ನ್ಯಾಯಾಲಯಗಳು ₹ ೧೦,೦೦೦ಗಳಿಗಿಂತ ಕಡಿಮೆ ಮೌಲ್ಯದ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ, ಮೇಲ್ಮನವಿಯನ್ನು ಆಲಿಸಬಹುದಾಗಿತ್ತು.

ಚಾಮರಾಜನಗರ ಮುನ್ಸಿಫ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯಗಳು ಚಾಮರಾಜನಗರ ಹಾಗೂ ಯಳಂದೂರು ತಾಲೂಕುಗಳಲ್ಲಿ ಉದ್ಭವಿಸಿದ ₹ ೧೦,೦೦೦ ಮೌಲ್ಯದ ಸಿವಿಲ್ ಪ್ರಕರಣಗಳನ್ನೂ ಹಾಗೂ ಇದೇ ತಾಲೂಕುಗಳ ಕ್ರಿಮಿನಲ್ ಪ್ರಕರಣಗಳನ್ನೂ ಆಲಿಸುತ್ತಿದ್ದವು. ಕೊಳ್ಳೇಗಾಲದ ಮುನ್ಸಿಫ್ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯಗಳು ಕೊಳ್ಳೇಗಾಲ ತಾಲೂಕಿನ ₹ ೧೦,೦೦೦ ಮೌಲ್ಯದ ಸಿವಿಲ್ ಪ್ರಕರಣಗಳನ್ನು ಹಾಗೂ ಅದೇ ತಾಲೂಕಿನ ಕ್ರಿಮಿನಲ್ ಪ್ರಕರಣಗಳನ್ನು ಆಲಿಸುತ್ತಿದ್ದವು. ೧೯೯೭ರ ಆಗಸ್ಟ್ ತಿಂಗಳಿನಲ್ಲಿ ಚಾಮರಾಜನಗರಕ್ಕೆ ಜಿಲ್ಲೆಯ ಸ್ಥಾನಮಾನ ದೊರಕಿದ ನಂತರ ಪ್ರತೀ ತಾಲೂಕಿನಲ್ಲೂ ನ್ಯಾಯಾಲಯಗಳು ಸ್ಥಾಪನೆಗೊಂಡು, ಜಿಲ್ಲೆಯ ಕೇಂದ್ರ ಸ್ಥಾನದಲ್ಲಿರುವ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆಡಳಿತದಡಿ ಇವು ಕಾರ್ಯನಿರ್ವಹಿಸುತ್ತಿದ್ದವು.

ಚಾಮರಾಜನಗರ ಜಿಲ್ಲೆಯಲ್ಲಿ ೨೦೧೨ರ ಜುಲೈನಲ್ಲಿದ್ದಂತೆ ಈ ಕೆಳಕಂಡ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರಗಳನ್ನು ಅವುಗಳಲ್ಲಿ ದಾಖಲಾದ, ಇತ್ಯರ್ಥವಾದ ದಾವೆಗಳ ವಿವರಗಳನ್ನೂ ಪ್ರತ್ಯೇಕವಾಗಿ ನೀಡಲಾಗಿದೆ.

೧. ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ
೨. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಾಮರಾಜನಗರ
೩. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಾಮರಾಜನಗರ
೪. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಾಮರಾಜನಗರ
೫. ಶೀಘ್ರಗತಿ ನ್ಯಾಯಾಲಯ, ಕೊಳ್ಳೇಗಾಲ, ಸಿಟ್ಟಿಂಗ್ ಅಟ್ ಚಾಮರಾಜನಗರ
೬. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೇಗಾಲ
೭. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೆಗಾಲ
೮. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೆಗಾಲ
೯. ಶೀಘ್ರಗತಿ ನ್ಯಾಯಾಲಯ, ಕೊಳ್ಳೆಗಾಲ
೧೦. ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ
೧೧. ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಳಂದೂರು

ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ ೩೧ ಶಾಸನ ೨೦೦೮ ದಿನಾಂಕ ೨೮ನೇ ಆಗಸ್ಟ್ ೨೦೦೯ರ ಅನ್ವಯ ಜಾರಿಗೊಂಡ 'ದಿ ಕರ್ನಾಟಕ ಸಿವಿಲ್ ಕೋರ್ಟ್ಸ್' (ತಿದ್ದುಪಡಿ) ಕಾಯ್ದೆ ೨೦೦೯ ರಲ್ಲಿ ಸಿವಿಲ್ ನ್ಯಾಯಾಧೀಶರು(ಹಿರಿಯ ವಿಭಾಗ) ಇವರು ಪದನಾಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರೆಂದೂ, ಸಿವಿಲ್

ನ್ಯಾಯಾಧೀಶರು (ಕಿರಿಯ ವಿಭಾಗ) ಇವರ ಪದನಾಮವನ್ನು ಸಿವಿಲ್ ನ್ಯಾಯಾಧೀಶರೆಂದೂ ಹಾಗೆಯೇ ಇವರ ನ್ಯಾಯಾಲಯಗಳ ಪದನಾಮವನ್ನು ಅನುಕ್ರಮವಾಗಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಹಾಗೂ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವೆಂದೂ ಮಾರ್ಪಡಿಸಲಾಗಿರುತ್ತದೆ.

**ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ:** ದಿನಾಂಕ ೨೫–೦೯–೨೦೦೪ರಂದು ಪ್ರಾರಂಭಗೊಂಡ ಚಾಮರಾಜನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜಿಲ್ಲೆಯ ಅತ್ಯುನ್ನತ ನ್ಯಾಯಾಲಯವಾಗಿದೆ. ಜಿಲ್ಲಾ ನ್ಯಾಯಾಧೀಶರು ಜಿಲ್ಲೆಯ ನ್ಯಾಯಾಂಗ ಇಲಾಖೆಯ ಮುಖ್ಯಸ್ಥರಾಗಿದ್ದು, ತಮ್ಮ ಅಧೀನ ನ್ಯಾಯಾಲಯಗಳ ಕೆಲಸಗಳ ಮೇಲ್ವಿಚಾರಣೆ ಮಾಡುವುದರ ಜೊತೆಗೆ ತಪಾಸಣೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ (Cr.Pc) ರೀತ್ಯಾ ಏಳು ವರ್ಷಗಳಿಗೂ ಅಧಿಕ ಶಿಕ್ಷೆ ವಿಧಿಸಬಹುದಾದ ಕಾನೂನು ಉಲ್ಲಂಘನೆಯ ವ್ಯಾಜ್ಯಗಳು, ಸರ್ಕಾರವು ಕಾಲಕಾಲಕ್ಕೆ ಮಾಡುವ ಅಧಿಸೂಚನೆಯ ಪ್ರಕಾರ ವ್ಯಾಪ್ತಿಗೆ ಒಳಪಡಿಸಿದ ಪ್ರಕರಣಗಳು, ಅಧೀನ ನ್ಯಾಯಾಲಯಗಳ ತೀರ್ಪಿನ ಮೇಲಿನ ಅಪೀಲುಗಳು ಮತ್ತು ಪುನರ್‌ಪರಿಶೀಲನಾ ಅರ್ಜಿಗಳು ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಾಮರಾಜನಗರ:** ಈ ನ್ಯಾಯಾಲಯವು ದಿನಾಂಕ ೨೬–೦೬–೨೦೦೨ ರಂದು ಪ್ರಾರಂಭಗೊಂಡಿದ್ದು, ಈ ನ್ಯಾಯಾಲಯದ ವ್ಯಾಪ್ತಿಗೆ ಕುದೇರು ಪೊಲೀಸ್ ಠಾಣೆಯ ಕ್ರಿಮಿನಲ್ ಮೊಕದ್ದಮೆಗಳೂ ಒಳಪಟ್ಟಿರುತ್ತವೆ. ಸಿವಿಲ್ ಕೇಸುಗಳಲ್ಲಿ ದಾವೆಯ ಮೌಲ್ಯ ₹ ಐದು ಲಕ್ಷ ಅಥವಾ ಅದಕ್ಕಿಂತ ಹೆಚ್ಚಾಗಿರುವ ಅಸಲು ದಾವೆಗಳು ಮತ್ತು ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥವಾದ ಸಿವಿಲ್ ಪ್ರಕರಣಗಳ ಮೇಲ್ಮನವಿ ಪ್ರಕರಣಗಳು, ವೈವಾಹಿಕ, ಭೂಸ್ವಾಧೀನ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪರಿಹಾರಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೇಗಾಲ:** ರಾಜ್ಯದ ಅತಿ ದೊಡ್ಡ ತಾಲೂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕೊಳ್ಳೇಗಾಲ ತಾಲೂಕಿನ ವ್ಯಾಪ್ತಿಯಲ್ಲಿ ಐದು ನೀರಾವರಿ ಯೋಜನೆಗಳು ಜಾರಿಯಲ್ಲಿದ್ದು, ಈ ಯೋಜನೆಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನಕ್ಕೆ ಒಳಪಟ್ಟ ಜನರಲ್ಲಿ ಹೆಚ್ಚಿನ ಪರಿಹಾರಕ್ಕಾಗಿ ಶೇ. ೬೦ರಷ್ಟು ಜನರು ನ್ಯಾಯಾಲಯದ ಮೊರೆಹೋಗುವುದು ಸಹಜ. ಜಿಲ್ಲೆಯ ಜನಸಂಖ್ಯೆಯಲ್ಲಿ ಹರಿಜನ, ಗಿರಿಜನ, ಬುಡಕಟ್ಟು ಜನಾಂಗ ಮತ್ತು ಹಿಂದುಳಿದವರೇ ಹೆಚ್ಚಾಗಿದ್ದು, ಆ ವರ್ಗದ ಕಕ್ಷಿದಾರರು ಇತ್ತೀಚಿನವರೆಗೆ ತಮ್ಮ ಸಿವಿಲ್ ದಾವೆಗಳ ಇತ್ಯರ್ಥಕ್ಕಾಗಿ ೭೦ ಕಿ.ಮೀ ದೂರದ ಮೈಸೂರಿನ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ಹಾಗೂ ಸಿ.ಜೆ.ಎಂ. ನ್ಯಾಯಾಲಯಕ್ಕೆ ಹೋಗಬೇಕಿತ್ತು. ಈ ತೊಂದರೆಯನ್ನು ತಪ್ಪಿಸಲು ೨೫–೦೮–೨೦೦೧ರಲ್ಲಿ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದಲ್ಲಿ ಪ್ರಾರಂಭಗೊಂಡ ಹಿರಿಯಶ್ರೇಣಿ ನ್ಯಾಯಾಲಯದ ವ್ಯಾಪ್ತಿಗೆ ಕೊಳ್ಳೇಗಾಲ ತಾಲೂಕನ್ನು ಸೇರಿಸಿದರೂ ಕಕ್ಷಿದಾರರ ತೊಂದರೆ ತಪ್ಪಲಿಲ್ಲ. ೨೦೦೪ರಲ್ಲಿ ಚಾಮರಾಜನಗರದಲ್ಲಿ

ಪ್ರಾರಂಭಗೊಂಡ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯಕ್ಕೆ ಈ ತಾಲೂಕಿನ ದಾವೆಗಳು ವರ್ಗಾವಣೆಗೊಂಡರೂ ಕಕ್ಷಿದಾರರು ೩೦ ಕಿ.ಮೀ. ಓಡಾಡುವುದು ತಪ್ಪಲಿಲ್ಲ. ಇಡೀ ಜಿಲ್ಲೆಗೆ ಇದೊಂದೇ ಸತ್ರ ನ್ಯಾಯಾಲಯವಾದ್ದರಿಂದ ಇಲ್ಲಿನ ಕಾರ್ಯದೊತ್ತಡ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ ೧೬-೧೨-೨೦೦೬ರಂದು ಕೊಳ್ಳೇಗಾಲದಲ್ಲಿಯೇ ಮೇಲ್ಕಂಡ ನ್ಯಾಯಾಲಯ ಪ್ರಾರಂಭಗೊಂಡಿದ್ದರಿಂದ ಕಕ್ಷಿದಾರರ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ಸಿಗುವಂತಾಗಿದೆ. ಈ ನ್ಯಾಯಾಲಯದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ವಿಚಾರಣೆ ನಡೆಸಲಾಗುತ್ತಿದ್ದು, ಸಿವಿಲ್ ಪ್ರಕರಣಗಳಲ್ಲಿ ದಾವೆಯ ಮೌಲ್ಯ ಐದು ಲಕ್ಷ ಅಥವಾ ಅದಕ್ಕಿಂತ ಹೆಚ್ಚಾಗಿರುವ ಅಸಲು ದಾವೆಗಳು ಮತ್ತು ಕೊಳ್ಳೇಗಾಲದ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥವಾದ ಸಿವಿಲ್ ಪ್ರಕಣಗಳ ಮೇಲ್ಮನವಿ ಪ್ರಕರಣಗಳು, ವೈವಾಹಿಕ, ಭೂಸ್ವಾಧೀನ ಮತ್ತು ಮೋಟಾರ್ ವಾಹನ ಅಪಘಾತ ಪರಿಹಾರಕ್ಕೆ ಸಂಬಂಧಪಟ್ಟ ಪ್ರಕರಣಗಳ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯುತ್ತವೆ. ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂದಿಸಿದಂತೆ ಕೊಳ್ಳೇಗಾಲ ಪಟ್ಟಣ ಆರಕ್ಷಕ ಠಾಣೆ ಮತ್ತು ಮಲೆ ಮಹದೇಶ್ವರ ಬೆಟ್ಟ ಆರಕ್ಷಕ ಠಾಣೆಗಳಲ್ಲಿ ದಾಖಲಾಗುವ ಅಪರಾಧ ವರದಿ ಮತ್ತು ಅಪರಾಧಿಕ ಮೊಕದ್ದಮೆಗಳ ವಿಚಾರಣೆಗಳು ಈ ನ್ಯಾಯಾಲಯದಲ್ಲಿ ನಡೆಯುತ್ತವೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಾಮರಾಜನಗರ :** ಈ ನ್ಯಾಯಾಲಯವು ಚಾಮರಾಜನಗರದಲ್ಲಿ ೧೯೬೫ರಲ್ಲಿ ಸ್ಥಾಪನೆಯಾಗಿದ್ದು, ಅದಕ್ಕೂ ಮೊದಲು ಚಾಮರಾಜನಗರ ತಾಲೂಕಿನ ಕ್ರಿಮಿನಲ್ ಮತ್ತು ಸಿವಿಲ್ ವ್ಯಾಜ್ಯಗಳ ಪರಿಹಾರಕ್ಕೆ ವಿಚಾರಣೆಯನ್ನು ನಂಜನಗೂಡಿನ ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ನಡೆಸಲಾಗುತ್ತಿತ್ತು. ಪ್ರತೀದಿನ ನಂಜನಗೂಡಿಗೆ ಹೋಗಿ ಬರುವ ಕಕ್ಷಿದಾರರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರಕ್ಕೆ ವಕೀಲರು ಹಾಗೂ ಕಕ್ಷಿದಾರರು ಸಲ್ಲಿಸಿದ ಮನವಿಯ ಮೇರೆಗೆ ಈ ನ್ಯಾಯಾಲಯ ೧೯೬೫ರಿಂದ ಕಾರ್ಯಾರಂಭ ಮಾಡಿತು. ಈ ನ್ಯಾಯಾಲಯದಲ್ಲಿ ಸಿವಿಲ್ ಹಾಗೂ ಕ್ರಿಮಿನಲ್ ದಾವೆಗಳ ವಿಚಾರಣೆ ನಡೆಸಲಾಗುತ್ತದೆ. ಸಿವಿಲ್ ಪ್ರಕರಣಗಳಲ್ಲಿ ದಾವೆಯ ಮೌಲ್ಯ ₹ ಐದು ಲಕ್ಷಕ್ಕಿಂತ ಕಡಿಮೆ ಇರುವ ಪ್ರಕರಣಗಳ ವಿಚಾರಣೆ ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಾಮರಾಜನಗರ:** ಹೆಚ್ಚುತ್ತಿದ್ದ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಮೇಲ್ಕಂಡ ನ್ಯಾಯಾಲಯ ೧೯೬ರಲ್ಲಿ ಸ್ಥಾಪನೆಗೊಂಡಿರುತ್ತದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೇಗಾಲ:** ಏಕೀಕರಣ ಪೂರ್ವದಲ್ಲಿ ಕೊಳ್ಳೇಗಾಲ ತಾಲೂಕು ತಮಿಳುನಾಡು ಸರ್ಕಾರದಡಿಯಲ್ಲಿದ್ದ ಸಮಯದಲ್ಲಿ ಇಲ್ಲಿ ಮುನ್ಸೀಫ್ ಕೋರ್ಟ್, ಮ್ಯಾಜಿಸ್ಟ್ರೇಟ್ ಕೋರ್ಟ್ ಮತ್ತು ಸಬ್‌ಕೋರ್ಟ್‌ಗಳೆಂಬ ಮೂರು ನ್ಯಾಯಾಲಯಗಳು ಪ್ರತ್ಯೇಕ ನ್ಯಾಯಾಧೀಶರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದುವೆಂದು ತಿಳಿದುಬರುತ್ತದೆ. ೧೯೫೬ರ ನಂತರ ಈ ಪ್ರಾಂತ ಕರ್ನಾಟಕಕ್ಕೆ ಸೇರಿದ ಬಳಿಕ ಮೇಲ್ಕಂಡ ಮೂರು ನ್ಯಾಯಾಲಯಗಳನ್ನು

ಒಗ್ಗೂಡಿಸಿ ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವೆಂದು ಕರೆಯಲಾಯಿತು. ಇದನ್ನು ಕಾಲಾಂತರದಲ್ಲಿ ಪ್ರಧಾನ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯವೆಂದು ಹೆಸರಿಸಲಾಯಿತು. ಈ ನ್ಯಾಯಾಲಯದಲ್ಲಿ ಸಿವಿಲ್ ಹಾಗೂ ಕ್ರಿಮಿನಲ್ ದಾವೆಗಳ ವಿಚಾರಣೆ ನಡೆಸಲಾಗುತ್ತಿದ್ದು, ಸಿವಲ್ ಪ್ರಕರಣಗಳಲ್ಲಿ ₹ ಐದು ಲಕ್ಷಕ್ಕಿಂತ ಕಡಿಮೆ ಮೌಲ್ಯದ ಪ್ರಕರಣಗಳ ವಿಚಾರಣೆ ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿದೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೇಗಾಲ:** ೧೯೮೭ರವರೆವಿಗೂ ಕೊಳ್ಳೇಗಾಲದಲ್ಲಿ ಒಂದೇ ನ್ಯಾಯಾಲಯ ಕಾರ್ಯನಿರ್ವಹಿಸುತ್ತಿತ್ತು. ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳ ದಾಖಲಾತಿಯಲ್ಲಿ ಹೆಚ್ಚಳವಾದ್ದರಿಂದ ೧೯೮೭ರ ಮಾರ್ಚ್‌ನಲ್ಲಿ ಈ ನ್ಯಾಯಲಯದ ಸ್ಥಾಪನೆಯಾಯಿತು. ಈ ನ್ಯಾಯಾಲಯದಡಿ ಹನೂರು, ರಾಮಾಪುರ ಹಾಗೂ ಮಲೆಮಹದೇಶ್ವರ ಬೆಟ್ಟಗಳ ಪೊಲೀಸ್ ಠಾಣೆಗಳಿಗೆ ಸಂಬಂಧಪಟ್ಟ ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳೂ ಸೇರ್ಪಡೆಯಾಗುತ್ತವೆ.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ:** ಈ ನ್ಯಾಯಾಲಯವು ೨೯-೦೨-೧೯೭೨ರಲ್ಲಿ ಗುಂಡ್ಲುಪೇಟೆಯಲ್ಲಿ ಸ್ಥಾಪನೆಗೊಂಡಿದ್ದು, ಈ ತಾಲೂಕಿನಲ್ಲಿಯ ಸಿವಿಲ್ ಮತ್ತು ಕ್ರಿಮಿನಲ್ ದಾವೆಗಳ ವಿಚಾರಣೆ ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿದೆ.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಳಂದೂರು:** ಇದು ೧೬-೦೭-೨೦೦೩ರಲ್ಲಿ ಪ್ರಾರಂಭಗೊಂಡಿದ್ದು, ಸ್ವಂತ ಕಟ್ಟಡದ ಕೊರತೆಯಿಂದಾಗಿ ಸದ್ಯಕ್ಕೆ ಯಳಂದೂರಿನ ಮಿನಿ ವಿಧಾನಸೌಧದ ಮೊದಲನೆಯ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ನ್ಯಾಯಾಲಯದಲ್ಲಿ ಈ ತಾಲೂಕಿನಲ್ಲಿಯ ಸಿವಿಲ್ ಮತ್ತು ಕ್ರಿಮಿನಲ್ ದಾವೆಗಳ ವಿಚಾರಣೆ ನಡೆಸಲಾಗುತ್ತದೆ.

**ಶೀಘ್ರ(ತ್ವರಿತ)ಗತಿ ನ್ಯಾಯಾಲಯಗಳು (ಫಾಸ್ಟ್ ಟ್ರ್ಯಾಕ್ ಕೋರ್ಟ್):** ಕೇಂದ್ರ ಸರ್ಕಾರದ ಹನ್ನೊಂದನೆಯ ಆರ್ಥಿಕ ಆಯೋಗದ ಶಿಫಾರಸ್ಸುಗಳಂತೆ ಈಗಿರುವ ನ್ಯಾಯಾಲಯದಲ್ಲಿ ಎರಡು ವರ್ಷಗಳಿಂದ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳ ತ್ವರಿತ ವಿಲೇವಾರಿಗಾಗಿ ಸರಕಾರ ತ್ವರಿತ ಅಥವಾ ಶೀಘ್ರಗತಿ ನ್ಯಾಯಾಲಯಗಳನ್ನು ಸ್ಥಾಪಿಸಿದ್ದು, ಜಿಲ್ಲೆಯಲ್ಲಿ ಇಂತಹ ಎರಡು ನ್ಯಾಯಾಲಯಗಳು ಚಾಮರಾಜನಗರ ಮತ್ತು ಕೊಳ್ಳೇಗಾಲಗಳಲ್ಲಿ ೧೪ ಮೇ ೨೦೦೪ರಿಂದ ಕಾರ್ಯನಿರ್ವಹಿಸುತ್ತಿವೆ. ಈ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗುವ ಎಲ್ಲಾ ಪ್ರಕರಣಗಳು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ದಾಖಲಾಗಿ, ಈ ನ್ಯಾಯಾಲಯಗಳಿಗೆ ವರ್ಗಾವಣೆಯಾಗುತ್ತವೆ. ಮೇಲಿನ ಎಲ್ಲಾ ನ್ಯಾಯಾಲಯಗಳಲ್ಲಿ ೨೦೦೬ ರಿಂದ ೨೦೧೧ರ ವರೆಗೆ ದಾಖಲಾದ ಹಾಗೂ ಇತ್ಯರ್ಥವಾದ ದಾವೆಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಕೋಷ್ಟಕ ೧೦.೧: ೨೦೦೬ರಿಂದ ೨೦೧೧ರವರೆಗೆ ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿರುವ ದಾವೆಗಳ ವಿವರ ಸಿವಿಲ್ ಪ್ರಕರಣಗಳು**

| ಕ್ರ ಸಂ | ನ್ಯಾಯಾಲಯದ ಹೆಸರು | ೨೦೦೬ | | ೨೦೦೭ | | ೨೦೦೮ | | ೨೦೦೯ | | ೨೦೧೦ | | ೨೦೧೧ | |
|---|---|---|---|---|---|---|---|---|---|---|---|---|---|
| | | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು |
| ೧ | ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ | ೩೦೯ | ೧೫೧೨ | ೨೬೭ | ೩೯೫ | ೭೮೬ | ೪೨ | ೨೧೧ | ೨೬೬ | ೧೦೩ | ೧೨೬ | ೨೫೧ | ೧೫೯ |
| ೨ | ಶೀಘ್ರಗತಿ ನ್ಯಾಯಾಲಯ, ಕೊಳ್ಳೇಗಾಲ | ೨೨೨ | ೦೪ | ೯೫ | ೧೪೯ | ೧೮೬ | ೧೭೫ | ೧೯೩ | ೧೩೭ | ೧೮೯ | ೧೦೧ | ೧೯೨ | ೯೫ |
| ೩ | ಶೀಘ್ರಗತಿ ನ್ಯಾಯಾಲಯ, ಕೊಳ್ಳೇಗಾಲ, ಸಿಟ್ಟಿಂಗ್ ಅಟ್ ಚಾಮರಾಜನಗರ | ೧೫೩ | ೯೩ | ೨೬೦ | ೧೮೪ | ೨೧೧ | ೨೫೪ | ೩೩೮ | ೨೨೯ | ೨೯೩ | ೨೧೧ | ೨೨೨ | ೧೯೫ |
| ೪ | ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮು.ನ್ಯಾ.ದಂ. ರವರ ನ್ಯಾಯಾಲಯ, ಚಾಮರಾಜನಗರ | ೬೪೬ | ೧೯೬೨ | ೫೪ | ೫೧೪ | ೩೮೮ | ೩೭೦ | ೪೯೮ | ೪೯೦ | ೩೦೪ | ೫೬೯ | ೪೭೭ | ೭೩೬ |
| ೫ | ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಕೊಳ್ಳೇಗಾಲ | ೧೦೦ | ೩೯ | ೪೯೬ | ೭೧೯ | ೪೯೬ | ೭೧೯ | ೩೨೪ | ೬೯೧ | ೪೩೧ | ೫೩೦ | ೩೦೬ | ೬೩೪ |
| ೬ | ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಾಮರಾಜನಗರ | ೧೫೧ | ೧೫೫ | ೧೮೨ | ೧೪೩ | ೨೨೬ | ೨೨೩ | ೨೦೧ | ೧೫೯ | ೧೭೫ | ೨೮೭ | ೨೧೯ | ೨೧೦ |
| ೭ | ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಾಮರಾಜನಗರ | ೧೨೨ | ೧೦೭ | ೧೬೭ | ೧೨೪ | ೨೧೩ | ೧೭೩ | ೧೭೩ | ೩೫ | ೧೫೩ | ೨೫೯ | ೧೩೧ | ೧೭೮ |
| ೮ | ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಕೊಳ್ಳೇಗಾಲ | ೧೨೦ | ೨೨೩ | ೧೯೫ | ೧೭೦ | ೧೯೫ | ೧೭೦ | ೧೬೦ | ೧೪೩ | ೧೮೦ | ೧೫೦ | ೨೧೧ | ೮೫ |
| ೯ | ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಕೊಳ್ಳೇಗಾಲ | ೧೨೩ | ೨೦೭ | ೨೦೪ | ೩೦೫ | ೨೫೮ | ೧೯೯ | ೧೫೩ | ೮೬ | ೧೬೯ | ೯೪ | ೧೮೫ | ೯೬ |
| ೧೦ | ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಗುಂಡ್ಲುಪೇಟೆ | ೧೯೦ | ೫೦೬ | ೩೧೮ | ೧೫೧ | ೨೫೩ | ೨೦೦ | ೨೨೧ | ೨೦೦ | ೨೪೧ | ೨೧೨ | ೨೮೧ | ೨೦೧ |
| ೧೧ | ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಲಯ, ಯಳಂದೂರು | ೫೮ | ೪೬ | ೫೫ | ೪೧ | ೫೨ | ೩೮ | ೭೬ | ೮೧ | ೨೭೦ | ೪೮ | ೧೬೦ | ೯೩ |
| | ಒಟ್ಟು | **೨೧೯೪** | **೪೮೫೪** | **೨೨೯೩** | **೨೮೯೫** | **೩೨೬೪** | **೨೫೬೩** | **೨೫೪೮** | **೨೫೧೭** | **೨೫೦೮** | **೨೫೮೭** | **೨೬೩೫** | **೨೬೮೨** |

*ಆಧಾರ: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ:*

ಇತ್ಯರ್ಥವಾದ ದಾವೆಗಳ ಸಂಖ್ಯೆಯಲ್ಲಿ ಹಿಂದಿನ ವರ್ಷಗಳ ದಾವೆಗಳೂ ಸೇರಿರುವುದರಿಂದ ಹಲವೆಡೆ ಅವುಗಳ ಸಂಖ್ಯೆ ದಾಖಲಾದ ದಾವೆಗಳಿಗಿಂತ ಹೆಚ್ಚಾಗಿರುತ್ತದೆ.

**ಕೋಷ್ಟಕ ೧೦.೨: ೨೦೦೬ರಿಂದ ೨೦೧೧ರವರೆಗೆ ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿರುವ ದಾವೆಗಳ ವಿವರ ಕ್ರಿಮಿನಲ್ ಪ್ರಕರಣಗಳು**

| ಕ್ರ ಸಂ | ನ್ಯಾಯಾಲಯದ ಹೆಸರು | ೨೦೦೬ | | ೨೦೦೭ | | ೨೦೦೮ | | ೨೦೦೯ | | ೨೦೧೦ | | ೨೦೧೧ | |
|---|---|---|---|---|---|---|---|---|---|---|---|---|---|
| | | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು | ದಾಖಲಾದ ದಾವೆಗಳು | ಇತ್ಯರ್ಥವಾದ ದಾವೆಗಳು |
| ೧ | ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ | ೪೧೯ | ೪೧೨ | ೪೮೦ | ೪೯೫ | ೫೨೭ | ೧೭೮ | ೪೨೩ | ೩೫೬ | ೪೨೩ | ೪೭೫ | ೪೩೪ | ೪೩೬ |
| ೨ | ಶೀಘ್ರಗತಿ ನ್ಯಾಯಾಲಯ, ಕೊಳ್ಳೇಗಾಲ | ೩೯ | ೪೭ | ೩೨ | ೨೪ | ೩೫ | ೩೮ | ೮೧ | ೬೮ | ೧೮೦ | ೧೭೩ | ೧೯೬ | ೧೬೬ |
| ೩ | ಶೀಘ್ರಗತಿ ನ್ಯಾಯಾಲಯ, ಕೊಳ್ಳೇಗಾಲ, ಸಿಟ್ಟಿಂಗ್ ಅಟ್ ಚಾಮರಾಜನಗರ | ೭೮ | ೮೧ | ೧೨೭ | ೧೨೭ | ೧೨೦ | ೧೧೮ | ೧೮೬ | ೧೯೫ | ೧೩೧ | ೧೩೨ | ೧೫೬ | ೧೩೧ |
| ೪ | ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮು.ನ್ಯಾ. ದಂ.ರವರ ನ್ಯಾಯಾಲಯ, ಚಾಮರಾಜನಗರ | ೭೨ | ೭೮ | ೧೨೪ | ೧೨೧ | ೫೩ | ೬೧ | ೬೩ | ೪೨ | ೧೭ | ೫೦ | ೮೧ | ೩೬ |
| ೫ | ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ರವರ ನ್ಯಾಯಾಲಯ, ಕೊಳ್ಳೇಗಾಲ | – | – | ೨೭೫ | ೪೩ | ೨೭೫ | ೪೩ | ೩೦೭ | ೨೪೮ | ೪೧೦ | ೪೦೨ | ೭೬೭ | ೫೪೮ |
| ೬ | ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ರವರ ನ್ಯಾಯಾಲಯ, ಚಾಮರಾಜನಗರ | ೭೧೩ | ೮೪೨ | ೮೭೯ | ೭೦೨ | ೬೬೧ | ೭೪೭ | ೫೯೧ | ೪೬೬ | ೭೩೪ | ೭೮೧ | ೬೩೪ | ೯೧೦ |
| ೭ | ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಾಮರಾಜನಗರ | ೪೦೮ | ೪೯೪ | ೩೫೪ | ೩೪೮ | ೩೧೩ | ೩೨೯ | ೨೭೩ | ೧೪೭ | ೧೬೩ | ೩೭೮ | ೨೮೯ | ೨೫೮ |
| ೮ | ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ರವರ ನ್ಯಾಯಾಲಯ, ಕೊಳ್ಳೇಗಾಲ | ೫೨೭ | ೫೯೩ | ೬೭೫ | ೮೧೪ | ೬೭೫ | ೮೧೪ | ೪೫೭ | ೫೩೪ | ೫೦೦ | ೫೯೨ | ೬೬೭ | ೭೨೯ |
| ೯ | ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಕೊಳ್ಳೇಗಾಲ | ೪೧೨ | ೪೦೮ | ೫೬೮ | ೧೦೬೨ | ೪೪೭ | ೯೨೦ | ೬೯೦ | ೪೪೧ | ೭೧೧ | ೫೨೮ | ೧೦೬೬ | ೧೨೦೨ |
| ೧೦ | ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಗುಂಡ್ಲುಪೇಟೆ | ೮೦೫ | ೬೨೬ | ೬೩೨ | ೬೨೭ | ೭೮೮ | ೭೮೬ | ೯೩೫ | ೫೮೨ | ೯೧೭ | ೬೧೫ | ೭೪೩ | ೫೪೭ |
| ೧೧ | ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಲಯ, ಯಳಂದೂರು | ೨೬೭ | ೨೩೨ | ೩೨೯ | ೨೩೯ | ೨೦೫ | ೧೫೫ | ೨೩೨ | ೨೩೬ | ೪೦೩ | ೧೪೫ | ೪೩೬ | ೩೭೧ |
| | ಒಟ್ಟು | ೩೭೪೦ | ೩೮೧೩ | ೪೪೭೫ | ೪೬೦೨ | ೪೦೯೯ | ೪೧೮೯ | ೪೨೩೮ | ೩೩೧೫ | ೪೫೮೯ | ೪೨೭೧ | ೫೪೬೯ | ೫೩೩೪ |

*ಆಧಾರ: ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ:*

ಇತ್ಯರ್ಥವಾದ ದಾವೆಗಳ ಸಂಖ್ಯೆಯಲ್ಲಿ ಹಿಂದಿನ ವರ್ಷಗಳ ದಾವೆಗಳೂ ಸೇರಿರುವುದಿಂದ ಹಲವೆಡೆ ಅವುಗಳ ಸಂಖ್ಯೆ ದಾಖಲಾದ ದಾವೆಗಳಿಗಿಂತ ಹೆಚ್ಚಾಗಿರುತ್ತದೆ.

**ಕಾರ್ಯಕಾರಿ ದಂಡಾಧಿಕಾರಿಗಳು**

ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಕೆಲವು ಅಧಿಕಾರಿಗಳು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ರಕ್ಷಿಸುವ ಹೊಣೆಯುಳ್ಳ ಪದನಿಮಿತ್ತ ಕಾರ್ಯಕಾರಿ ದಂಡಾಧಿಕಾರಿಗಳೂ ಆಗಿರುತ್ತಾರೆ. ಈ ಉದ್ದೇಶಕ್ಕಾಗಿ ಅವರು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಲು ಅಧಿಕಾರ ಹೊಂದಿರುತ್ತಾರೆ. ಈ ಸಂಬಂಧದಲ್ಲಿ ಅವರ ಕರ್ತವ್ಯಗಳು ನ್ಯಾಯಾಂಗ ಮ್ಯಾಜಿಸ್ಟ್ರೇಟರ ಕರ್ತವ್ಯಗಳಿಂದ ಭಿನ್ನವಾಗಿರುತ್ತವೆ. ಚಾಮರಾಜನಗರ ಜಿಲ್ಲಾಧಿಕಾರಿಗಳು ಜಿಲ್ಲಾ ದಂಡಾಧಿಕಾರಿಯಾಗಿದ್ದು, ಅಪರ ಜಿಲ್ಲಾಧಿಕಾರಿಗಳು ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಯಾಗಿರುತ್ತಾರೆ. ಜಿಲ್ಲೆಯ ಕೊಳ್ಳೇಗಾಲ ಉಪವಿಭಾಗದ ಅಸಿಸ್ಟೆಂಟ್ ಕಮೀಷನರು ಉಪವಿಭಾಗದ ಪದನಿಮಿತ್ತ ಮೊದಲನೆ ದರ್ಜೆ ದಂಡಾಧಿಕಾರಿಯಾಗಿರುತ್ತಾರೆ. ಮತ್ತು ಜಿಲ್ಲೆಯ ಎಲ್ಲಾ ತಾಲೂಕಗಳ ತಹಶೀಲದಾರರು ಎರಡನೆ ದರ್ಜೆ ದಂಡಾಧಿಕಾರಿಯಾಗಿರುತ್ತಾರೆ. ಜಿಲ್ಲಾ ದಂಡಾಧಿಕಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೊಳಪಟ್ಟು ಅಧೀನ ದಂಡಾಧಿಕಾರಿಗಳು ತಮ್ಮ ದಂಡಾಧಿಕಾರವನ್ನು ಚಲಾಯಿಸುತ್ತಾರೆ.

## ಜಿಲ್ಲಾ ಪೊಲೀಸ್ ಆಡಳಿತ

ಪ್ರಾಚೀನ ಕಾಲದಲ್ಲಿ ಶಾಂತಿ ಮತ್ತು ಕಾನೂನು ಪರಿಪಾಲನೆಯನ್ನು ಗ್ರಾಮೀಣ ಭಾಗದಲ್ಲಿ ಗ್ರಾಮಗಳ ಮುಖಂಡರಾದ ಗೌಡರು ನಿರ್ವಹಿಸುತ್ತಿದ್ದು, ಪಟೇಲರೆಂದು ನಂತರ ಅವರನ್ನು ಕರೆಯಲಾಗುತ್ತಿತ್ತು. ಇದು ವಂಶಪಾರಂಪರ್ಯವಾಗಿದ್ದು, ಅವರ ನೆರವಿಗೆ ತಳವಾರರು ಇರುತ್ತಿದ್ದರು. ಇದೇ ರೀತಿ ಪಟ್ಟಣ ಪ್ರದೇಶದಲ್ಲಿ ಪಟ್ಟಣಸ್ವಾಮಿಗಳು ನಿರ್ವಹಿಸುತ್ತಿದ್ದು, ಮೈಸೂರು ಅರಸರ ಆಳ್ವಿಕೆಯಲ್ಲಿ 'ಕಂದಾಚಾರ ಇಲಾಖೆ' ಇದನ್ನು ನಿರ್ವಹಿಸುತ್ತಿದ್ದು, ದಳವಾಯಿ ಅದರ ಮುಖ್ಯಸ್ಥನಾಗಿದ್ದನು. ಠಾಣೆಗಳ ನಿರ್ವಹಣೆಗೆ ಠಾಣೆದಾರರಿದ್ದು, ಹೋಬಳಿ ಮಟ್ಟದಲ್ಲಿ ಹೋಬಳಿದಾರರಿದ್ದು, ಓಲೇಕಾರರು, ಡಂಗುರದವರು ಅವರ ಕೈಕೆಳಗೆ ಕಾರ್ಯನಿರ್ವಹಿಸುತ್ತಿದ್ದರು.

ಹಿಂದೆ ೧೮೧೬ಕ್ಕೆ ಮೊದಲು ಕಾವಲುಗಾರರು, ಗ್ರಾಮಕಾವಲುಗಾರರುಗಳೆಂಬ ಕಾರಕೂನರು ಕೊಳ್ಳೇಗಾಲ ಭಾಗದಲ್ಲಿ ಪೊಲೀಸ್ ಠಾಣೆ ನಿರ್ವಹಿಸುತ್ತಿದ್ದರು. ಆನಂತರ ತಾಲೂಕಿನಲ್ಲಿ ಕಂದಾಚಾರ ಕಾರಕೂನರು, ಕಿಲ್ಲೇದಾರರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಮುಂದೆ ತಲಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಕೊರವನ್ ಜನಾಂಗದವರು ವಂಶಪಾರಂಪರ್ಯವಾಗಿ ಇದನ್ನು ನಿರ್ವಹಿಸುತ್ತಿದ್ದರು. ಕೊಳ್ಳೇಗಾಲದಲ್ಲಿ ೧೮೮೪ರ ವೇಳೆಗೆ ಒಬ್ಬ ಇನ್ಸ್‌ಪೆಕ್ಟರ್, ಒಬ್ಬ ಎರಡನೇ ದರ್ಜೆ ಮುಖ್ಯಪೇದೆ, ಮೂವರು ಮೂರನೇ ದರ್ಜೆ ಮುಖ್ಯಪೇದೆ ಮೂವರು ನಾಲ್ಕನೇ ದರ್ಜೆ ಮುಖ್ಯಪೇದೆ, ೨೩ ಪ್ರಥಮ ದರ್ಜೆ, ೨೧ ದ್ವಿತೀಯ ದರ್ಜೆ ಹಾಗೂ ೨೩ ತೃತೀಯ ದರ್ಜೆ ಕಾನ್‌ಸ್ಟೇಬಲ್‌ಗಳು ಕಾರ್ಯನಿರ್ವಹಿಸುತ್ತಿದ್ದರು. ಇದೇ ಪದ್ಧತಿ ೧೯೫೬ರವರೆಗೂ ಮುಂದುವರಿಯಿತು.

೧೯೮೭ರ ವೇಳೆಗೆ ಚಾಮರಾಜನಗರ ಉಪವಿಭಾಗದ ಡಿವೈಎಸ್‌ಪಿ, ವ್ಯಾಪ್ತಿಗೆ ಚಾಮರಾಜನಗರ ಪೂರ್ವ, ಚಾಮರಾಜನಗರ ಪಶ್ಚಿಮ, ಚಾಮರಾಜನಗರ ಗ್ರಾಮಾಂತರ, ಯಳಂದೂರು, ಕೊಳ್ಳೇಗಾಲ ಗ್ರಾಮಾಂತರ, ಕೊಳ್ಳೇಗಾಲ ನಗರ ಹಾಗೂ ಮಲೆಮಹದೇಶ್ವರ ಬೆಟ್ಟ ಒಳಪಟ್ಟಿದ್ದವು.

ಸ್ವತಂತ್ರ ಜಿಲ್ಲೆಯ ಸ್ಥಾನ ಲಭ್ಯವಾಗುವ ಪೂರ್ವದಲ್ಲಿ ಇಂದಿನ ಚಾಮರಾಜನಗರ ಜಿಲ್ಲೆಯು ಮೈಸೂರಿನ ಪೊಲೀಸ್ ಸೂಪರಿಂಟೆಂಡೆಂಟರ ಆಡಳಿತಕ್ಕೆ ಒಳಪಟ್ಟಿತ್ತು. ಜಿಲ್ಲೆ ರಚನೆಯಾದ ನಂತರ

ಪೊಲೀಸ್ ಆಡಳಿತಕ್ಕಾಗಿ ೧೯೯೭ರಿಂದೀಚೆಗೆ ಸೂಪರಿಂಟೆಂಡೆಂಟ್ ದರ್ಜೆಯ ಪೊಲೀಸ್ ಅಧಿಕಾರಿಯು ಜಿಲ್ಲೆಯ ಪೊಲೀಸ್ ವ್ಯವಸ್ಥೆಯ ಮುಖ್ಯಸ್ಥರಾಗಿರುತ್ತಾರೆ. ಇವರ ಸಹಾಯಕ್ಕಾಗಿ ಒಬ್ಬ ಅಡಿಷನಲ್ ಎಸ್.ಪಿ., ಮೂರು ಮಂದಿ ಡಿ.ವೈ.ಎಸ್.ಪಿ.ಗಳು, ೧೩ ಮಂದಿ (ಒಂದು ಸ್ಥಾನ ಖಾಲಿ) ಇನ್ಸ್‌ಪೆಕ್ಟರುಗಳು, ೩೪ ಮಂದಿ (ಎಂಟು ಸ್ಥಾನ ಖಾಲಿ) ಸಬ್‌ಇನ್ಸ್‌ಪೆಕ್ಟರುಗಳು, ೫೫ ಮಂದಿ (ಮೂರು ಸ್ಥಾನ ಖಾಲಿ) ಸಹಾಯಕ ಸಬ್ ಇನ್ಸ್‌ಪೆಕ್ಟರುಗಳು, (೪೮ ಪುರುಷ ಹಾಗೂ ನಾಲ್ಕು ಮಹಿಳೆ) ೧೯೨ ಮಂದಿ (ಎರಡು ಸ್ಥಾನ ಖಾಲಿ) ಪುರುಷ ಹಾಗೂ ಮಹಿಳಾ ಮುಖ್ಯ ಪೇದೆಗಳು, ಹಾಗೂ ೫೭೨ ಮಂದಿ (೬೭ ಸ್ಥಾನ ಖಾಲಿ) ಮಹಿಳಾ ಹಾಗೂ ಪುರುಷ ಸಿವಿಲ್ ಪೇದೆಗಳು ೨೦೧೨ರ ಜುಲೈ ತಿಂಗಳಿನಲ್ಲಿದ್ದಂತೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

**ಪೊಲೀಸ್ ಠಾಣೆಗಳು:** ಆಡಳಿತಾನುಕೂಲಕ್ಕಾಗಿ ಜಿಲ್ಲೆಯನ್ನು ಚಾಮರಾಜನಗರ ಉಪವಿಭಾಗ ಮತ್ತು ಕೊಳ್ಳೇಗಾಲ ಉಪವಿಭಾಗ, ಎಂದು ವಿಂಗಡಿಸಲಾಗಿದೆ. ಚಾಮರಾಜನಗರ ಉಪವಿಭಾಗದಡಿ ಚಾಮರಾಜನಗರ ಗ್ರಾಮೀಣ ಮತ್ತು ಗುಂಡ್ಲುಪೇಟೆ ವೃತ್ತಗಳು ಹಾಗೂ ಮೇಲ್ದರ್ಜೆಗೇರಿದ ಚಾಮರಾಜನಗರ ಟೌನ್ ಪೊಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿವೆ. ಚಾಮರಾಜನಗರ ಗ್ರಾಮೀಣ ವೃತ್ತದಡಿ ಚಾಮರಾಜನಗರ ಗ್ರಾಮೀಣ, ಚಾಮರಾಜನಗರ ಪೂರ್ವ, ಕುದೇರು ಮತ್ತು ಸಂತೇಮರಳ್ಳಿ ಆರಕ್ಷಕ ಠಾಣೆಗಳು; ಉಡಿಗಾಲ ಹಾಗೂ ಕಾಗಲವಾಡಿ ಹೊರಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಗುಂಡ್ಲುಪೇಟೆ ವೃತ್ತದಡಿ ಗುಂಡ್ಲುಪೇಟೆ, ಮತ್ತು ತೆರಕಣಾಂಬಿ ಪೊಲೀಸ್ ಆರಕ್ಷಕ ಠಾಣೆಗಳ ಜೊತೆಗೆ, ಬೇಗೂರು, ಬಂಡೀಪುರ ಹಾಗೂ ಕಬ್ಬಳ್ಳಿಯಲ್ಲಿ ಹೊರಠಾಣೆಗಳು ಕಾರ್ಯನಿರ್ವಹಿಸುತ್ತಿವೆ.

ಕೊಳ್ಳೇಗಾಲ ಉಪವಿಭಾಗದಡಿ ಕೊಳ್ಳೇಗಾಲ ಹಾಗೂ ಯಳಂದೂರು ವೃತ್ತಗಳಿದ್ದು, ಕೊಳ್ಳೇಗಾಲ ವೃತ್ತದಡಿ, ಕೊಳ್ಳೇಗಾಲ ಟೌನ್ ಮತ್ತು ಕೊಳ್ಳೇಗಾಲ ಗ್ರಾಮೀಣ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಯಳಂದೂರು ವೃತ್ತದಡಿ ಯಳಂದೂರು, ಮತ್ತು ಮಾಂಬಳ್ಳಿ ಆರಕ್ಷಕ ಠಾಣೆಗಳು; ಬಿಳಿಗಿರಿ ರಂಗನಬೆಟ್ಟ, ಹೊರಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ ಹನೂರಿನಲ್ಲಿ ಮೇಲ್ದರ್ಜೆಗೇರಿದ ಪೊಲೀಸ್ ಠಾಣೆ ಇದ್ದು ಅದರಡಿಯಲ್ಲಿ ಲೊಕ್ಕನಹಳ್ಳಿ ಮತ್ತು ಬೈಲೂರು ಹೊರಠಾಣೆಗಳು, ಹಾಗೂ ರಾಮಾಪುರ ಮತ್ತು ಮಲೆಮಹದೇಶ್ವರಬೆಟ್ಟದಲ್ಲಿ ಉನ್ನತೀಕೃತ ಪೊಲೀಸ್ ಆರಕ್ಷಕ ಠಾಣೆಯು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ೨೦೧೨ ಜುಲೈ ನಲ್ಲಿದ್ದಂತೆ, ಎಸ್‌ಪಿ ದರ್ಜೆಯಿಂದ ಪೇದೆಯವರೆಗೆ ಮಂಜೂರಾಗಿದ್ದ ೧೨೭೭ ಹುದ್ದೆಗಳಲ್ಲಿ, ೧೧೬೫ (೧೧೨೨ ಪುರುಷರು ಹಾಗೂ ೪೩ ಮಹಿಳೆಯರು) ಮಂದಿ ಸೇವೆಯಲ್ಲಿದ್ದು, ಉಳಿದ ೧೧೨ ಹುದ್ದೆಗಳು ಖಾಲಿ ಇದ್ದವು. ಮೇಲ್ಕಂಡ ಠಾಣೆಗಳಲ್ಲದೇ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಅಪರಾಧ ಅನ್ವೇಷಣಾ ಘಟಕ (ಡಿಸ್ಟ್ರಿಕ್ಟ್ ಕ್ರೈಂ ಇನ್ವೆಸ್ಟಿಗೇಷನ್ ಬ್ಯೂರೋ), ಜಿಲ್ಲಾ ಅಪರಾಧ ದಾಖಲಾತಿ ಘಟಕ(ಡಿಸ್ಟ್ರಿಕ್ಟ್ ಕ್ರೈಂ ರೆಕಾರ್ಡ್ ಬ್ಯೂರೋ), ಜಿಲ್ಲಾ ವಿಶೇಷ ಅಪರಾಧ ಶಾಖೆ (ಡಿಸ್ಟ್ರಿಕ್ಟ್ ಕ್ರೈಂ ಸ್ಪೆಷಲ್ ಬ್ರಾಂಚ್), ಜಿಲ್ಲಾ ಬೆರಳಚ್ಚು ಘಟಕ, (ಫಿಂಗರ್ ಪ್ರಿಂಟ್ ಬ್ರಾಂಚ್), ಹಾಗೂ ಅರಣ್ಯ ಸಂಚಾರಿ ತಂಡ (ಫಾರೆಸ್ಟ್ ಮೊಬೈಲ್ ಸ್ಕ್ವಾಡ್‌ಗಳು) (ಚಾಮರಾಜನಗರ ಹಾಗೂ ಕೊಳ್ಳೇಗಾಲಗಳಿಗೆ ಪ್ರತ್ಯೇಕವಾಗಿ) ಕಾರ್ಯಪ್ರವೃತ್ತವಾಗಿವೆ.

ಜಿಲ್ಲೆಯಲ್ಲಿ ಗುಪ್ತ ಮಾಹಿತಿಗಳನ್ನು ಸಂಗ್ರಹಿಸಲು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಒಬ್ಬರು ಇನ್ಸ್‌ಪೆಕ್ಟರ್, ಒಬ್ಬರು ಸಬ್‌ಇನ್ಸ್‌ಪೆಕ್ಟರ್ ಮತ್ತು ಮೂವರು ಮುಖ್ಯ ಪೇದೆಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ಸಹಾಯಕರಾಗಿ ಜಿಲ್ಲೆಯ ೧೪ ಠಾಣೆಗಳಲ್ಲಿ ೧೪ ಜನ ಮುಖ್ಯ ಪೇದೆ/ಪೇದೆ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇವರು ಜಿಲ್ಲೆಯಲ್ಲಿ ನಕ್ಸಲ್ ಚಟುವಟಿಕೆ, ದೇಶದ್ರೋಹಿ ಚಟುವಟಿಕೆ, ವಿದೇಶಿಯರ ಭೇಟಿ, ದೈನಂದಿನ

ಚಟುವಟಿಕೆಗಳು, ಗಣ್ಯರ ಭೇಟಿ ಮುಂತಾದ ಪ್ರಮುಖ ಮಾಹಿತಿಯನ್ನು ಸಂಗ್ರಹಿಸಿ ಪ್ರತಿದಿನ ಜಿಲ್ಲಾ ಕಛೇರಿಗೆ ವರದಿ ನೀಡುತ್ತಾರೆ. ಈ ವರದಿಯು ಜಿಲ್ಲಾ ಕಛೇರಿಯಿಂದ ಪ್ರಧಾನ ಕಛೇರಿಗೆ ಸಲ್ಲಿಕೆಯಾಗುತ್ತದೆ. ೨೦೧೨ ರ ಜುಲೈ ವರೆವಿಗೂ ಜಿಲ್ಲೆಯಲ್ಲಿ ನಾಗರೀಕರಿಗೆ ಬಂದೂಕು ತರಬೇತಿ ನೀಡುವ ಕೇಂದ್ರಗಳು ಆರಂಭಗೊಂಡಿರಲಿಲ್ಲ.

## ಬೆರಳು ಮುದ್ರೆ ಘಟಕ

ಚಾಮರಾಜನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ೧೯೯೭ ರಿಂದ ಬೆರಳು ಮುದ್ರೆ ಘಟಕವು ಕಾರ್ಯನಿರ್ವಹಿಸುತ್ತಿದೆ. ಈ ಘಟಕವು ಬೆಂಗಳೂರಿನಲ್ಲಿರುವ ಕೇಂದ್ರ ಕಚೇರಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದು ಜಿಲ್ಲಾ ಪೊಲೀಸ್ ಅಧೀಕ್ಷಕರ ಉಸ್ತುವಾರಿಯಲ್ಲಿರುತ್ತದೆ. ಕಳವು ಮತ್ತು ಇನ್ನಿತರ ಅಪರಾಧ ಪ್ರಕರಣಗಳಲ್ಲಿ ದೊರೆಯುವ ಬೆರಳು ಮುದ್ರೆಗಳನ್ನು ಹಾಗೂ ಆರೋಪಿ ವ್ಯಕ್ತಿಗಳ ಬೆರಳು ಮುದ್ರೆಗಳನ್ನು ಪಡೆದು ಘಟಕದ ಸಂಗ್ರಹದಲ್ಲಿರುವ ಬೆರಳು ಮುದ್ರೆಗಳೊಂದಿಗೆ ತಾಳೆ ಹಾಕುವ ಮೂಲಕ ಅಪರಾಧ ಪತ್ತೆ ಮಾಡಲಾಗುತ್ತದೆ. ಈ ಘಟಕದ ವ್ಯಾಪ್ತಿಗೆ ಜಿಲ್ಲೆಯ ೧೪ ಪೊಲೀಸ್ ಠಾಣೆಗಳು ಒಳಪಡುತ್ತವೆ. ಈ ಘಟಕಕ್ಕೆ ಒಂದು ಪೊಲೀಸ್ ನಿರೀಕ್ಷಕರ, ಒಂದು ಪೊಲೀಸ್ ಉಪ ನಿರೀಕ್ಷಕರ, ಒಂದು ಮುಖ್ಯ ಕಾನ್ಸ್ಟೇಬಲ್, ಮತ್ತು ಎರಡು ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳು ಮಂಜೂರಾಗಿರುತ್ತವೆ. ಬೆರಳು ಮುದ್ರೆ ಘಟಕದಲ್ಲಿ ೧೯೯೮ ರಿಂದ ೨೦೧೧ರವರೆಗಿನ ಪರಿಶೀಲಿಸಲಾದ ಬೆರಳು ಮುದ್ರೆಗಳ ವಿವರ ಕೆಳಗಿನಂತಿದೆ.

**ಕೋಷ್ಟಕ ೧೦.೩: ಬೆರಳುಮುದ್ರೆ ಘಟಕದಲ್ಲಿ ಪರಿಶೀಲಿಸಲಾದ ಬೆರಳುಮುದ್ರೆಗಳ ವಿವರ**

| ವರ್ಷ | ಅಪರಾಧ ಪ್ರಕರಣಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಪ್ರಕರಣಗಳು | ಸ್ಥಳದಲ್ಲಿ ದೊರೆತ ಬೆರಳ ಮುದ್ರೆಗಳಿಂದ ಪತ್ತೆಯಾದ ಪ್ರಕರಣಗಳು | ದಸ್ತಗಿರಿಯಾದ ವ್ಯಕ್ತಿಯಲ್ಲಿ ಬೆರಳು ಮುದ್ರೆ ಪರಿಶೀಲಿಸಲಾದ ಸಂಖ್ಯೆ | ದಸ್ತಗಿರಿಯಾದ ವ್ಯಕ್ತಿಯ ಬೆರಳು ಮುದ್ರೆಗಳು ಹೋಲಿಕೆಯಾದ ಸಂಖ್ಯೆ |
|---|---|---|---|---|
| ೧೯೯೮ | ೧೦೭ | – | ೭೯ | ೦೨ |
| ೧೯೯೯ | ೧೩ | – | ೨೧೦ | ೦೪ |
| ೨೦೦೦ | ೦೮ | – | ೨೬೩ | ೦೩ |
| ೨೦೦೧ | ೦೮ | – | ೨೨೯ | ೦೧ |
| ೨೦೦೨ | ೧೪ | ೦೧ | ೨೩೯ | ೦೩ |
| ೨೦೦೩ | ೨೧ | ೦೧ | ೨೨೭ | ೦೬ |
| ೨೦೦೪ | ೨೧ | ೦೨ | ೨೩೦ | ೧೭ |
| ೨೦೦೫ | ೩೧ | ೦೨ | ೨೯೨ | ೨೭ |
| ೨೦೦೬ | ೧೭ | ೦೧ | ೨೩೭ | ೨೦ |
| ೨೦೦೭ | ೧೯ | – | ೨೭೮ | ೨೪ |
| ೨೦೦೮ | ೨೬ | ೦೪ | ೨೫೮ | ೩೪ |
| ೨೦೦೯ | ೨೬ | ೦೧ | ೩೩೯ | ೩೯ |
| ೨೦೧೦ | ೧೮ | ೦೨ | ೨೯೫ | ೪೦ |
| ೨೦೧೧ | ೨೦ | ೦೨ | ೨೬೭ | ೨೩ |

**ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಶ್ವಾನದಳ ಸೇರಿದಂತೆ):** ಚಾಮರಾಜ ನಗರ ಜಿಲ್ಲಾ ಸಶಸ್ತ್ರ ಪೊಲೀಸ್ ಕೇಂದ್ರ ಸ್ಥಾನವು ೧೯೯೮ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಜಿಲ್ಲಾ ಪೊಲೀಸ್ ಅಧೀಕ್ಷಕರ ಉಸ್ತುವಾರಿಯಲ್ಲಿ

ಕಾರ್ಯನಿರ್ವಹಿಸುತ್ತಿದೆ. ಈ ಪಡೆಯಲ್ಲಿ ಪೊಲೀಸ್ ಮೋಟಾರ್ ಟ್ರಾನ್ಸ್‌ಪೋರ್ಟ್ (ಪಿ.ಎಂ.ಟಿ) ಜಿಲ್ಲಾ ಶಸ್ತ್ರಾಗಾರ ಹಾಗೂ ಶ್ವಾನದಳವೂ ಸೇರಿದ್ದು, ೨೦೧೨ ಜುಲೈ ನಲ್ಲಿದ್ದಂತೆ ಇಬ್ಬರು ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರು, ಐದು ರಿಸರ್ವ್ ಪೊಲೀಸ್ ಸಬ್‌ಇನ್ಸ್‌ಪೆಕ್ಟರು (ಮೂರು ಸ್ಥಾನ ಖಾಲಿ), ಆರು ರಿಸರ್ವ್ ಎ.ಎಸ್.ಐ.ಗಳು(ಒಂದು ಸ್ಥಾನ ಖಾಲಿ) ೬೯ ಮಂದಿ ರಿಸರ್ವ್ ಮುಖ್ಯ ಪೇದೆಗಳು ಹಾಗೂ ೨೮೭ ಮಂದಿ (ಒಂಬತ್ತು ಸ್ಥಾನ ಖಾಲಿ) ರಿಸರ್ವ್ ಪೇದೆಗಳು ಕಾರ್ಯನಿರ್ವಹಿಸುತ್ತಿದ್ದರು. ಈ ಪಡೆಯ ಮುಖ್ಯ ಕಾರ್ಯವೆಂದರೆ ಅನಿರೀಕ್ಷಿತವಾಗಿ ಉಂಟಾಗುವ ಗಲಭೆ, ಮುಷ್ಕರ, ಜಾತ್ರೆ, ಸಭೆ, ಸಮಾರಂಭ, ಮೆರವಣಿಗೆ ಹಾಗೂ ಚುನಾವಣೆ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಬಂದೋಬಸ್ತು ಕಾರ್ಯ ನಿರ್ವಹಿಸುವುದಾಗಿದೆ. ಗಣ್ಯ ವ್ಯಕ್ತಿಗಳಿಗೆ, ಇಲಾಖೆಯ ಉನ್ನತ ಅಧಿಕಾರಿಗಳಿಗೆ ಗೌರವ ರಕ್ಷೆ ನೀಡುವುದು, ಮುಖ್ಯ ಕಚೇರಿಗಳ ಪಹರೆ, ಗಣ್ಯ ವ್ಯಕ್ತಿಗಳಿಗೆ ಬೆಂಗಾವಲು, ಪೊಲೀಸ್ ಬ್ಯಾಂಡ್, ಕೈದಿಗಳಿಗೆ ಬೆಂಗಾವಲು, ಹಣದ ಬೆಂಗಾವಲು ಮುಂತಾದವು ಈ ಪಡೆಯ ಇನ್ನಿತರೆ ಕೆಲಸಗಳಾಗಿವೆ.

ಜಿಲ್ಲಾ ನಿಸ್ತಂತು (ವೈರ್‌ಲೆಸ್) ವಿಭಾಗವು ೨೦೧೨ ಜುಲೈ ತಿಂಗಳಿನಲ್ಲಿದ್ದಂತೆ ಜಿಲ್ಲಾ ನಿಸ್ತಂತು ವಿಭಾಗದಲ್ಲಿ ಒಟ್ಟು ಮಂಜೂರಾದ ೩೭ ಹುದ್ದೆಗಳಲ್ಲಿ ಒಬ್ಬ ಇನ್ಸ್‌ಪೆಕ್ಟರ್, ನಾಲ್ಕು ಮಂದಿ ಸಬ್‌ಇನ್ಸ್‌ಪೆಕ್ಟರ್‌ಗಳು (ಮೂರು ಸ್ಥಾನ ಖಾಲಿ), ಐದು ಮಂದಿ ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ಗಳು, ೧೭ ಮಂದಿ (೧೪ ಖಾಲಿ) ಮುಖ್ಯ ಪೇದೆಗಳು, ೧೦ ಮಂದಿ ಪೇದೆಗಳು, ಕಾರ್ಯನಿರ್ವಹಿಸುತ್ತಿದ್ದರು.

**ಜಿಲ್ಲಾ ಶ್ವಾನದಳ:** ಅಪರಾಧ ತನಿಖೆಯಲ್ಲಿ ಮತ್ತು ಅಪರಾಧಿಗಳ ಸುಳಿವು ಪತ್ತೆ ಮಾಡುವಲ್ಲಿ ಶ್ವಾನದಳದ ಪಾತ್ರ ಮಹತ್ವದ್ದಾಗಿದೆ. ಶ್ವಾನಗಳು ವಾಸನೆ ಆಧಾರದ ಮೇಲೆ ಅಪರಾಧಿಗಳ ಪತ್ತೆ ಮಾಡುವ ವಿಶಿಷ್ಟ ಕೌಶಲ್ಯ ಪಡೆದಿವೆ. ಈ ನಿಟ್ಟಿನಲ್ಲಿ ಶ್ವಾನಗಳಿಗೆ ತರಬೇತಿ ನೀಡಲಾಗುತ್ತದೆ. ತರಬೇತಿ ಹೊಂದಿದ ಶ್ವಾನಗಳನ್ನು ಬಾಂಬ್ ಹಾಗೂ ಇತರ ಸ್ಫೋಟಕ ವಸ್ತುಗಳನ್ನು ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚಲು ಬಳಸಲಾಗುತ್ತದೆ.

ಜಿಲ್ಲೆಯಲ್ಲಿ ಆರಕ್ಷಕ ಶ್ವಾನದಳ ಘಟಕವು ದಿನಾಂಕ ೦೪-೦೭-೨೦೦೧ ರಂದು ಕಾರ್ಯಾರಂಭ ಮಾಡಿದೆ. ಈ ದಳದಲ್ಲಿ ಮೂರು ಶ್ವಾನಗಳಿದ್ದು, ಅಪರಾಧ ಪತ್ತೆಗೆ 'ರಿಚ್ಚಿ' ಹಾಗೂ 'ಸುಜಾ' ಎಂಬ ಎರಡು ಶ್ವಾನಗಳು, ಸ್ಫೋಟಕ ಪತ್ತೆಗೆ 'ರೇಖಾ' ಎಂಬ ಶ್ವಾನಗಳಿದ್ದವು. ಈ ವಿಭಾಗದಲ್ಲಿ ತರಬೇತಿ ಹೊಂದಿದ ಓರ್ವ ಮುಖ್ಯಪೇದೆ, ಹಾಗೂ ಮೂರು ಜನ ಪೇದೆಗಳಿದ್ದು, ಇದರ ಉಸ್ತುವಾರಿಯಾಗಿ ಎಆರ್‌ಎಸ್‌ಐ ಇರುತ್ತಾರೆ. ಶ್ವಾನಗಳಿಗೆ ರಾಮಸಮುದ್ರ ಪೊಲೀಸ್ ವಸತಿ ಗೃಹದಲ್ಲಿ ತಾತ್ಕಾಲಿಕ ಕೆನಲ್ ವ್ಯವಸ್ಥೆ ಮಾಡಲಾಗಿರುತ್ತದೆ.

**ಪೊಲೀಸು ವಾಹನ:** ೨೦೧೨ ಜುಲೈನಲ್ಲಿದ್ದಂತೆ ಚಾಮರಾಜನಗರ ಜಿಲ್ಲಾ ಪೊಲೀಸ್ ಘಟಕದಲ್ಲಿ ಟೊಯೋಟಾ ಇನ್ನೊವಾ, ಕ್ವಾಲೀಸ್, ಕಾರು, ಜೀಪು, ಟೆಂಪೋ ಟ್ರಾವೆಲರ್, ಸ್ವರಾಜ್ ಮಜ್ದಾ ಸೇರಿದಂತೆ ಒಟ್ಟು ೭೭ ನಾಲ್ಕು ಚಕ್ರದ ವಾಹನಗಳು ಮತ್ತು ೭೪ ದ್ವಿಚಕ್ರ ವಾಹನಗಳು ಕಾರ್ಯನಿರ್ವಹಿಸುತ್ತಿರುತ್ತವೆ.

**ಮತೀಯ ಗಲಭೆ, ಕಾರ್ಮಿಕ ಪ್ರತಿಭಟನೆ, ದೊಂಬಿ, ದಾಂದಲೆ, ನಿರಶನ:** ರಾಜ್ಯದ ಇತರೆಡೆಗಳಂತೆ ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲೂ ಮತೀಯ ಗಲಭೆಗಳು ನಡೆದಿರುವ ಉಲ್ಲೇಖಗಳಿವೆ. ೧೯೭೮ರ ಗ್ರಾಮಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಗುಂಡ್ಲುಪೇಟೆ ತಾಲೂಕಿನ ಕಮರಹಳ್ಳಿಯಲ್ಲಿ ಜರುಗಿದ ದೊಂಬಿ ಗಲಾಟೆಯಲ್ಲಿ ವ್ಯಕ್ತಿಯೋರ್ವನ ತಲೆಗೆ ತೀವ್ರ ಪೆಟ್ಟಾಗಿತ್ತು. ಲಕ್ಕನಹಳ್ಳಿಯಲ್ಲಿ ಜರುಗಿದ ಮತೀಯ ಗಲಭೆಯಲ್ಲಿ ಹಲವಾರು ಜನ ಗಾಯಗೊಂಡರು. ಕೊಳ್ಳೇಗಾಲ ಪಟ್ಟಣದಲ್ಲಿ ಎರಡು ಜಾತಿಯ ಜನರ ನಡುವೆ ೧೯೬೯ರಲ್ಲಿ

ನಡೆದ ಕಲಹದಿಂದಾಗಿ ಅನೇಕರು ಗಾಯಾಳುಗಳಾದರು. ಚಾಮರಾಜನಗರ ಪಟ್ಟಣದಲ್ಲಿ ೧೯೮೫ರಲ್ಲಿ ಜರುಗಿದ ಮತೀಯ ಗಲಭೆಯಲ್ಲಿ ವ್ಯಕ್ತಿಯೋರ್ವ ನಿಧನ ಹೊಂದಿದನು. ಜೂನ್ ೧೯೮೫ರಲ್ಲಿ ಚಾಮರಾಜನಗರ ಜಿಲ್ಲೆಯ ವ್ಯಕ್ತಿಯೋರ್ವನನ್ನು ದುಷ್ಕರ್ಮಿಗಳು ಚಾಕುವಿನಿಂದ ತಿವಿದು ಪರಾರಿಯಾದ ಕಾರಣ ದಾಂದಲೆಯಾಗಿತ್ತು.

ಚಾಮರಾಜನಗರ ದಲಿತ ಸಂಘರ್ಷ ಸಮಿತಿ ಸದಸ್ಯರು, 'ಗಾಂಧಿ' ಸಿನಿಮಾದಲ್ಲಿ ಡಾ. ಅಂಬೇಡ್ಕರ್ ಪಾತ್ರವನ್ನು ಸೂಕ್ತವಾಗಿ ಬಿಂಬಿಸಿಲ್ಲದಿರುವುದನ್ನು ಪ್ರತಿಭಟಿಸಿ, ಆ ಸಿನಿಮಾವನ್ನು ಪ್ರದರ್ಶಿಸದಂತೆ ಒತ್ತಾಯಿಸಿ, ಚಿತ್ರಮಂದಿರದ ಮುಂದೆ ಪ್ರತಿಭಟನೆ ನಡೆಸಿ, ಅದಕ್ಕೆ ಚಿತ್ರಮಂದಿರದ ಮಾಲೀಕರು ಒಪ್ಪದಿದ್ದಾಗ ಕಲ್ಲು ತೂರಾಟ ನಡೆಸಿದ್ದರು. ಕೊಳ್ಳೇಗಾಲ ತಾಲೂಕಿನ ಕಾಮಗೆರೆಯಲ್ಲಿ ಎರಡು ರಾಜಕೀಯ ಪಕ್ಷಗಳ ಬೆಂಬಲಿಗರ ನಡುವೆ ಘರ್ಷಣೆಯಾಗಿ ಮತೀಯಗಲಭೆ, ದೊಂಬಿಯುಂಟಾಗಿತ್ತು. ಅಸಿಸ್ಟೆಂಟ್ ಕಮೀಷನ್ನರ ವರ್ಗಾವಣೆಯನ್ನು ಪ್ರತಿಭಟಿಸಿ, ೧೯೮೭-೮೮ರಲ್ಲಿ ಕೊಳ್ಳೇಗಾಲದಲ್ಲಿ ಚಳವಳಿಯನ್ನು ಜನ ನಡೆಸಿದರು. ೧೯೮೪ರಲ್ಲಿ ಕುಂತೂರಿನ ಮಹಾದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಮುಂದೆ ೧೯೮೬ರಲ್ಲಿ ಈ ಕಾರ್ಖಾನೆಯು ಮುಚ್ಚಲ್ಪಟ್ಟಿತು. ಗುಂಡ್ಲುಪೇಟೆ ತಾಲೂಕಿನ ಹಂಗಳದಲ್ಲಿ ೧೯೮೭ ಏಪ್ರಿಲ್‌ನಲ್ಲಿ ನಡೆದ ಪ್ರಧಾನ, ಉಪಪ್ರಧಾನ ಚುನಾವಣಾ ಸಂದರ್ಭದಲ್ಲಿ ಚುನಾವಣಾ ಸಿಬ್ಬಂದಿಯನ್ನು ಕಾನೂನು ಬಾಹಿರವಾಗಿ ಕೆಲವರು ದಿಗ್ಬಂಧಿಸಿದ್ದರಿಂದ ಪೋಲೀಸರು ಲಾಟಿ ಚಾರ್ಜು ಮಾಡಿ ಗುಂಡು ಹಾರಿಸಬೇಕಾಯಿತು. ೧೯೯೧ ರ ನವೆಂಬರ್-ಡಿಸೆಂಬರ್ ತಿಂಗಳಲ್ಲಿ ಕಾವೇರಿ ಜಲ ವಿವಾದದ ಬಗ್ಗೆ ಅನೇಕ ಪ್ರತಿಭಟನೆ, ಧರಣಿ, ರಸ್ತೆ ತಡೆಗಳು ನಡೆದಿದ್ದು, ಇದೇ ಸಂದರ್ಭದಲ್ಲಿ ತಮಿಳುನಾಡಿನ ಕಡೆ ಕನ್ನಡಿಗರಿಗೆ ಅವಮಾನ ಮಾಡಿದ್ದಾರೆಂದು ವದಂತಿ ಹರಡಿದ್ದರಿಂದ ಜಿಲ್ಲೆಯ ವಿವಿದೆಡೆ ಗಲಭೆಗಳು ಉಂಟಾಗಿದ್ದು ಒಟ್ಟು ೭೦೨ ಪ್ರಕರಣಗಳು ದಾಖಲಾಗಿರುತ್ತವೆ.

**ಶ್ರೀಗಂಧ ಕಳ್ಳತನ ನಿಯಂತ್ರಣಕ್ಕೆ ವಿಶೇಷ ಅರಣ್ಯ ಪೋಲೀಸ್ ಪಡೆ:** ಬಂಡೀಪುರ, ಮದ್ದೂರು ಅರಣ್ಯ, ಬಿಳಿಗಿರಿರಂಗನ ಬೆಟ್ಟ, ಕ್ಯಾತೇದೇವರ ಗುಡಿ ಅರಣ್ಯ, ಪುಣಜೂರು ಅರಣ್ಯ (ಚಾಮರಾಜನಗರ) ರಾಮಾಪುರ, ಮಲೆಮಹದೇಶ್ವರ ಬೆಟ್ಟ, ಬೈಲೂರು ಅರಣ್ಯಗಳಲ್ಲಿ ಶ್ರೀಗಂಧದ ವೃಕ್ಷಗಳು ಸಮೃದ್ಧವಾಗಿವೆ. ಶ್ರೀಗಂಧದ ಕಳ್ಳತನ ದಂಡಾರ್ಹ ಅಪರಾಧವಾಗಿದ್ದು ಭಾರತ ದಂಡ ಸಂಹಿತೆ ೫೭೯ ಮತ್ತು ೪೧೧ರ ಪ್ರಕಾರ ಅಂತಹವರನ್ನು ಶಿಕ್ಷಿಸಬಹುದಾಗಿದ್ದು ಇದರ ನಿಯಂತ್ರಣಕ್ಕೆ ವಿಶೇಷ ಅರಣ್ಯ ಪೋಲೀಸ್ ಪಡೆಯನ್ನು ಕೊಳ್ಳೇಗಾಲವನ್ನು ಕೇಂದ್ರಸ್ಥಾನವಾಗಿಟ್ಟುಕೊಂಡು ೧೯೭೫ರಲ್ಲಿ ಆರಂಭಿಸಲಾಯಿತು. ಮುಂದೆ ೧೯೮೭ರ ವೇಳೆಗೆ ಚಾಮರಾಜನಗರ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲೂಕುಗಳ ನಿರ್ವಹಣೆಗೆಂದು ಮತ್ತೊಂದು ವಿಶೇಷ ಅರಣ್ಯ ಪೋಲೀಸ್ ಪಡೆಯನ್ನು ಆರಂಭಿಸಲಾಯಿತು.

**ಪೋಲೀಸ್ ಕಲ್ಯಾಣ ನಿಧಿ:** ಪೋಲೀಸ್ ಸಿಬ್ಬಂದಿಯ ಕಲ್ಯಾಣಕ್ಕಾಗಿ ೧೯೭೫ರಲ್ಲಿ ಪೋಲೀಸ್ ಕಲ್ಯಾಣ ನಿಧಿ ಕಾಯ್ದೆಯಡಿ ಪೋಲೀಸ್ ಕಲ್ಯಾಣ ನಿಧಿಯನ್ನು ಮೈಸೂರಿನಲ್ಲಿ ಆರಂಭಿಸಲಾಯಿತು. ಚಾಮರಾಜನಗರ ಜಿಲ್ಲೆಯಾದ ನಂತರ ೧೯೯೮ ರಿಂದ ಚಾಮರಾಜನಗರದಲ್ಲಿ ಪೋಲೀಸ್ ಕಲ್ಯಾಣ ನಿಧಿ ಕಾರ್ಯನಿರ್ವಹಿಸುತ್ತಿದೆ. ಈ ನಿಧಿಗೆ ಸಿಬ್ಬಂದಿ/ಅಧಿಕಾರಿಗಳಿಂದ ಮಾಸಿಕ ವಂತಿಗೆ ಸಂಗ್ರಹಿಸಲಾಗುವುದು. ಈ ನಿಧಿಯಿಂದ ಪೋಲೀಸು ಅಧಿಕಾರಿ/ಸಿಬ್ಬಂದಿ ಮಕ್ಕಳ ಉನ್ನತ ಶಿಕ್ಷಣಕ್ಕೆ ಅಂದರೆ ಬಿ.ಇ ವ್ಯಾಸಂಗಕ್ಕಾಗಿ ಮೊದಲ ವರ್ಷ ₹ ೧೦,೦೦೦/- ಗಳಂತೆ, ಪಿಯುಸಿ ವ್ಯಾಸಂಗಕ್ಕಾಗಿ ₹ ೭೫೦/- ಧನ ಸಹಾಯ ನೀಡಲಾಗುವುದು, ಅಲ್ಲದೆ ವೈದ್ಯಕೀಯ ವೆಚ್ಚಕ್ಕಾಗಿ ₹ ೨೦೦೦/- ರಿಂದ ₹ ೫೦೦೦/- ವರೆಗೆ ಮತ್ತು ಕನ್ನಡಕ ಖರೀದಿಗಾಗಿ ₹ ೪೦೦/- ರಂತೆ ಪೋಲೀಸ್ ಕಲ್ಯಾಣ ನಿಧಿ ಸಭೆಯಲ್ಲಿ ಮಂಜೂರು ಮಾಡಿ ನೀಡಲಾಗುವುದು.

**ಪದಕ ಗೌರವ ಪಡೆದ ಪೊಲೀಸ್ ಸಿಬ್ಬಂದಿ:** ಜಿಲ್ಲೆಯಲ್ಲಿ ದಿನಾಂಕ ೨-೦೮-೨೦೧೦ ರಿಂದ ಅಡಿಷನ್‌ಲ್ ಎಸ್.ಪಿ ಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಎಸ್.ಆರ್.ಫಣೀಂದ್ರಸಿಂಗ್ ರವರು ೨೦೦೭ರ ಇಂಡಿಪೆಂಡೆನ್ಸ್ ಡೇ ಪೊಲೀಸ್ ಪದಕವನ್ನು ಪಡೆದಿರುತ್ತಾರೆ. ಅಲ್ಲದೆ ಇವರು ೨೦೦೪-೦೫ ರಲ್ಲಿ ಎಸ್‌ಟಿಎಫ್ ಪಡೆಯಲ್ಲಿ ಅಸಿಸ್ಟೆಂಟ್ ಕಮಾಂಡೆಂಟ್ ಆಗಿ ಸಲ್ಲಿಸಿದ ಉತ್ತಮ ಕಾರ್ಯನಿರ್ವಹಣೆಗಾಗಿ ₹ ೫೦,೦೦೦/- ನಗದು ಬಹುಮಾನ ಪಡೆದಿರುತ್ತಾರೆ. ಶ್ರೀ. ಸಿ. ಬಸವರಾಜು, ಡಿವೈಎಸ್‌ಪಿ, ಚಾಮರಾಜನಗರ ರವರು ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಮುಖ್ಯ ಮಂತ್ರಿಗಳ ಪದಕವನ್ನು ಪಡೆದಿರುತ್ತಾರೆ.

**ಜಿಲ್ಲಾ ಸಾರಾಯಿ ಮತ್ತು ಲಾಟರಿ ನಿಷೇಧ ದಳ:** ೨೭-೦೬-೨೦೦೭ರ ಸರಕಾರಿ ಆಜ್ಞೆಯಂತೆ ಜಿಲ್ಲೆಗೊಂದರಂತೆ ನೂತನವಾಗಿ ಸ್ಥಾಪನೆಗೊಂಡ ಜಿಲ್ಲಾ ಸಾರಾಯಿ ಹಾಗೂ ಲಾಟರಿ ನಿಷೇಧ ದಳದಲ್ಲಿ ಒಟ್ಟು ೧೧೮ ಮಂದಿ ವಿವಿಧ ದರ್ಜೆಯ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಈ ದಳಕ್ಕೆ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಆಡಳಿತಾಧಿಕಾರಕ್ಕೆ ಒಳಪಟ್ಟಂತೆ ಕಾರ್ಯನಿರ್ವಹಿಸುವ ಇವರು ಜಿಲ್ಲೆಯಾದ್ಯಂತ ಲಾಟರಿ ಟಿಕೆಟ್ ಹಾಗೂ ಹೆಂಡದ ಮಾರಾಟಗಳನ್ನು ತಡೆಯುವ ಕಾರ್ಯನಿರ್ವಹಿಸುತ್ತಾರೆ. ಜಿಲ್ಲಾ ಕೇಂದ್ರ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಪಕ್ಕದಲ್ಲಿ ಬಾಡಿಗೆ ಕಟ್ಟಡವೊಂದರಲ್ಲಿ ಈ ದಳವು ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆ.

**ಕೋಷ್ಟಕ ೧೦.೪: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಪೊಲೀಸ್ ವರಿಷ್ಠಾಧಿಕಾರಿಗಳ ಪಟ್ಟಿ**

| ಕ್ರ.ಸಂ. | ಹೆಸರು ಶ್ರೀಯುತರು | ಅವಧಿ |
|---|---|---|
| ೧. | ಎಂ. ಎಂ. ಪ್ರಸಾದ, ಐ.ಪಿ.ಎಸ್. | ೧೫-೦೮-೧೯೯೭ ರಿಂದ ೨೨-೦೫-೧೯೯೮ |
| ೨. | ಕೆ. ಎಸ್. ಆರ್. ಚರಣರೆಡ್ಡಿ, ಐ.ಪಿ.ಎಸ್. | ೨೨-೦೫-೧೯೯೮ ರಿಂದ ೧೬-೦೧-೨೦೦೦ |
| ೩. | ಸಂಜಯ ಸಹಾಯ್, ಐ.ಪಿ.ಎಸ್. | ೧೭-೦೧-೨೦೦ ರಿಂದ ೨೦-೦೪-೨೦೦೦ |
| ೪. | ಎಸ್. ಎಸ್. ಅಣ್ಣೇಗೌಡ, ಐ.ಪಿ.ಎಸ್. | ೨೯-೦೭-೨೦೦೦ ರಿಂದ ೧-೦೮-೨೦೦೧ |
| ೫. | ಪಿ. ಹರಿಶೇಖರನ್, ಐ.ಪಿ.ಎಸ್. | ೦೧-೦೮-೨೦೦೧ ರಿಂದ ೨೭-೦೨-೨೦೦೩ |
| ೬. | ಪಿ. ಹೆಚ್. ರಾಣಿ. ಐ.ಪಿ.ಎಸ್. | ೨೭-೦೨-೨೦೦೩ ರಿಂದ ೨೯-೧೦-೨೦೦೩ |
| ೭. | ಕೆ. ಮಧುಕರ ಶೆಟ್ಟಿ, ಐ.ಪಿ.ಎಸ್. | ೨೯-೧೦-೨೦೦೩ ರಿಂದ ೧೧-೦೮-೨೦೦೪ |
| ೮. | ರವೀಂದ್ರ ಪ್ರಸಾದ, ಐ.ಪಿ.ಎಸ್. | ೬-೦೯-೨೦೦೪ ರಿಂದ ೧೦-೦೫-೨೦೦೬ |
| ೯. | ದೇವಜ್ಯೋತಿರೆ, ಐ.ಪಿ.ಎಸ್. | ೧೦-೦೫-೨೦೦೬ ರಿಂದ ೦೬-೧೦-೨೦೦೬ |
| ೧೦. | ಬಿ. ಶ್ರೀಕಂಠಪ್ಪ, ಐ.ಪಿ.ಎಸ್. | ೦೪-೦೨-೨೦೦೭ ರಿಂದ ೧೪-೦೩-೨೦೦೮ |
| ೧೧. | ಕೆ. ವಿ. ಶ್ರೀಧರ, ಐ.ಪಿ.ಎಸ್. | ೨೪-೦೩-೨೦೦೮ ರಿಂದ ೨೦-೦೬-೨೦೦೯ |
| ೧೨. | ಡಾ॥ ಟಿ. ಡಿ. ಪವಾರ, ಕೆ.ಎಸ್.ಪಿ.ಎಸ್. | ೨೦-೦೬-೨೦೦೯ ರಿಂದ ೨೬-೧೨-೨೦೦೯ |
| ೧೩. | ಬಿ. ಎಸ್. ಪ್ರಕಾಶ, ಐ.ಪಿ.ಎಸ್. | ೧೧-೦೩-೨೦೧೦ ರಿಂದ ೨೦-೦೮-೨೦೧೧ |
| ೧೪. | ಪಿ.ರಾಜೇಂದ್ರ ಪ್ರಸಾದ್, ಕೆ.ಎಸ್.ಪಿ.ಎಸ್ | ೦೬-೦೨-೨೦೧೨ ರಿಂದ ಇಲ್ಲಿಯವರೆಗೆ |

### ಕೋಷ್ಟಕ ೧೦.೫: ಚಾಮರಾಜನಗರ ಜಿಲ್ಲೆಯಲ್ಲಿ ವರದಿಯಾದ ಕೊಲೆ, ದರೋಡೆ, ಸುಲಿಗೆ, ಕಳ್ಳತನ ಇನ್ನಿತರ ಅಪರಾಧ ಪ್ರಕರಣಗಳ ವಿವರ

| ವರ್ಷ | ಕೊಲೆ | ದರೋಡೆ | ಸುಲಿಗೆ | ಕಳ್ಳತನ | ಇತರ ಕಳವು ಪ್ರಕರಣಗಳು | ಅತ್ಯಾಚಾರ ಪ್ರಕರಣಗಳು |
|---|---|---|---|---|---|---|
| ೧೯೯೭ | ೩೧ | ೦೨ | ೦೨ | ೨೦೪ | ೯೧ | ೦೪ |
| ೧೯೯೮ | ೧೫ | ೦೫ | ೧೦ | ೧೬೯ | ೮೧ | ೦೨ |
| ೧೯೯೯ | ೩೦ | ೦೪ | ೧೦ | ೧೪೧ | ೭೪ | ೦೯ |
| ೨೦೦೦ | ೨೨ | ೦೨ | ೦೪ | ೧೫೩ | ೮೧ | ೦೬ |
| ೨೦೦೧ | ೧೭ | ೦೫ | ೧೫ | ೧೧೮ | ೬೭ | ೦೩ |
| ೨೦೦೨ | ೨೬ | ೦೫ | ೦೩ | ೯೬ | ೫೬ | ೦೩ |
| ೨೦೦೩ | ೨೨ | ೦೪ | ೦೩ | ೧೨೧ | ೬೭ | ೦೫ |
| ೨೦೦೪ | ೨೧ | ೦೫ | ೦೧ | ೧೮೩ | ೬೧ | ೦೫ |
| ೨೦೦೫ | ೨೦ | ೦೬ | ೦೧ | ೧೩೫ | ೭೧ | ೦೬ |
| ೨೦೦೬ | ೧೯ | -- | ೦೧ | ೯೩ | ೫೦ | ೧೨ |
| ೨೦೦೭ | ೧೫ | ೦೧ | ೦೨ | ೮೯ | ೪೨ | ೦೪ |
| ೨೦೦೮ | ೩೦ | ೦೪ | ೧೨ | ೧೦೧ | ೯೮ | ೦೨ |
| ೨೦೦೯ | ೨೩ | ೦೨ | ೦೬ | ೭೪ | ೧೫೦ | ೦೮ |
| ೨೦೧೦ | ೩೧ | ೦೧ | ೦೭ | ೭೨ | ೧೩೪ | ೧೨ |
| ೨೦೧೧ | ೪೦ | ೦೪ | ೦೮ | ೬೪ | ೧೪೧ | ೧೧ |

### ಕೋಷ್ಟಕ ೧೦.೬: ಜಿಲ್ಲೆಯಲ್ಲಿ ವರದಿಯಾದ ಕೊಲೆ, ಅಪರಾಧಗಳಿಗೆ ಪ್ರಮುಖ ಕಾರಣಗಳು

| ವರ್ಷ | ಲೈಂಗಿಕ ಕಲಹ | ಲಾಭ | ಕೌಟುಂಬಿಕ ಕಲಹ | ವೈರತ್ವ | ಇತರೆ ಅಪರಾಧ |
|---|---|---|---|---|---|
| ೧೯೯೭ | ೩೨ | ೦೬ | ೦೪ | ೦೬ | ೦೬ |
| ೧೯೯೮ | ೦೧ | ೧೯ | ೦೬ | ೦೨ | ೦೪ |
| ೧೯೯೯ | ೦೩ | ೧೩ | ೦೭ | ೧೦ | ೧೦ |
| ೨೦೦೦ | -- | ೨೩ | ೦೪ | ೦೮ | ೦೫ |
| ೨೦೦೧ | ೦೨ | ೧೩ | ೦೫ | ೦೩ | ೦೭ |
| ೨೦೦೨ | ೦೪ | ೨೨ | ೦೬ | ೦೪ | ೦೯ |
| ೨೦೦೩ | -- | ೧೬ | ೦೭ | ೦೫ | ೦೮ |
| ೨೦೦೪ | ೦೧ | ೧೭ | ೦೪ | ೦೪ | ೧೨ |
| ೨೦೦೫ | ೦೨ | ೩೩ | ೦೩ | ೦೭ | ೦೬ |
| ೨೦೦೬ | ೦೧ | ೧೭ | ೧೧ | ೦೩ | ೦೮ |
| ೨೦೦೭ | -- | ೧೧ | ೦೧ | ೦೩ | ೦೫ |
| ೨೦೦೮ | ೦೫ | ೧೪ | ೦೭ | ೦೫ | ೧೪ |
| ೨೦೦೯ | ೦೪ | – | ೦೨ | ೦೨ | ೦೯ |
| ೨೦೧೦ | ೦೨ | – | ೦೧ | ೦೩ | ೨೨ |
| ೨೦೧೧ | ೦೧ | ೦೧ | ೦೧ | ೦೨ | ೩೦ |

**ಕೋಷ್ಟಕ ೧೦.೭: ಕಳುವಾದ ಸ್ವತ್ತುಗಳನ್ನು ಪತ್ತೆ ಮಾಡಿ ಹಿಂತಿರುಗಿಸಿದ ವಿವರ**

| ವರ್ಷ | ಸ್ವತ್ತಿನ ಮೌಲ್ಯ | | |
|---|---|---|---|
| | ಕಳುವಾದ | ಹಿಂತಿರುಗಿ ಪಡೆದ | ಶೇಕಡಾವಾರು |
| ೧೯೯೭ | ೩೪,೭೮,೬೮೫ | ೨೭,೧೧,೪೦೮ | ೭೭.೯೪ |
| ೧೯೯೮ | ೪೭,೪೩,೯೦೦ | ೧೭,೦೫,೧೦೧ | ೩೫.೯೪ |
| ೧೯೯೯ | ೨೬,೩೧,೨೫೨ | ೯,೩೩,೮೦೫ | ೩೫.೪೮ |
| ೨೦೦೦ | ೨೧,೮೪,೧೨೨ | ೯,೪೧,೭೭೭ | ೪೩.೧೨ |
| ೨೦೦೧ | ೨೩,೩೬,೯೦೮ | ೫,೭೨,೧೦೦ | ೨೪.೪೮ |
| ೨೦೦೨ | ೨೪,೧೦,೨೪೯ | ೧೯,೨೪,೩೨೭ | ೭೯.೮೪ |
| ೨೦೦೩ | ೨೫,೫೬,೦೦೬ | ೯,೯೨,೭೯೪ | ೩೮.೮೪ |
| ೨೦೦೪ | ೨೬,೬೩,೮೦೨ | ೧೭,೭೩,೦೨೮ | ೬೬.೫೬ |
| ೨೦೦೫ | ೬೨,೬೦,೩೦೨ | ೧೯,೮೬,೮೭೪ | ೩೧.೭೩ |
| ೨೦೦೬ | ೫೮,೯೮,೬೭೩ | ೧೬,೦೬,೨೭೭ | ೨೭.೨೩ |
| ೨೦೦೭ | ೩೨,೫೯,೯೧೮ | ೧೬,೦೯,೧೫೬ | ೪೯.೩೬ |
| ೨೦೦೮ | ೪೩,೪೩,೮೩೭ | ೨೪,೯೭,೯೩೮ | ೫೭.೫೦ |
| ೨೦೦೯ | ೬೯,೩೦,೧೭೬ | ೬೧,೦೮,೬೬೩ | ೮೮.೦೦ |
| ೨೦೧೦ | ೧,೪೩,೧೩,೮೫೪ | ೯೩,೭೫,೧೨೦ | ೬೫.೦೦ |
| ೨೦೧೧ | ೧,೩೨,೯೯,೬೬೦ | ೬೪,೪೬,೦೧೭ | ೪೮.೦೦ |

**ಕೋಷ್ಟಕ ೧೦.೮: ವಿವಿಧ ಅಪರಾಧ ಶೀರ್ಷಿಕೆಯಡಿ ವರದಿಯಾದ ಪ್ರಕರಣಗಳಲ್ಲಿ ವಿಚಾರಣೆ ಮೂಲಕ ಅಪರಾಧ ಸಾಬೀತಾದ ಪ್ರಕರಣಗಳ ವಿವರ**

| ವರ್ಷ | ವರದಿಯಾದ ಪ್ರಕರಣಗಳು | ವಿಚಾರಣೆ ನಡೆಸಲಾದದ್ದು | ಅಪರಾಧ ಸಾಬೀತಾದ ಪ್ರಕರಣಗಳು |
|---|---|---|---|
| ೧೯೯೭ | ೧೬೮೪ | ೧೪೦೭ | ೯೭ |
| ೧೯೯೮ | ೧೫೮೧ | ೧೩೬೭ | ೧೧೯ |
| ೧೯೯೯ | ೧೮೫೧ | ೧೪೯೪ | ೧೪೬ |
| ೨೦೦೦ | ೧೬೫೯ | ೧೩೬೯ | ೧೬೫ |
| ೨೦೦೧ | ೧೫೯೫ | ೧೩೧೭ | ೧೬೩ |
| ೨೦೦೨ | ೧೪೨೩ | ೧೨೮೪ | ೧೦೮ |
| ೨೦೦೩ | ೧೩೫೪ | ೧೧೪೦ | ೧೨೯ |
| ೨೦೦೪ | ೧೭೯೦ | ೧೫೧೬ | ೧೯೨ |
| ೨೦೦೫ | ೧೬೩೭ | ೧೪೩೬ | ೨೨೩ |
| ೨೦೦೬ | ೧೪೩೪ | ೧೨೪೯ | ೨೦೨ |
| ೨೦೦೭ | ೧೬೭೮ | ೧೪೭೭ | ೧೭೧ |
| ೨೦೦೮ | ೨೦೨೧ | ೧೪೫೯ | ೧೪೪ |
| ೨೦೦೯ | ೨೪೪೮ | ೨೩೩ | ೧೨೦ |
| ೨೦೧೦ | ೨೪೭೧ | ೮೬೮ | ೩೪೧ |
| ೨೦೧೧ | ೨೩೮೧ | ೯೨೭ | ೨೫೯ |

**ಅಸ್ವಾಭಾವಿಕ ಸಾವು:** ಕಾನೂನಿನ ಮೇರೆಗೆ ಅಸ್ವಾಭಾವಿಕ ಸಾವುಗಳನ್ನು ಪೊಲೀಸರಿಗೆ ವರದಿ ಮಾಡಬೇಕು. ಅದರಿಂದ ಸಾವಿಗೆ ವಾಸ್ತವ ಕಾರಣಗಳನ್ನು ತಿಳಿಯಬಹುದಾಗಿದೆ. ಪೊಲೀಸರು ಮೃತದೇಹಗಳನ್ನು ಕೂಲಂಕುಶ ಮರಣೋತ್ತರ ಪರೀಕ್ಷೆಗೆ ಕಳಿಸಿ, ನಂತರ ದೇಹಗಳನ್ನು ಬಂಧುಗಳಿಗೆ ಒಪ್ಪಿಸಬೇಕು.

**ಕೋಷ್ಟಕ ೧೦.೯: ಆಕಸ್ಮಿಕ ಸಾವುಗಳು ಮತ್ತು ಸಾವಿಗೆ ಕಾರಣಗಳ ವಿವರ**

| ವರ್ಷ | ಆತ್ಮಹತ್ಯೆ | ನೀರಿನಲ್ಲಿ ಮುಳುಗಿ ಸಾವು | ಹಾವು ಕಡಿತ | ವಿದ್ಯುತ್ ಶಾಕ್ | ಸಿಡಿಲು ಬಡಿತ | ವಾಹನ ಅಪಘಾತ | ಎತ್ತರದಿಂದ ಬೀಳುವುದು | ಬೆಂಕಿ ಅಪಘಾತ | ಇತರೆ ಕಾರಣಗಳು |
|---|---|---|---|---|---|---|---|---|---|
| ೧೯೯೭ | ೬೧ | ೩೦ | -- | ೦೨ | ೦೮ | ೧೯ | ೦೧ | ೩೭ | ೬೨ |
| ೧೯೯೮ | ೬೦ | ೨೪ | ೦೨ | ೦೮ | ೦೧ | ೨೦ | ೦೧ | ೨೮ | ೭೪ |
| ೧೯೯೯ | ೫೪ | ೫೨ | ೨೦ | ೦೩ | ೦೨ | ೨೩ | ೦೪ | ೪೮ | ೭೧ |
| ೨೦೦೦ | ೫೭ | ೩೮ | ೦೨ | ೦೫ | -- | ೨೪ | ೦೨ | ೨೮ | ೪೪ |
| ೨೦೦೧ | ೫೫ | ೩೩ | ೦೨ | ೦೬ | ೦೧ | ೨೬ | -- | ೨೭ | ೪೧ |
| ೨೦೦೨ | ೭೪ | ೧೪ | -- | ೦೫ | -- | ೩೭ | ೦೨ | ೩೫ | ೮೮ |
| ೨೦೦೩ | ೧೦೭ | ೩೧ | ೦೬ | ೦೬ | ೦೩ | ೨೭ | ೦೫ | ೩೫ | ೬೬ |
| ೨೦೦೪ | ೮೦ | ೨೨ | ೦೫ | ೦೪ | ೦೨ | ೪೨ | ೦೩ | ೩೦ | ೮೨ |
| ೨೦೦೫ | ೬೧ | ೪೨ | ೦೫ | ೦೨ | ೦೧ | ೪೭ | ೦೪ | ೩೫ | ೮೧ |
| ೨೦೦೬ | ೬೮ | ೪೩ | ೦೨ | ೦೮ | -- | ೩೫ | ೦೩ | ೩೧ | ೮೪ |
| ೨೦೦೭ | ೬೫ | ೨೫ | ೦೩ | ೦೪ | ೦೧ | ೩೬ | ೦೧ | ೪೯ | ೬೦ |
| ೨೦೦೮ | ೯೬ | ೩೫ | ೦೫ | ೦೭ | ೦೨ | ೬೭ | ೦೧ | ೩೫ | ೫೭ |
| ೨೦೦೯ | ೫೯ | ೫೮ | ೦೫ | ೦೩ | ೦೩ | ೧೨೬ | ೦೧ | ೩೯ | ೫೦ |
| ೨೦೧೦ | ೭೩ | ೪೫ | ೧೩ | ೦೨ | – | ೧೭೪ | ೦೬ | ೫೬ | ೬೪ |
| ೨೦೧೧ | ೭೭ | ೪೫ | ೦೯ | ೦೩ | ೦೨ | ೧೩೫ | ೦೩ | ೪೪ | ೯೩ |

**ಕೋಷ್ಟಕ ೧೦.೧೦: ವರದಿಯಾಗಿರುವ ಸಟ್ಟಾ, ಜೂಜು, ಕಳ್ಳಸಾಗಾಣಿಕೆ ಹಾಗೂ ಇನ್ನಿತರ ಪ್ರಕರಣಗಳ ವಿವರ**

| ವರ್ಷ | ಸಟ್ಟಾ | ಜೂಜು | ಕಳ್ಳಬಟ್ಟಿ | ಕಳ್ಳಸಾಗಾಣಿಕೆ | ಇದೇ ಸ್ವರೂಪದ ಇತರೆ ಪ್ರಕರಣಗಳು |
|---|---|---|---|---|---|
| ೧೯೯೭ | -- | ೨೯ | ೦೩ | -- | ೧೫ |
| ೧೯೯೮ | ೦೨ | ೩೪ | ೦೧ | ೦೧ | ೧೫ |
| ೧೯೯೯ | -- | ೨೭ | ೦೧ | ೦೧ | ೨೫ |
| ೨೦೦೦ | -- | ೩೩ | ೦೧ | ೦೧ | ೦೮ |
| ೨೦೦೧ | -- | ೪೩ | ೦೨ | ೦೬ | ೦೪ |
| ೨೦೦೨ | -- | ೨೬ | ೦೨ | ೦೩ | ೧೦ |
| ೨೦೦೩ | ೦೧ | ೩೯ | ೦೪ | ೦೩ | ೦೯ |
| ೨೦೦೪ | ೦೩ | ೪೨ | ೦೯ | ೧೪ | ೧೫ |
| ೨೦೦೫ | -- | ೬೨ | ೦೧ | ೧೦ | ೧೨ |
| ೨೦೦೬ | ೦೨ | ೪೯ | ೦೪ | ೦೬ | ೧೩ |
| ೨೦೦೭ | ೦೧ | ೭೪ | ೨೦ | ೨೮ | ೨೩ |
| ೨೦೦೮ | ೧೮ | ೬೭ | ೫೪ | ೨೪ | ೮೧ |
| ೨೦೦೯ | – | ೮೦ | ೨೮ | ೦೯ | ೨೮೧ |
| ೨೦೧೦ | – | ೧೦೩ | ೧೩ | ೨೧ | ೧೦೪ |
| ೨೦೧೧ | – | ೯೫ | ೧೨ | ೧೨ | ೧೫೩ |

**ಕೋಷ್ಟಕ ೧೦.೧೧: ಗುರುತರ ಅಥವಾ ಗಂಭೀರ ಸ್ವರೂಪದ ಸಂಜ್ಞೇಯ ಅಪರಾಧಗಳ (Cognizable Offence) ವಿವರ**

| ವರ್ಷ | ಸಾರ್ವಜನಿಕ ಶಾಂತಿ ಭಂಗ, ಭದ್ರತೆ ಮತ್ತು ನ್ಯಾಯದ ವಿರುದ್ಧದ ಅಪರಾಧ | ವ್ಯಕ್ತಿಯ ವಿರುದ್ಧದ ಗಂಭೀರ ಅಪರಾಧ | ವ್ಯಕ್ತಿಯ ಆಸ್ತಿ ಅಥವಾ ಆಸ್ತಿಯ ವಿರುದ್ಧದ ಗಂಭೀರ ಅಪರಾಧ | ವ್ಯಕ್ತಿಯ ವಿರುದ್ಧದ ಸಣ್ಣ ಅಪರಾಧ | ಆಸ್ತಿ ವಿರುದ್ಧದ ಸಣ್ಣ ಅಪರಾಧ | ಇತರೆ ಅಪರಾಧ |
|---|---|---|---|---|---|---|
| ೧೯೯೭ | ೨೭ | ೧೪ | ೧೩ | ೧೪೮ | ೪೨ | ೯೧ |
| ೧೯೯೮ | ೧೬ | ೩೧ | ೧೦ | ೮೯ | ೪೫ | ೫೫ |
| ೧೯೯೯ | ೬೮ | ೩೬ | ೧೮ | ೧೪೬ | ೧೯ | ೬೧ |
| ೨೦೦೦ | ೪೩ | ೩೦ | ೧೦ | ೧೨೮ | ೧೦ | ೭೯ |
| ೨೦೦೧ | ೫೧ | ೪೯ | ೨೮ | ೨೦೦ | ೨೭ | ೯೮ |
| ೨೦೦೨ | ೭೦ | ೪೯ | ೦೮ | ೧೪೬ | ೨೪ | ೬೯ |
| ೨೦೦೩ | ೨೯ | ೨೯ | -- | ೧೨೫ | ೩೯ | ೬೨ |
| ೨೦೦೪ | ೬೦ | ೪೩ | ೦೩ | ೧೬೬ | ೭೫ | ೮೨ |
| ೨೦೦೫ | ೫೨ | ೩೬ | ೦೨ | ೩೧೩ | ೬೪ | ೯೭ |
| ೨೦೦೬ | ೫೬ | ೩೭ | ೧೪ | ೧೮೮ | ೩೨ | ೮೫ |
| ೨೦೦೭ | ೭೧ | ೭೨ | ೦೨ | ೧೯೫ | ೪೨ | ೧೦೧ |
| ೨೦೦೮ | ೧೦೨ | ೩೬ | ೦೭ | ೨೦೨ | ೨೪ | ೯೮ |
| ೨೦೦೯ | ೧೯೪ | ೪೫ | ೦೫ | ೨೧೪ | ೫೨ | ೧೧೨ |
| ೨೦೧೦ | ೧೮೯ | ೪೭ | ೦೮ | ೨೩೨ | ೪೮ | ೧೩೮ |
| ೨೦೧೧ | ೧೨೪ | ೫೨ | ೦೭ | ೨೧೦ | ೩೯ | ೯೫ |

## ಮೋಟಾರು ವಾಹನ ತಪಾಸಣೆ

ಜಿಲ್ಲಾ ಪೊಲೀಸು ಇಲಾಖೆಯ ಸಂಚಾರಿ ಪೊಲೀಸು ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿಗಳು ಜಿಲ್ಲೆಯಲ್ಲಿ ವಾಹನ ದಟ್ಟಣೆ ಇರುವ ಪ್ರದೇಶ ಹಾಗೂ ಸಮಯದಲ್ಲಿ ಆಯಕಟ್ಟಿನ ಜಾಗಗಳಲ್ಲಿ ಮೋಟಾರು ವಾಹನಗಳ ಸಕಾಲಿಕ ತನಿಖೆ ಹಾಗೂ ತಪಾಸಣೆ ಕೈಗೊಳ್ಳುವ ಮೂಲಕ ಸಂಚಾರಿ ಸುವ್ಯವಸ್ಥೆ ಕಾಪಾಡಲಾಗಿದೆ. ಸಂಚಾರ ನಿಯಮಗಳ ಪಾಲನೆ, ಸಂಚಾರ ಸುರಕ್ಷತೆ ಮುಂತಾದವುಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಾಗೃತಿ ಅಭಿಯಾನವನ್ನು ಮತ್ತು ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಸಂಚಾರಿ ಸುರಕ್ಷತಾ ಸಪ್ತಾಹವನ್ನು ಹಮ್ಮಿಕೊಳ್ಳಲಾಗುತ್ತದೆ. ರಸ್ತೆ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸ್ಥಳದಲ್ಲೇ ದಂಡವನ್ನು ವಿಧಿಸಿ ಸಂಚಾರಿ ನಿಯಮಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ.

**ಕೋಷ್ಟಕ ೧೦.೧೨: ಜಿಲ್ಲೆಯಲ್ಲಿ ವಿವಿಧ ಮೋಟಾರು ವಾಹನಗಳಿಂದಾದ ಅಪಘಾತಗಳ ವಿವರ**

| ವರ್ಷ | ಕಾರು | ಬಸ್ಸು | ಲಾರಿ | ಮೋಟಾರ್ ಸೈಕಲ್ | ಮ್ಯಾಕ್ಸಿಕಾಬ್, ಜೀಪು, ಟ್ಯಾಕ್ಸಿ | ಆಟೋ | ಇತರೆ ವಾಹನಗಳು |
|---|---|---|---|---|---|---|---|
| ೧೯೯೭ | ೨೧ | ೩೨ | ೨೫ | ೫೩ | ೧೩ | ೧೧ | ೧೬ |
| ೧೯೯೮ | ೧೧ | ೪೭ | ೩೦ | ೩೭ | ೧೪ | ೧೧ | ೨೪ |
| ೧೯೯೯ | ೧೦ | ೪೫ | ೩೪ | ೬೭ | ೧೫ | ೧೩ | ೧೪ |
| ೨೦೦೦ | ೧೫ | ೪೧ | ೩೩ | ೫೫ | ೧೮ | ೧೨ | ೧೦ |
| ೨೦೦೧ | ೧೮ | ೩೮ | ೪೦ | ೮೬ | ೨೪ | ೦೮ | ೨೦ |
| ೨೦೦೨ | ೧೭ | ೩೦ | ೪೬ | ೭೬ | ೨೨ | ೧೮ | ೨೦ |
| ೨೦೦೩ | ೨೫ | ೩೬ | ೩೭ | ೬೪ | ೧೯ | ೧೧ | ೨೨ |
| ೨೦೦೪ | ೨೪ | ೪೮ | ೩೯ | ೭೭ | ೨೫ | ೧೪ | ೧೯ |
| ೨೦೦೫ | ೨೨ | ೪೪ | ೩೫ | ೧೦೪ | ೩೦ | ೨೪ | ೩೩ |
| ೨೦೦೬ | ೨೬ | ೪೮ | ೩೪ | ೧೦೨ | ೨೯ | ೨೨ | ೫೫ |
| ೨೦೦೭ | ೨೭ | ೪೧ | ೩೯ | ೧೧೫ | ೩೩ | ೨೪ | ೩೯ |
| ೨೦೦೮ | ೩೫ | ೪೯ | ೫೧ | ೩೬ | ೪೨ | ೪೪ | ೫೪ |
| ೨೦೦೯ | ೭೫ | ೫೪ | ೬೫ | ೧೧೮ | ೮೮ | ೨೭ | ೨೭ |
| ೨೦೧೦ | ೮೧ | ೭೭ | ೭೧ | ೧೨೭ | ೭೧ | ೫೫ | ೭೭ |
| ೨೦೧೧ | ೮೨ | ೪೯ | ೬೦ | ೧೩೧ | ೫೪ | ೫೦ | ೯೫ |

**ಕೋಷ್ಟಕ ೧೦.೧೩: ಜಿಲ್ಲೆಯಲ್ಲಿ ಸಂಚಾರಿ ನಿಯಮವನ್ನು ಉಲ್ಲಂಘಿಸಿದ ಪ್ರಕರಣಗಳ ವಿವರ**

| ವರ್ಷ | ಅತಿ ವೇಗ | ಸಂಚಾರಿ ಫಲಕಗಳಲ್ಲಿನ ನಿಯಮಗಳ ಉಲ್ಲಂಘನೆ | ದೋಷ ಪೂರ್ಣ ವಾಹನಗಳು | ಸಂಚಾರ ರಹದಾರಿ ಇಲ್ಲದೆ ಸಂಚರಿಸುವುದು | ವಾಹನ ಸಂಚಾರ ಅನುಮತಿ ಇಲ್ಲದೆ ಚಲಿಸುವುದು | ಲಾರಿಗಳಲ್ಲಿ ಅತಿಕ್ರಮವಾಗಿ ಪ್ರಯಾಣಿಕರನ್ನು ಕರೆದು ಕೊಂಡು ಹೋಗುವುದು | ಶುಲ್ಕ ಕೊಡದೆ ಇರುವುದು | ಅತಿ ಹೆಚ್ಚು ಸರಕು/ ಪ್ರಯಾಣಿಕರನ್ನು ತುಂಬುವುದು |
|---|---|---|---|---|---|---|---|---|
| ೧೯೯೭ | ೩೨೧ | ೧೬೯ | ೫೦ | ೩೦೯ | ೩೧ | ೩೦ | -- | ೧೮೯ |
| ೧೯೯೮ | ೩೩೦ | ೧೩೧ | ೨೯ | ೨೫೫ | ೧೩ | ೬೮ | ೦೧ | ೧೫೧ |
| ೧೯೯೯ | ೩೧೧ | ೧೮೬ | ೪೮ | ೨೭೩ | ೧೬ | ೮೦ | -- | ೨೨೧ |
| ೨೦೦೦ | ೨೫೫ | ೧೭೯ | ೫೬ | ೩೧೨ | ೦೯ | ೧೧೯ | -- | ೨೯೬ |
| ೨೦೦೧ | ೨೮೫ | ೨೨೮ | ೬೧ | ೨೯೦ | ೧೮ | ೮೧ | -- | ೨೫೧ |
| ೨೦೦೨ | ೩೫೦ | ೧೬೧ | ೫೭ | ೩೦೭ | ೧೮ | ೩೫ | ೦೭ | ೨೫೫ |
| ೨೦೦೩ | ೪೦೧ | ೧೨೩ | ೧೧೮ | ೪೪೭ | ೧೦೪ | ೧೧ | -- | ೨೫೯ |
| ೨೦೦೪ | ೪೮೫ | ೩೪೧ | ೧೭೪ | ೯೮೯ | ೨೨೨ | ೪೯ | -- | ೪೦೭ |
| ೨೦೦೫ | ೪೫೧ | ೨೬೮ | ೨೧೬ | ೯೯೩ | ೧೪೫ | ೯೮ | -- | ೩೪೭ |
| ೨೦೦೬ | ೫೦೭ | ೨೨೪ | ೧೭೭ | ೯೬೬ | ೨೨೭ | ೯೬ | -- | ೪೯೫ |
| ೨೦೦೭ | ೭೭೩ | ೩೨೮ | ೫೮೯ | ೧೦೬೪ | ೫೨೪ | ೧೪೭ | ೦೭ | ೧೦೪೦ |
| ೨೦೦೮ | ೬೨೯ | ೨೧೬ | ೨೦೮ | ೮೯೩ | ೨೯೯ | ೧೦೨ | ೦೧ | ೮೦೦ |
| ೨೦೦೯ | ೫೭ | – | ೩೨ | ೧೯೫೯ | – | ೩೧೧ | – | ೧೬೩ |
| ೨೦೧೦ | ೪೮ | – | ೨೯ | ೧೬೩೦ | – | ೧೬೮ | – | ೧೩೪ |
| ೨೦೧೧ | ೬೪ | – | ೩೭ | ೧೭೧೫ | – | ೧೭೫ | – | ೧೬೮ |

**ಕೋಷ್ಟಕ ೧೦.೧೪: ಜಿಲ್ಲೆಯಲ್ಲಿ ವಿವಿಧ ಅಪಘಾತಗಳಲ್ಲಿ ಮೃತರು ಹಾಗೂ ಗಾಯಗೊಂಡವರ ವಿವರ**

| ವರ್ಷ | ಅಪಘಾತದಲ್ಲಿ ಸತ್ತವರು | ಅಪಘಾತದಲ್ಲಿ ಗಾಯಗೊಂಡವರು |
|---|---|---|
| ೧೯೯೭ | ೪೩ | ೧೪೭ |
| ೧೯೯೮ | ೪೧ | ೧೫೬ |
| ೧೯೯೯ | ೪೨ | ೧೬೨ |
| ೨೦೦೦ | ೪೨ | ೨೨೪ |
| ೨೦೦೧ | ೪೭ | ೨೧೩ |
| ೨೦೦೨ | ೫೫ | ೨೪೯ |
| ೨೦೦೩ | ೬೧ | ೧೯೮ |
| ೨೦೦೪ | ೬೯ | ೩೧೫ |
| ೨೦೦೫ | ೬೩ | ೩೫೭ |
| ೨೦೦೬ | ೭೦ | ೩೯೬ |
| ೨೦೦೭ | ೯೧ | ೪೮೭ |
| ೨೦೦೮ | ೮೩ | ೪೩೨ |
| ೨೦೦೯ | ೧೨೭ | ೭೦೪ |
| ೨೦೧೦ | ೧೮೪ | ೭೪೩ |
| ೨೦೧೧ | ೧೩೩ | ೬೬೮ |

**ಕೋಷ್ಟಕ ೧೦.೧೫: ವೇಶ್ಯವಾಟಿಕೆ ನಿರ್ಮೂಲನಾ ಅಧಿನಿಯಮದಡಿ ದಾಖಲಿಸಲಾದ ಪ್ರಕರಣಗಳ ವಿವರ**

| ವರ್ಷ | ಹೂಡಲಾದ ಪ್ರಕರಣಗಳ ಸಂಖ್ಯೆ | ಅಪರಾಧ ಸಾಬೀತಾದ ಸಂಖ್ಯೆ | ಖುಲಾಸೆಯಾದವರ ಸಂಖ್ಯೆ | ವಿಚಾರಣೆ ಬಾಕಿಯಿರುವ ಪ್ರಕರಣಗಳ ಸಂಖ್ಯೆ |
|---|---|---|---|---|
| ೧೯೯೭ | -- | -- | -- | -- |
| ೧೯೯೮ | -- | -- | -- | -- |
| ೧೯೯೯ | ೦೪ | ೦೪ | -- | -- |
| ೨೦೦೦ | -- | -- | -- | -- |
| ೨೦೦೧ | -- | -- | -- | -- |
| ೨೦೦೨ | -- | -- | -- | -- |
| ೨೦೦೩ | ೦೯ | ೦೧ | ೦೮ | -- |
| ೨೦೦೪ | ೦೭ | ೦೧ | ೦೬ | -- |
| ೨೦೦೫ | ೨೧ | ೦೨ | ೧೯ | -- |
| ೨೦೦೬ | -- | -- | -- | -- |
| ೨೦೦೭ | ೧೬ | ೧೦ | ೦೬ | -- |
| ೨೦೦೮ | ೦೭ | ೦೬ | ೦೧ | -- |
| ೨೦೦೯ | ೦೪ | ೦೪ | – | – |
| ೨೦೧೦ | ೦೧ | – | – | ೦೧ |
| ೨೦೧೧ | – | – | – | – |

**ಕೋಷ್ಟಕ ೧೦.೧೬ : ಜಿಲ್ಲೆಯಲ್ಲಿ ಪೊಲೀಸು ಫಿರ್ಯಾದಿಗೆ ಬಂದ ಪ್ರಕರಣಗಳ ವಿವರ**

| ವರ್ಷ | ನ್ಯಾಯಾಲಯದಲ್ಲಿ ಇತ್ಯರ್ಥವಾದ ಪ್ರಕರಣಗಳು | ಆರೋಪ ಸಾಬೀತಾದ ಪ್ರಕರಣಗಳು | ಖುಲಾಸ ಅಥವಾ ಬಿಡುಗಡೆಯಾದ ಪ್ರಕರಣಗಳು | ರಾಜಿಯಾದ ಪ್ರಕರಣಗಳು | ಆರೋಪ ಸಾಬೀತಾದ ಶೇಕಡಾವಾರು ಪ್ರಕರಣಗಳು | ಜಾಮೀನು ಮೇಲೆ ಬಿಡುಗಡೆಯಾದವರ ಸಂಖ್ಯೆ |
|---|---|---|---|---|---|---|
| ೧೯೯೭ | ೧೧೧೩ | ೧೦೮ | ೮೦೦ | ೧೫೮ | ೯.೭೦ | ೯೯೫ |
| ೧೯೯೮ | ೧೧೦೨ | ೧೧೭ | ೭೮೨ | ೧೫೬ | ೧೦.೬೧ | ೧೦೯೪ |
| ೧೯೯೯ | ೧೧೬೫ | ೧೭೮ | ೭೬೪ | ೧೯೬ | ೧೫.೨೭ | ೯೮೩ |
| ೨೦೦೦ | ೧೨೭೮ | ೨೦೪ | ೬೯೦ | ೩೬೬ | ೧೫.೯೬ | ೧೧೧೮ |
| ೨೦೦೧ | ೧೦೮೨ | ೧೮೨ | ೬೫೧ | ೨೩೮ | ೧೬.೮೨ | ೧೩೨೫ |
| ೨೦೦೨ | ೧೦೨೯ | ೧೪೦ | ೬೬೯ | ೨೦೨ | ೧೩.೬೦ | ೧೦೬೮ |
| ೨೦೦೩ | ೧೦೩೭ | ೨೧೧ | ೬೬೩ | ೧೪೬ | ೨೦.೩೪ | ೯೮೧ |
| ೨೦೦೪ | ೧೪೨೨ | ೨೧೩ | ೯೭೬ | ೧೯೩ | ೧೪.೯೭ | ೧೨೬೦ |
| ೨೦೦೫ | ೧೨೨೦ | ೨೪೭ | ೭೯೬ | ೧೪೫ | ೨೦.೨೪ | ೧೪೮೦ |
| ೨೦೦೬ | ೧೧೩೦ | ೨೩೫ | ೬೮೭ | ೧೫೩ | ೨೦.೭೯ | ೧೦೩೦ |
| ೨೦೦೭ | ೮೫೦ | ೨೬೧ | ೫೫೪ | ೫೦ | ೩೦.೭೦ | ೯೩೭ |
| ೨೦೦೮ | ೯೦೯ | ೨೯೪ | ೫೦೩ | ೯೩ | ೩೨.೩೪ | ೧೧೦೩ |
| ೨೦೦೯ | ೨೩೩ | ೧೨೦ | ೯೮ | ೧೫ | ೫೧.೦೦ | ೧೮೫೦ |
| ೨೦೧೦ | ೮೬೮ | ೩೪೧ | ೫೧೦ | ೧೭ | ೪೦.೦೦ | ೨೬೮೦ |
| ೨೦೧೧ | ೯೨೭ | ೨೫೯ | ೬೦೪ | ೬೪ | ೩೦.೦೦ | ೩೨೭೨ |

*ಆಧಾರ: ಜಿಲ್ಲಾ ಪೊಲೀಸ್ ಇಲಾಖೆ, ಚಾಮರಾಜನಗರ*

## ವಿಶೇಷ ಕಾರ್ಯಾಚರಣೆ ಪಡೆ (ಎಸ್. ಟಿ. ಎಫ್)

ಕಾಡುಗಳ್ಳ, ನರಹಂತಕ ವೀರಪ್ಪನ್ ಮತ್ತು ಆತನ ತಂಡದವರ ವಿರುದ್ಧ ಕಾರ್ಯಾಚರಣೆಗಾಗಿ ವಿಶೇಷ ಕಾರ್ಯಾಚರಣೆಪಡೆ ೧೯೯೩ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಪಡೆಯ ಮೊದಲನೆಯ ಮುಖ್ಯಸ್ಥರಾಗಿ ೧೯೯೬ರವರೆಗೆ ಶ್ರೀ ಶಂಕರ ಮಹದೇವ ಬಿದರಿ, ಐ.ಪಿ.ಎಸ್. ಕಾರ್ಯನಿರ್ವಹಿಸಿರುತ್ತಾರೆ, ನಂತರ ೧೯೯೬ ರಿಂದ ೧೯೯೭ ರ ವರೆಗೆ ಶ್ರೀ ಶ್ರೀವಾಸ್ತವ, ಐ.ಪಿ.ಎಸ್., ೧೯೯೭ ರಿಂದ ೨೦೦೦ದ ವರೆಗೆ ಶ್ರೀ ಹರ್ಷವರ್ಧನರಾಜು, ಐ.ಪಿ.ಎಸ್., ೨೦೦೦ ರಿಂದ ೨೦೦೨ರ ವರೆಗೆ ಶ್ರೀ ಕೆಂಪಯ್ಯ, ಐ.ಪಿ.ಎಸ್. ಹಾಗೂ ೨೦೦೨ ರಿಂದ ೨೦೦೫ರ ವರೆಗೆ ಶ್ರೀ ಜ್ಯೋತಿಪ್ರಕಾಶ ಮಿರ್ಜಿ, ಐ.ಪಿ.ಎಸ್. ತಂಡದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿರುತ್ತಾರೆ. ದಿನಾಂಕ ೧೮-೧೦-೨೦೦೪ ರಂದು ವೀರಪ್ಪನ್ ಹಾಗೂ ಆತನ ಮೂರು ಜನ ಸಹಚರರು ಹತರಾದ ಹಿನ್ನೆಲೆಯಲ್ಲಿ ವೀರಪ್ಪನ್ ವಿರುದ್ದದ ವಿಶೇಷ ಕಾರ್ಯಾಚರಣೆ ಪಡೆ ೨೦೦೫ರಲ್ಲಿ ಮುಕ್ತಾಯಗೊಂಡಿರುತ್ತದೆ.

## ಕಾಡುಗಳ್ಳ ವೀರಪ್ಪನ್

ವೀರಪ್ಪನ್ ಅಲಿಯಾಸ್ ಮೊಳಕ್ಕನ್ ಬಿನ್ ಕೂಸನ್ ಮುನಿಸ್ವಾಮಿ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕು, ಗೋಪಿನಾಥಪುರಂ ಗ್ರಾಮದ ಪಡಿಯಚ್ಚಿ ಗೌಂಡರ್ ಜನಾಂಗಕ್ಕೆ ಸೇರಿದ್ದು, ಸಣ್ಣ ವಯಸ್ಸಿನಿಂದಲೂ ಆನೆ ಹತ್ಯೆ ಮಾಡುವವರ ಗುಂಪಿನ ಜೊತೆ ಗುರುತಿಸಿಕೊಂಡಿದ್ದು, ೧೯೭೮ರಲ್ಲಿ ಪರಶಿವ ಎಂಬುವವನನ್ನು

ಕೊಲೆ ಮಾಡುವುದರ ಮೂಲಕ ಬೆಳಕಿಗೆ ಬಂದು, ಆನಂತರ ಅನೇಕ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಇವನ ಮೇಲೆ ೦೫ ಟಾಡಾ ಪ್ರಕರಣಗಳೂ ಸೇರಿದಂತೆ ಚಾಮರಾಜನಗರ ಜಿಲ್ಲೆಯಲ್ಲಿ ೮೧ ಪ್ರಕರಣಗಳು, ಮಡಿಕೇರಿ(ಕೊಡಗು) ಜಿಲ್ಲೆಯ ಪೊನ್ನಂಪೇಟೆಯಲ್ಲಿ ೦೧ ಪ್ರಕರಣ ದಾಖಲಾಗಿದ್ದು ನೆರೆಯ ತಮಿಳುನಾಡು ರಾಜ್ಯದಲ್ಲಿ ೧೦೪ ಪ್ರಕರಣಗಳು ದಾಖಲಾಗಿತ್ತು. ದಿನಾಂಕ ೧೮-೧೦-೨೦೦೪ ರಂದು ವೀರಪ್ಪನ್ ಸಹಚರರು ಹಾಗೂ ತಮಿಳುನಾಡಿನ ಪೊಲೀಸರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ವೀರಪ್ಪನ್ ಹತನಾದ. ವೀರಪ್ಪನ್ ಪ್ರಕರಣದಲ್ಲಿ ಒಟ್ಟು ೨೭ ಮಂದಿ ಪೊಲೀಸರು, ಆರು ಮಂದಿ ಅರಣ್ಯ ಸಿಬ್ಬಂದಿ, ೩೯ ಮಂದಿ ಸಾರ್ವಜನಿಕರು ಹತರಾಗಿದ್ದು, ೪೬ ಪೊಲೀಸರು, ಒಬ್ಬರು ಅರಣ್ಯ ಇಲಾಖೆಯವರು ಹಾಗೂ ೦೪ ಮಂದಿ ಸಾರ್ವಜನಿಕರು ಗಾಯಗೊಂಡಿದ್ದಾರೆ. ಅಲ್ಲದೆ ೧೨ ಮಂದಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಒಂಬತ್ತು ಮಂದಿ ಸಾರ್ವಜನಿಕರು ಅಪಹರಣ ಪ್ರಯತ್ನಕ್ಕೊಳಗಾಗಿದ್ದರು.

ಜುಲೈ ೩೦, ೨೦೦೦ ರಂದು ವೀರಪ್ಪನ್ ಮತ್ತವನ ಸಂಗಡಿಗರು ವರನಟ ಡಾ॥ ರಾಜಕುಮಾರ್‌ರವರನ್ನು ಚಾಮರಾಜನಗರ ಜಿಲ್ಲೆಯ ಗಡಿಯಂಚಿನ ತಮಿಳುನಾಡಿನ ತಾಳವಾಡಿ ಸಮೀಪದ ದೊಡ್ಡಗಾಜನೂರು ಗ್ರಾಮದಿಂದ ನಾಗೇಶ್ ಹಾಗೂ ಮಾರಡಗಿ ನಾಗಪ್ಪರವರೊಂದಿಗೆ ಅಪಹರಣ ಮಾಡಿದಾಗ ರಾಜ್ಯಾದ್ಯಂತ ಅನೇಕ ಪ್ರತಿಭಟನೆಗಳು ನಡೆದವು. ಅಂತಿಮವಾಗಿ ಡಾ॥ ರಾಜಕುಮಾರ್ ಹಾಗೂ ನಾಗೇಶ್ ದಿನಾಂಕ ೧೫-೧೧-೨೦೦೦ ರಂದು ಸುರಕ್ಷಿತವಾಗಿ ಬಿಡುಗಡೆಯಾದರು.

ಮಾಜಿ ಸಚಿವ ಹೆಚ್. ನಾಗಪ್ಪರವರನ್ನು ೨೦೦೨ ಆಗಸ್ಟ್ ೨೫ ರಂದು ರಾತ್ರಿ ಕಾಮಗೆರೆಯ ಅವರ ಸ್ವಗೃಹದಿಂದ ವೀರಪ್ಪನ್ ಮತ್ತು ಅವನ ಸಂಗಡಿಗರು ಅಪಹರಣ ಮಾಡಿದ್ದರು. ಆನಂತರ ಅವರನ್ನು ದಿನಾಂಕ ೮-೧೨-೨೦೦೨ ರಂದು ಹತ್ಯೆ ಮಾಡಿರುವುದಾಗಿ ಮಾಹಿತಿ ಬಂದು ನಂತರ ಶವವು ಚಂಗಾಡಿ ಪ್ರದೇಶದಲ್ಲಿ ಪತ್ತೆಯಾಯಿತು. ಈ ಸಂಬಂಧ ಜಿಲ್ಲೆಯಾದ್ಯಂತ ಕಾನೂನು ಸುವ್ಯವಸ್ಥೆ ಹದಗೆಟ್ಟದ್ದು ಕೊಳ್ಳೆಗಾಲ ತಾಲೂಕಿನಲ್ಲಿ ೧೪೯ ಪ್ರಕರಣಗಳು, ಚಾಮರಾಜನಗರ ಪಟ್ಟಣದಲ್ಲಿ ೦೧ ಪ್ರಕರಣ ದಾಖಲಾಗಿತ್ತು.

## ಲೋಕಾಯುಕ್ತ ಕಾರ್ಯಾಲಯ, ಚಾಮರಾಜನಗರ

ಜೂನ್ ೦೨, ೨೦೦೩ರಂದು ಈ ಕಚೇರಿಯು ಜಿಲ್ಲೆಯಲ್ಲಿ ಕಾರ್ಯಾರಂಭ ಮಾಡಿದ್ದು,ಇದರ ವ್ಯಾಪ್ತಿಯು ಜಿಲ್ಲೆಯ ಎಲ್ಲಾ ತಾಲೂಕುಗಳನ್ನೊಳಗೊಂಡಿರುತ್ತದೆ. ಅದಕ್ಕೂ ಮೊದಲು ಹಿಂದಿನ ಜಿಲ್ಲಾ ಕೇಂದ್ರ ಮೈಸೂರಿನಲ್ಲಿದ್ದ ಲೋಕಾಯುಕ್ತರ ನಿಯಂತ್ರಣಕ್ಕೆ ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶವು ಒಳಪಟ್ಟಿತ್ತು. ೨೦೧೨ ಜುಲೈನಲ್ಲಿದಂತೆ ಇದು ಡಿ.ಎಸ್.ಪಿ. ದರ್ಜೆಯ ಅಧಿಕಾರಿಯ ಆಡಳಿತದಲ್ಲಿ ಇಬ್ಬರು ಇನ್ಸ್‌ಪೆಕ್ಟರ್, ಐದು ಮಂದಿ ಮುಖ್ಯ ಪೇದೆಗಳು (ಒಂದು ಸ್ಥಾನ ಖಾಲಿ), ಮೂರು ಮಂದಿ ಪೇದೆಗಳು (ಒಂದು ಸ್ಥಾನ ಖಾಲಿ) ನಾಲ್ಕು ಮಂದಿ ಎ.ಪಿ.ಸಿಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಲೋಕಾಯುಕ್ತ ಕಚೇರಿಗೆ ಬಂದ ಬ್ರಷ್ಟಾಚಾರದ ಅರ್ಜಿಗಳು ಮತ್ತು ದೂರುಗಳನ್ನು ದಾಖಲಿಸಿ ತನಿಖೆ ಕೈಗೊಂಡು ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳಿಸಲಾಗುತ್ತದೆ. ಕಚೇರಿ ಆರಂಭಿಕ ವರ್ಷ ೨೦೦೩ರಿಂದ ೨೦೧೧ ರವರೆಗೆ ಭ್ರಷ್ಟಾಚಾರ ನಿರ್ಮೂಲನಾ ಕಾನೂನಿನಡಿಯಲ್ಲಿ ಹೂಡಲಾದ ಮೊಕದ್ದಮೆಗಳ ವರ್ಷವಾರು ವಿವರ ಈ ಕೆಳಗಿನಂತಿದೆ.

**ಕೋಷ್ಟಕ ೧೦.೧೭: ಭ್ರಷ್ಟಾಚಾರ ನಿರ್ಮೂಲನಾ ಕಾನೂನಿನಡಿಯಲ್ಲಿ ಹೂಡಲಾದ ಮೊಕ್ಕದ್ದಮೆಗಳ ವಿವರ**

| ವರ್ಷ | ಹೂಡಲಾದ ಮೊಕದ್ದಮೆಗಳ ಸಂಖ್ಯೆ | ಇತ್ಯರ್ಥಗೊಂಡ ಮೊಕದ್ದಮೆಗಳ ಸಂಖ್ಯೆ | ಬಾಕಿ ಇರುವ ಮೊಕದ್ದಮಗಳ ಸಂಖ್ಯೆ |
|---|---|---|---|
| ೨೦೦೩ | ೦೧ | ೦೧ | – |
| ೨೦೦೪ | – | – | – |
| ೨೦೦೫ | ೦೪ | ೦೪ | – |
| ೨೦೦೬ | ೦೨ | ೦೨ | – |
| ೨೦೦೭ | ೦೪ | ೦೩ | ೦೧ |
| ೨೦೦೮ | ೦೬ | ೦೧ | ೦೫ |
| ೨೦೦೯ | ೦೬ | ೦೧ | ೦೫ |
| ೨೦೧೦ | ೦೭ | ೦೨ | ೦೫ |
| ೨೦೧೧ | ೧೦ | – | ೧೦ |

*ಆಧಾರ: ಲೋಕಾಯುಕ್ತ ಕಚೇರಿ, ಚಾಮರಾಜನಗರ.*

## ಗೃಹರಕ್ಷಕ ದಳ

ಗೃಹರಕ್ಷಕ ದಳವು ಮೂಲತಃ ಸ್ವಯಂ ಸೇವಾಸಂಸ್ಥೆಯಾಗಿದ್ದು, ೧೯೪೬ರಲ್ಲಿ ಮುಂಬಯಿಯಲ್ಲಿ ಪ್ರಾರಂಭಗೊಂಡಿತು. ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಗೃಹರಕ್ಷಕದಳ ಆರಂಭಿಸುವುದಕ್ಕಾಗಿ ೧೮ನೇ ಡಿಸೆಂಬರ್ ೧೯೬೨ರಲ್ಲಿ ಕರ್ನಾಟಕ ಗೃಹರಕ್ಷಕರ ಕಾಯಿದೆಯನ್ನು ಹೊರಡಿಸಿತು. ೧೯೭೦ರವರೆಗೂ ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರದಲ್ಲಿ ಗೃಹರಕ್ಷಕದಳವು ೧೯೬೭ರಲ್ಲಿ ಪ್ರಾರಂಭವಾಗಿರುತ್ತದೆ, ಮತ್ತು ನೂತನ ಜಿಲ್ಲೆಯಾದ ನಂತರ ಜುಲೈ ಒಂದು, ೨೦೦೨ ರಿಂದ ಜಿಲ್ಲಾ ಗೃಹರಕ್ಷಕದಳ ಅಸ್ತಿತ್ವಕ್ಕೆ ಬಂದಿರುತ್ತದೆ. ಜಿಲ್ಲೆಯಲ್ಲಿ ಗೃಹರಕ್ಷಕದಳದ ಘಟಕಗಳು, ಚಾಮರಾಜನಗರ (೧೯೬೭ ಏಪ್ರಿಲ್), ಕೊಳ್ಳೇಗಾಲ (೧೯೭೦ ಏಪ್ರಿಲ್), ಯಳಂದೂರು ಹಾಗೂ ಗುಂಡ್ಲುಪೇಟೆ (೧೯೭೩ ಜುಲೈ) ಕುದೇರು (ಉಪಘಟಕ ೨-೦೮-೨೦೦೪), ಹನೂರು (ಉಪಘಟಕ ೨-೦೮-೨೦೦೪), ತೆರಕಣಾಂಬಿ (ಉಪಘಟಕ ೪-೧೧-೨೦೦೭), ಅಗರ-ಮಾಂಬಳ್ಳಿ (ಉಪಘಟಕ ೨೪-೦೨-೨೦೦೯), ರಾಮಪುರ (ಉಪಘಟಕ ಏಪ್ರಿಲ್ ೨೦೧೧), ಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಗೃಹರಕ್ಷಕನಾಗಲು ಬಯಸುವ ವ್ಯಕ್ತಿಯು ಭಾರತೀಯ ಪ್ರಜೆಯಾಗಿರಬೇಕು, ಯಾವುದೇ ಶಿಕ್ಷೆಗೆ ಒಳಗಾಗಿರಬಾರದು, ದೈಹಿಕವಾಗಿ ಮತ್ತು ಮಾನಸಿಕವಾಗಿ ಸಧೃಡರಾಗಿರಬೇಕು. ೨೦ ರಿಂದ ೪೫ ವರ್ಷ ವಯೋಮಿತಿಯೊಳಗೆ ಇದ್ದು, ಕನಿಷ್ಠ ನಾಲ್ಕನೇ ತರಗತಿ ವಿದ್ಯಾರ್ಹತೆ ಹೊಂದಿರಬೇಕು, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರಬಾರದು. ಗೃಹರಕ್ಷಕನ ಸೇವಾವಧಿ ಮೂರು ವರ್ಷಗಳು, ಆದರೆ ಈ ಅವಧಿಯನ್ನು ಮರುನೇಮಕಾತಿಯಿಂದ ಪ್ರತಿ ಮೂರು ವರ್ಷಕ್ಕೆ ನವೀಕರಿಸಬಹುದು. ಗೃಹರಕ್ಷಕರಿಗೆ ನಾಯಕತ್ವ ತರಬೇತಿ, ಪ್ರಥಮ ಚಿಕಿತ್ಸೆ ತರಬೇತಿ, ಅಗ್ನಿ ಶಮನ ತರಬೇತಿ, ಪ್ರವಾಹ ರಕ್ಷಣೆಗೆ ತರಬೇತಿ, ಆಯುಧ ತರಬೇತಿ, ಕಮ್ಯೂನಿಕೇಷನ್ ತರಬೇತಿ, ಕಾನೂನು ಮತ್ತು ಶಾಂತಿ ಪಾಲನಾ ತರಬೇತಿ, ಸಂಚಾರ ನಿಯಂತ್ರಣ ತರಬೇತಿ, ವಿಪತ್ತು ನಿರ್ವಹಣಾ ತರಬೇತಿ, ಮುಂಗಡ ರಕ್ಷಣಾ ತರಬೇತಿ, ಮುಂತಾದ ತರಬೇತಿಗಳನ್ನು ನೀಡಲಾಗುವುದು. ಗೃಹರಕ್ಷಕದಳವು ಶಾಂತಿ ಕಾಲದಲ್ಲಿ, ಪ್ರಕೃತಿ ವಿಕೋಪ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕುರಿತಂತೆ ಪೊಲೀಸ್ ಮತ್ತು ಅಗ್ನಿಶಾಮಕ ಇಲಾಖೆಯ ಸಹಯೋಗದೊಂದಿಗೆ ಕರ್ತವ್ಯ ನಿರ್ವಹಿಸುತ್ತದೆ.

ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ಕೋರಿಕೆಯ ಮೇರೆಗೆ ಚುನಾವಣಾ ಬಂದೋಬಸ್ತ್, ಕಾನೂನು ಮತ್ತು ಸುವ್ಯವಸ್ಥೆ ಕರ್ತವ್ಯ, ಗಣ್ಯ ವ್ಯಕ್ತಿಗಳ ಕಾರ್ಯಕ್ರಮ, ಸಭೆ, ಸಮಾರಂಭಗಳು,

ಸಂಚಾರ ನಿಯಂತ್ರಣ ಮುಂತಾದ ಕಾರ್ಯಗಳಿಗೆ ಗೃಹರಕ್ಷಕರನ್ನು ನಿಯೋಜಿಸಲಾಗುತ್ತದೆ. ಗೃಹರಕ್ಷಕರಿಗೆ ಕರ್ತವ್ಯ ನಿರ್ವಹಣೆಯಲ್ಲಿದ್ದಾಗ ಜಿಲ್ಲೆಗಳಲ್ಲಿ ದಿನವಹಿ ₹ ೧೭೫/– (ಬೆಂಗಳೂರಿನಲ್ಲಿ ₹ ೨೦೦/–) ಕರ್ತವ್ಯ ಭತ್ಯೆ, ಕವಾಯತ್ ಭತ್ಯೆ ಪ್ರತಿ ಕವಾಯತ್‌ಗೆ ₹ ೨೨.೫೦, ತರಬೇತಿ ಭತ್ಯೆ ದಿನಕ್ಕೆ ಜಿಲ್ಲೆಗಳಲ್ಲಿ ₹ ೧೭೫/– (ಬೆಂಗಳೂರಿನಲ್ಲಿ ₹ ೨೦೦/–) ಉಡುಪು ಶುಭ್ರತಾ ಭತ್ಯೆ ಮೂರು ದಿನದಿಂದ ಏಳು ದಿನಗಳಿಗೆ ಐದು ರೂಪಾಯಿಯಂತೆ ಗರಿಷ್ಟ ತಿಂಗಳಿಗೆ ₹ ೨೦/– ನೀಡಲಾಗುತ್ತದೆ.

ಗೃಹರಕ್ಷಕದಳದ ಸ್ವಯಂ ಸೇವಕರನ್ನು ಜಿಲ್ಲಾ ಸಮಾವೇಷ್ಟರು "ನೇಮಕಾತಿ ಸಮಿತಿ" ಯ ಸಹಾಯದಿಂದ ನೇಮಕ ಮಾಡುವರು. ಈ ಸಮಿತಿಯ ಅಧ್ಯಕ್ಷರು ಜಿಲ್ಲಾಧಿಕಾರಿಗಳಿದ್ದು ಜಿಲ್ಲಾ ರಕ್ಷಣಾಧಿಕಾರಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸದಸ್ಯರು ಇರುತ್ತಾರೆ. ಜಿಲ್ಲಾ ಸಮಾವೇಷ್ಟರು ಸದಸ್ಯ–ಕಾರ್ಯದರ್ಶಿಯಾಗಿದ್ದು, ಇವರು ಡಿ.ಐ.ಜಿ ರವರ ಸಲಹೆಯಂತೆ ಸರ್ಕಾರದಿಂದ ನೇಮಕಗೊಂಡ ಗೌರವ ಅಧಿಕಾರಿಯಾಗಿದ್ದು, ಯಾವುದೇ ವೇತನ ಪಡೆಯದೇ ಸೇವೆ ಸಲ್ಲಿಸುತ್ತಾರೆ. ಗೃಹರಕ್ಷಕದಳವು ಗೃಹರಕ್ಷಕದಳ ಕೈಪಿಡಿ, ೧೯೬೨ರ ಕರ್ನಾಟಕ ಗೃಹರಕ್ಷಕದಳ ನಿಯಮಗಳು, ೧೯೬೩ರ ಕರ್ನಾಟಕ ಗೃಹರಕ್ಷಕದಳ ನಿಯಮಗಳು ಇವುಗಳನ್ವಯ ಕಾರ್ಯನಿರ್ವಹಿಸುತ್ತದೆ.

ಜಿಲ್ಲಾ ಕಚೇರಿಯಲ್ಲಿ ಗೌರವಾನ್ವಿತ ಕಮಾಂಡೆಂಟ್ ಮತ್ತು ಲಿಪಿಕ ಹಾಗೂ ಕಾರ್ಯನಿರ್ವಹಣಾ ಸಿಬ್ಬಂದಿ ಮತ್ತು ತಾಲೂಕು ಘಟಕಗಳಲ್ಲಿ ಗೃಹರಕ್ಷಕ ಸ್ವಯಂ ಸೇವಕರು ಕಾರ್ಯನಿರ್ವಹಿಸುತ್ತಾರೆ. ಪ್ರತೀ ವರ್ಷ ಡಿಸೆಂಬರ್ ೬ ರಿಂದ ೧೨ರೊಳಗೆ ಗೃಹರಕ್ಷಕರ ದಿನಾಚರಣೆ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ. ಇದರ ಅಂಗವಾಗಿ ಕವಾಯತು ಪ್ರದರ್ಶನ ಪ್ರತಿಜ್ಞಾವಿಧಿ ಸ್ವಿಕಾರ, ಹೋರಾಂಗಣ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಉತ್ತಮ ಸಾಧನೆ ಮಾಡಿದ ಗೃಹರಕ್ಷಕರಿಗೆ ಅರ್ಹ ಪ್ರಶಸ್ತಿ ನೀಡಿಕೆ ಇತ್ಯಾದಿಯನ್ನು ನಡೆಸಿಕೊಡಲಾಗುತ್ತದೆ. ೧೯೮೭ರ ಮಾರ್ಚ್ ಅಂತ್ಯಕ್ಕೆ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆ ಘಟಕಗಳಲ್ಲಿ ಕ್ರಮವಾಗಿ ೭೦, ೭೫, ೬೦ ಹಾಗೂ ೭೦ ಮಂದಿ ಗೃಹರಕ್ಷಕ ದಳಕ್ಕೆ ನೋಂದಣಿಗೊಂಡು ತರಬೇತಿ ಪಡೆಯುತ್ತಿದ್ದರು. ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗೃಹರಕ್ಷಕ/ರಕ್ಷಕಿಯರ ವಿವರ (ಜುಲೈ ೨೦೧೨ ರಲ್ಲಿದ್ದಂತೆ) ಈ ಕೆಳಗಿನಂತಿತ್ತು.

**ಕೋಷ್ಟಕ ೧೦.೧೮: ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗೃಹ ರಕ್ಷಕ / ರಕ್ಷಕಿಯರ ವಿವರ**

| ಕ್ರಮ ಸಂಖ್ಯೆ | ಘಟಕಗಳು | ನಿಗದಿಯಾದ ಸಂಖ್ಯಾ ಬಲ | ಕರ್ತವ್ಯ ನಿರ್ವಹಿಸುತ್ತಿರುವ | |
|---|---|---|---|---|
| | | | ಗೃಹರಕ್ಷಕರು | ಗೃಹರಕ್ಷಕಿಯರು |
| ೧ | ಚಾಮರಾಜನಗರ | ೧೩೬ | ೭೮ | ೧೭ |
| ೨ | ಗುಂಡ್ಲುಪೇಟೆ | ೧೦೦ | ೬೪ | ೧೨ |
| ೩ | ಕೊಳ್ಳೇಗಾಲ | ೧೩೬ | ೯೩ | ೧೪ |
| ೪ | ಯಳಂದೂರು | ೧೦೮ | ೭೩ | ೧೭ |
| ೫ | ಕುದೇರು | ೪೪ | ೩೦ | –– |
| ೬ | ತೆರಕಣಾಂಬಿ | ೪೪ | ೨೭ | –– |
| ೭ | ಅಗರ–ಮಾಂಬಳ್ಳಿ | ೪೪ | ೨೭ | –– |
| ೮ | ರಾಮಪುರ | ೪೪ | ೩೧ | –– |
| ೯ | ಹನೂರು | ೪೪ | ೩೧ | –– |
| | ಒಟ್ಟು | **೭೦೦** | **೪೫೪** | **೬೦** |

**ಕೋಷ್ಟಕ ೧೦.೧೯: ಜಿಲ್ಲೆಯ ಗೃಹರಕ್ಷಕ ದಳದ ೨೦೦೨ ರಿಂದ ೨೦೦೮ರ ವರೆಗೆ ಆಗಿರುವ ವೆಚ್ಚದ ವಿವರ**

| ಕ್ರಮ ಸಂಖ್ಯೆ | ವರ್ಷ | ವೆಚ್ಚ |
|---|---|---|
| ೧ | ೨೦೦೨ | ೪,೮೨,೬೦೦ |
| ೨ | ೨೦೦೩ | ೬,೮೪,೦೦೦ |
| ೩ | ೨೦೦೪ | ೧೩,೯೨,೫೮೪ |
| ೪ | ೨೦೦೫ | ೧೮,೪೫,೬೪೪ |
| ೫ | ೨೦೦೬ | ೨೩,೪೬,೮೪೫ |
| ೬ | ೨೦೦೭ | ೧೯,೨೩,೬೦೦ |
| ೭ | ೨೦೦೮ | ೩೪,೭೮,೨೪೨ |
| ೮ | ೨೦೦೯ | ೩೬,೫೮,೧೬೩ |
| ೯ | ೨೦೧೦ | ೩೪,೮೯,೦೭೮ |
| ೧೦ | ೨೦೧೧ | ೩೦,೧೦,೭೫೦ |

## ಕಾರಾಗೃಹ ಹಾಗೂ ಲಾಕಪ್‌ಗಳು

ಬಂದೀಖಾನೆ ಇಲ್ಲವೆ ಕಾರಾಗೃಹಗಳು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಹಲವೆಡೆ ಇವು ಡಂಜನ್ಸ್ ಎಂಬ ಹೆಸರಿನಲ್ಲಿಯೂ ಕರೆಯಲ್ಪಡುತ್ತಿದ್ದವು. ಯುದ್ಧ ಖೈದಿಗಳನ್ನು ಮತ್ತು ತಪ್ಪಿತಸ್ಥರನ್ನು ಏಕಾಂತ ವಾಸದಲ್ಲಿಟ್ಟು ಶಿಕ್ಷೆ ನೀಡಲು ಇಂತಹ ಸ್ಥಳಗಳಿಗೆ ಕರೆದೊಯ್ಯಲಾಗುತ್ತಿತ್ತು. ಮೈಸೂರಿನಲ್ಲಿ ನಾನ್–ರೆಗ್ಯೂಲೇಷನ್ ಸಮಯದಲ್ಲಿ (೧೮೩೧–೧೮೫೬) ಒಂದು ಬಂದೀಖಾನೆ ಇದ್ದಿತೆಂದು ತಿಳಿದುಬರುತ್ತದೆ. ೧೮೭೬–೭೭ರಲ್ಲಿ ಈ ಬಂದೀಖಾನೆಯಲ್ಲಿ ಸ್ಥಳಾವಕಾಶದ ಕೊರತೆ ಎದುರಾದಾಗ ಕುಕ್ಕರಹಳ್ಳಿಯಲ್ಲಿ ಒಂದು ಉಪಬಂದೀಖಾನೆಯನ್ನು ತೆರೆಯಲಾಯಿತು. ಮೈಸೂರಿನ ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಅವರು ಎಲ್ಲಾ ಬಂದೀಖಾನೆಗಳ ಮೇಲೆ ಆಡಳಿತಾತ್ಮಕ ಹತೋಟಿಯನ್ನು ಹೊಂದಿದ್ದರು. ೧೮೯೭ರಲ್ಲಿ ಜಿಲ್ಲಾ ಜೈಲುಗಳ ನಿರ್ವಹಣೆಯ ಜವಾಬ್ದಾರಿಯನ್ನು ಜಿಲ್ಲಾ ಹಿರಿಯ ಸರ್ಜನ್ನರಿಗೆ ವಹಿಸಲಾಯಿತು. ತಾಲೂಕು ಮಟ್ಟದಲ್ಲಿ ಲಾಕಪ್‌ಗಳನ್ನು ಮುನ್ಸೀಫ್‌ರಾಗಲೀ, ಅಮಲ್ದಾರರಾಗಲೀ, ಉಪಅಮಲ್ದಾರರಾಗಲೀ ನಿರ್ವಹಿಸುತ್ತಿದ್ದರು. ೧೮೯೮ರಲ್ಲಿ ಲಾಕಪ್ಪುಗಳನ್ನು ಸಬ್ ಅಸಿಸ್ಟೆಂಟ್ ಸರ್ಜನ್ ಹುದ್ದೆಗಿಂತ ಮೇಲ್ಪಟ್ಟ ವೈದ್ಯಾಧಿಕಾರಿಗೆ ವಹಿಸಲಾಯಿತು. ೧೯೦೪–೦೫ರಲ್ಲಿ ವಿಶೇಷ ಸಬ್ ರಿಜಿಸ್ಟ್ರಾರ್ ಹುದ್ದೆ ಸೃಷ್ಟಿಗೊಂಡು ಜೈಲು ಹಾಗೂ ಲಾಕಪ್ಪುಗಳ ನಿರ್ವಹಣೆಯನ್ನು ಅವರಿಗೆ ನೀಡಲಾಯಿತು. ಆ ಪ್ರಕಾರ ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ಯಳಂದೂರುಗಳಲ್ಲಿ ಹಿಂದೆ ಲಾಕಪ್‌ಗಳಿದ್ದವೆಂದು ತರ್ಕಿಸಬಹುದಾಗಿದೆ.

ಜೈಲಿನಲ್ಲಿರುವ ಖೈದಿಗಳು ತಮ್ಮ ಸಮಯವನ್ನು ಉಪಯುಕ್ತವಾಗಿ ಕಳೆಯಲು ಅವರಿಗೆ ಎಲ್ಲಾ ರೀತಿಯ ಶೈಕ್ಷಣಿಕ ಮನೋರಂಜನಾತ್ಮಕ ಹಾಗೂ ಇತರೆ ಸವಲತ್ತುಗಳನ್ನು ನೀಡಲಾಗಿತ್ತು. ಅವರಿಂದ ವೃತ್ತಿಪರ ಕಾರ್ಯಗಳಾದ ತೋಟಗಾರಿಕೆ, ಬಡಗಿ, ಕಂಬಳಿ ನೇಯ್ಗೆ, ಮುಂತಾದ ಕೆಲಸ ಕಾರ್ಯಗಳನ್ನು ಮಾಡಿಸಲಾಗುತ್ತಿತ್ತು. ವೃತ್ತಿ ಕೌಶಲವಿದ್ದ ಖೈದಿಗಳ ಸೇವೆಯನ್ನು ವಿವಿಧ ಇಲಾಖೆಗಳಿಗೆ ನೀಡಲಾಗುತ್ತಿತ್ತು. ೧೯೦೭–೦೮ರಲ್ಲಿ ಇವರ ಸೇವೆಗೆ ದಿನಂಪ್ರತೀ ಎರಡು ಆಣೆ ಕೂಲಿಯನ್ನು ನೀಡಲಾಗುತ್ತಿತ್ತು. ಅರಮನೆ ಹಾಗೂ ದಿವಾನರ ಮನೆಗಳ ಸೇವೆಗೆ ಕಳುಹಿಸಲ್ಪಟ್ಟ ಖೈದಿಗಳ ಸೇವೆ ಉಚಿತವಾಗಿತ್ತು. ೧೯೨೨ರಲ್ಲಿ ಪ್ರತೀ ಖೈದಿಯ ಕೂಲಿ ಎರಡರಿಂದ ನಾಲ್ಕು ಆಣೆ ಹೆಚ್ಚಳವಾಯಿತು. ೧೯೨೫ರಲ್ಲಿ ಸುಧಾರಿತ ಖೈದಿಗಳ ಪುನರ್ವಸತಿಗಾಗಿ ‘ಪ್ರಿಸನರ್ಸ್ ಏಡ್

ಸೊಸೈಟಿ' ಸ್ಥಾಪಿತವಾಯಿತು. ೧೯೪೪ರ ವೇಳೆಗೆ ಖೈದಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಮೈಸೂರು ಸಾಕ್ಷರತಾ ಸಮಿತಿಯು ಜೈಲುಗಳಲ್ಲಿ ಕನ್ನಡ ತರಗತಿಗಳನ್ನು ಪ್ರಾರಂಭ ಮಾಡಿತು. ರಾಜ್ಯಪುನರ್ಘಟನೆಯ ನಂತರ ಇದು ಮೈಸೂರು ಜಿಲ್ಲಾ ಕಾರಾಗೃಹವೆಂದು ಕರೆಯಲ್ಪಟ್ಟಿತು.

ಇಂದು ಜಿಲ್ಲಾ ಕೇಂದ್ರವಾಗಿರುವ ಚಾಮರಾಜನಗರದಲ್ಲಿ ೧೯೭೫ರ ಜೂನ್ ಒಂದನೇ ತಾರೀಕಿನಂದು ಪುರುಷ ಖೈದಿಗಳಿಗಾಗಿ ಉಪಬಂದೀಖಾನೆಯೊಂದು ಸ್ಥಾಪನೆಗೊಂಡಿತು. ೧೯೮೭ರ ವೇಳೆಗೆ ಕೊಳ್ಳೇಗಾಲದಲ್ಲಿ ಉಪಬಂದೀಖಾನೆ ಕಾರ್ಯನಿರ್ವಹಿಸುತ್ತಿತ್ತು. ಹೆಚ್ಚುತ್ತಿದ್ದ ಅಪರಾಧಗಳ ಸಂಖ್ಯೆ ಹಾಗೂ ಖೈದಿಗಳ ಸಂಖ್ಯೆಗನುಗುಣವಾಗಿ, ಅದಕ್ಕೂ ಮಿಗಿಲಾಗಿ, ಇದು ಜಿಲ್ಲಾ ಕೇಂದ್ರವಾದ ಬಳಿಕ ಚಾಮರಾಜನಗರದಲ್ಲಿ ಪೂರ್ಣಪ್ರಮಾಣದ ಜಿಲ್ಲಾ ಬಂದೀಖಾನೆಯು ೧೭-೧೦-೨೦೦೫ರಂದು ₹ ೧೪೦ ಲಕ್ಷಗಳ ವೆಚ್ಚದಲ್ಲಿ ಒಂದು ಎಕರೆ ३೮ ಗುಂಟೆ ಪ್ರದೇಶದಲ್ಲಿ ತನ್ನ ಸ್ವಂತ ಕಟ್ಟಡದಲ್ಲಿ ಪ್ರಾರಂಭಗೊಂಡಿತು. ಇಲ್ಲಿ ಪುರುಷ ಖೈದಿಗಳಿಗೆ ಮಾತ್ರ ಸ್ಥಳಾವಕಾಶವಿದ್ದು, ಮಹಿಳಾ ಖೈದಿಗಳನ್ನು ಮೈಸೂರು ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಗುತ್ತದೆ.

ಜಿಲ್ಲಾ ಕಾರಾಗೃಹದಲ್ಲಿ ಒಟ್ಟು ೯೫ ಮಂದಿ ಪುರುಷ ಖೈದಿಗಳಿಗೆ ಸ್ಥಳಾವಕಾಶವಿದ್ದು, ೨೦೦೮ರ ಮೇ ನಲ್ಲಿ ಒಟ್ಟು ೭೪ ಮಂದಿ ಖೈದಿಗಳಿದ್ದರು. ಎಲ್ಲಾ ಕಾರಾಗೃಹಗಳಂತೆ ಇವರಿಗೆ ಸಾಮಾಜಿಕ ಬದುಕಿಗೆ ಧಕ್ಕೆ ಬಾರದಂತೆ ಕನಿಷ್ಠ ಸವಲತ್ತುಗಳನ್ನು ಒದಗಿಸಲಾಗಿದೆ. ದಿನಂಪ್ರತಿ ಸಸ್ಯಾಹಾರಿ ಊಟ ಹಾಗೂ ಮಾಂಸಾಹಾರಿಗಳಿಗೆ ವಾರಕ್ಕೊಮ್ಮೆ ಮೂಳೆರಹಿತ ಮಾಂಸದ ಊಟ ನೀಡಲಾಗುತ್ತದೆ. ಖೈದಿಗಳ ಆರೋಗ್ಯ ತಪಾಸಣೆಗೆ ಜಿಲ್ಲಾ ಶಸ್ತ್ರಚಿಕಿತ್ಸಕರು ನಿಯಮಿತವಾಗಿ ಭೇಟಿ ನೀಡಿ, ಅವಶ್ಯಕವಿದ್ದಲ್ಲಿ ಚಿಕಿತ್ಸೆ ನೀಡುತ್ತಾರೆ. ಹೆಚ್ಚಿನ ಚಿಕಿತ್ಸೆ ಬೇಕಾದಲ್ಲಿ ಅವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ. ಖೈದಿಗಳ ಮನಪರಿವರ್ತನೆಗಾಗಿ ವಿವಿಧ ಸ್ವಯಂ ಸೇವಾಸಂಸ್ಥೆಗಳು ಧ್ಯಾನ, ಮನರಂಜನೆ, ನೀತಿಪಾಠ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತವೆ. ಇವರಿಗೆ ದೂರದರ್ಶನ ಸೌಲಭ್ಯವನ್ನೂ ನೀಡಲಾಗಿದೆ. ಅನಕ್ಷರಸ್ಥ ಖೈದಿಗಳಿಗೆ ಲೋಕಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಇಲಾಖೆಗಳು ೧೮ ದಿನಗಳ ಕಲಿಕಾ ಶಿಬಿರವನ್ನೂ ಏರ್ಪಡಿಸಿದ್ದವು. ಖೈದಿಗಳಿಗೆ ಅಗತ್ಯವಾಗಿ ಬೇಕಾಗುವ ಹಾಸಿಗೆ, ಹೊದಿಕೆ, ತಟ್ಟೆ, ಚಂಬು ಮುಂತಾದವನ್ನು ಒದಗಿಸಲಾಗಿದೆ. ಇವರ ಮೇಲ್ವಿಚಾರಣೆಗಾಗಿ ೨೦೧೨ ಜುಲೈನಲ್ಲಿದ್ದಂತೆ ಓರ್ವ 'ಬಿ' ದರ್ಜೆ ಸಹಾಯಕ ಅಧೀಕ್ಷಕರು, ಎರಡು ಜೈಲರ್(ಒಂದು ಸ್ಥಾನ ಖಾಲಿ), ಓರ್ವ ಪ್ರಧಾನ ವೀಕ್ಷಕರು, ಮುಖ್ಯ ವೀಕ್ಷಕರು (ಸ್ಥಾನ ಖಾಲಿ), ೨೫ ವೀಕ್ಷಕರು (೦೨ ಸ್ಥಾನ ಖಾಲಿ) ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಕಾರಾಗೃಹದ ಸಮೀಪವೇ ವಸತಿಗೃಹವನ್ನು ಒದಗಿಸಲಾಗಿದೆ. ೨೦೦೬-೦೭ನೇ ಸಾಲಿಗೆ ಈ ಕಾರಾಗೃಹ ನಿರ್ವಹಣೆಗೆ, ಸಿಬ್ಬಂದಿ ವೇತನ, ತುಟ್ಟಿಭತ್ಯೆ, ಇತರ ಭತ್ಯೆ, ಸಾರಿಗೆ, ಆಹಾರ, ಮುಂತಾದ ವಿವಿಧ ಬಾಬ್ತುಗಳಿಗೆ ₹ ೧३,೨೬,೨೯೬ ರೂ. ವೆಚ್ಚವಾಗಿದ್ದಿತು. ೨೦೧೦ ಮಾರ್ಚ್ ಅಂತ್ಯಕ್ಕೆ ಚಾಮರಾಜನಗರ ಕಾರಾಗೃಹದಲ್ಲಿ ೮೦ ಪುರುಷ ಖೈದಿಗಳು ಕೊಳ್ಳೇಗಾಲದ ಬಂದೀಖಾನೆಯಲ್ಲಿ ३५ ಪುರುಷ ಖೈದಿಗಳು ಇದ್ದರು. ೨೦೧೧ ಮಾರ್ಚ್ ಅಂತ್ಯಕ್ಕೆ ೧೧೯ ಪುರುಷ ಖೈದಿಗಳು, ೨೦೧೨ ಮಾರ್ಚ್ ಅಂತ್ಯಕ್ಕೆ ೬೧ ಪುರುಷ ಖೈದಿಗಳು ಚಾಮರಾಜನಗರ ಕಾರಾಗೃಹದಲ್ಲಿದ್ದರು.

## ಕಾನೂನು ನೆರವು ಸಮಿತಿ

ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಕರ್ನಾಟಕ ಕಾನೂನು ನೆರವು ಸಮಿತಿ ಅಸ್ತಿತ್ವಕ್ಕೆ ಬರುವ ಮೊದಲು ಕಾರ್ಮಿಕರು ಮತ್ತು ದುರ್ಬಲ ವರ್ಗದ ಕಾನೂನು ನೆರವು ಮತ್ತು ಸಲಹಾ ಕೇಂದ್ರವು ಕಾರ್ಯನಿರ್ವಹಿಸುತ್ತಿತ್ತು. ೧೯೮३ರ ಡಿಸೆಂಬರ್‌ನಿಂದ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಾನೂನು ನೆರವು ಸಮಿತಿಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ೧೯೮೭ ರಲ್ಲಿ ಕೇಂದ್ರ ಸರ್ಕಾರ ಕಾನೂನು ಸೇವೆಗಳ ಪ್ರಾಧಿಕಾರಗಳ

ಅಧಿನಿಯಮವನ್ನು ಜಾರಿಗೆ ತಂದಿದ್ದರಿಂದ ಕಾನೂನು ನೆರವು ಮಂಡಳಿಯನ್ನು ರದ್ದುಗೊಳಿಸಿ ಕಾನೂನು ಸೇವಾ ಪ್ರಾಧಿಕಾರವನ್ನು ರಚಿಸಲಾಗಿದ್ದು, ಇದು ರಾಜ್ಯದಲ್ಲಿ ದಿನಾಂಕ ೧೯-೧೧-೧೯೯೫ ರಿಂದ ಜಾರಿಗೆ ಬಂದಿರುತ್ತದೆ. ಕಾನೂನಿನ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವುದು, ನ್ಯಾಯಾಲಯಕ್ಕೆ ಹೋಗಲು ಉಚಿತ ಕಾನೂನು ಸಲಹೆ, ಮೊಕದ್ದಮೆ ಹೂಡಲು, ಮನವಿ ಸಲ್ಲಿಸಲು, ಉಚಿತ ಕಾನೂನು ನೆರವು ನೀಡುವುದು, ಜನತಾ ನ್ಯಾಯಾಲಯಗಳ ಮೂಲಕ ವಾಜ್ಯಗಳನ್ನು ಇತ್ಯರ್ಥಗೊಳಿಸಿ ಜನರಿಗೆ ತ್ವರಿತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯದೊರಕಿಸಿ ಕೊಡುವುದು ಈ ಪ್ರಾಧಿಕಾರದ ಕೆಲಸವಾಗಿರುತ್ತದೆ. ಹಾಗೂ ಕಂದಾಯ ಅಧಿಕಾರಿಗಳೊಡನೆ ವ್ಯವಹರಿಸಲು ಹಾಗೂ ಕಾನೂನು ಆದೇಶ ಜಾರಿಗೊಳಿಸಲು ನೆರವು ನೀಡಲಾಗುತ್ತದೆ. ಉಚಿತ ಕಾನೂನು ಸಲಹೆ ಮತ್ತು ನೆರವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಮಹಿಳೆಯರು ಮತ್ತು ಮಕ್ಕಳು, ಕಾರ್ಖಾನೆಯ ಕಾರ್ಮಿಕರು, ಗುಂಪು ಘರ್ಷಣೆ, ಗಲಭೆ, ಪ್ರವಾಹ, ಕ್ಷಾಮ, ಭೂಕಂಪ, ಕೈಗಾರಿಕಾ ವಿನಾಶ ಮುಂತಾದವುಗಳಿಗೆ ತುತ್ತಾದವರು, ಮತೀಯ ದೌರ್ಜನ್ಯಕ್ಕೆ ಬಲಿಯಾದವರು, ಮಾನಸಿಕ ಅಥವಾ ಬೇರೆ ಯಾವುದೇ ನ್ಯೂನತೆ ಹೊಂದಿದವರು, ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆ ಮುಂತಾದವುಗಳಲ್ಲಿ ಅಭಿರಕ್ಷೆಯಲ್ಲಿರುವವರು, ದೈಹಿಕ ವ್ಯಾಪಾರ ಅಥವಾ ಜೀತಕ್ಕೊಳಗಾದವರು ಮತ್ತು ವಾರ್ಷಿಕ ಆದಾಯ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜಾತಿಯ ಜನರು ಇವರೆಲ್ಲರಿಗೂ ಕೊಡಲಾಗುತ್ತದೆ. ಇದರಡಿ ಬರುವ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರ ಶುಲ್ಕ ಸೇರಿದಂತೆ ಸಂಪೂರ್ಣ ವೆಚ್ಚವನ್ನು ಕೆಳಹಂತದ ನ್ಯಾಯಾಲಯದಿಂದ ಹಿಡಿದು ಸರ್ವೋಚ್ಚ ನ್ಯಾಯಾಲಯದವರೆಗೆ ಹಾಗೂ ವಿವಿಧ ಕಚೇರಿಗಳಲ್ಲಿಯ ಪ್ರಕರಣಗಳಿಗೆ ಸಂಬಂಧಿಸಿದಂತೆಯೂ ಪ್ರಾಧಿಕಾರವೇ ನೀಡುತ್ತದೆ. ಉಚಿತ ಕಾನೂನು ನೆರವು ಅಥವಾ ಸಲಹೆ ಪಡೆಯಲು ನ್ಯಾಯಾಲಯದ ಆವರಣದಲ್ಲಿರುವ ತಾಲೂಕು ಕಾನೂನು ಸೇವಾ ಸಮಿತಿಗೆ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಅಥವಾ ಉಚ್ಚನ್ಯಾಯಾಲಯ ಕಾನೂನು ಸೇವಾಸಮಿತಿಗೆ ಅರ್ಜಿ ಸಲ್ಲಿಸಬೇಕು, ಅರ್ಜಿಗೆ ಯಾವುದೇ ಶುಲ್ಕವಿರುವುದಿಲ್ಲ. ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಜಿಲ್ಲಾ ಕೇಂದ್ರದ ನ್ಯಾಯಾಲಯಗಳ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರುಗಳಲ್ಲಿ ತಾಲೂಕು ಕಾನೂನು ಸೇವಾ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅಧ್ಯಕ್ಷರಾಗಿದ್ದು, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಪ್ರತಿ ತಾಲೂಕಿನ ತಾಲೂಕು ಕಾನೂನು ಸೇವಾ ಸಮಿತಿಗಳಿಗೆ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಅಧ್ಯಕ್ಷರಾಗಿದ್ದು, ಪ್ರಧಾನ ಸಿವಿಲ್ ನ್ಯಾಯಾಧೀಶರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಈ ಸಂಸ್ಥೆಗಳು ಸರ್ಕಾರದಿಂದ ನಾಮ ನಿರ್ದೇಶಿಸಲ್ಪಟ್ಟ ಸದಸ್ಯರನ್ನು ಒಳಗೊಂಡಿದ್ದು ಸದಸ್ಯ ಮಂಡಳಿಯ ಸಲಹೆಯ ಮೇರೆಗೆ ಕಾರ್ಯನಿರ್ವಹಿಸುತ್ತವೆ.

**ಜನತಾ ನ್ಯಾಯಾಲಯ (ಲೋಕ ಅದಾಲತ್):** ಕಾನೂನು ಸೇವಾ ಪ್ರಾಧಿಕಾರವು ಜನತಾ ನ್ಯಾಯಾಲಯಗಳ ಮೂಲಕ ಉಭಯ ಪಕ್ಷಗಳಲ್ಲಿ ರಾಜಿ ಸಂಧಾನ ಏರ್ಪಡಿಸಿ ಪ್ರಕರಣಗಳನ್ನು (ವ್ಯಾಜ್ಯ) ಇತ್ಯರ್ಥಗೊಳಿಸಿ ಜನರಿಗೆ ತ್ವರಿತವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯ ದೊರಕಿಸಿ ಕೊಡುತ್ತದೆ. ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಮತ್ತು ಬೇರೆ ಯಾವುದೇ ನ್ಯಾಯಾಲಯ ಅಥವಾ ಕಚೇರಿಯಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ ಮತ್ತು ಕಾನೂನಿನನ್ವಯ ರಾಜಿ ಆಗಬಹುದಾದ ಎಲ್ಲಾ ವಿಧದ ಪ್ರಕರಣಗಳನ್ನು ಹಾಗೂ ನ್ಯಾಯಾಲಯದಲ್ಲಿ ಇನ್ನೂ ದಾಖಲಿಸಿಲ್ಲದ ಪ್ರಕಾರಣಗಳನ್ನೂ ಸಹಾ ಜನತಾ ನ್ಯಾಯಾಲಯಗಳ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು. ಜನತಾ

ನ್ಯಾಯಾಲಯದಲ್ಲಿ ಕನಿಷ್ಠ ಇಬ್ಬರು ಸಂಧಾನಕಾರರಿದ್ದು ಅವರಲ್ಲಿ ಒಬ್ಬರು ನ್ಯಾಯಾಧೀಶರೇ ಆಗಿರುತ್ತಾರೆ. ಈ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿಗೆ ಅವಕಾಶ ಇರುವುದಿಲ್ಲ.

**ಕೋಷ್ಟಕ ೧೦.೨೦: ಜಿಲ್ಲೆಯಲ್ಲಿ ಲೋಕ ಅದಾಲತ್ ಮೂಲಕ ತೀರ್ಮಾನಿಸಿದ ಪ್ರಕರಣಗಳ ವಿವರ**

| ವರ್ಷ | ತೀರ್ಮಾನವಾದ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಸಂಖ್ಯೆ | ತೀರ್ಮಾನವಾದ ಮೋಟರ್ ವಾಹನ ನಿಯಮದಡಿ ವ್ಯಾಜ್ಯಗಳು | ಒಟ್ಟು ತೀರ್ಮಾನವಾದ ಪ್ರಕರಣಗಳು |
|---|---|---|---|
| ೨೦೦೫ | ೭೦ | – | ೭೦ |
| ೨೦೦೬ | ೧೫೧ | ೦೪ | ೧೫೫ |
| ೨೦೦೭ | ೨೫ | ೦೨ | ೨೭ |
| ೨೦೦೮ | ೫೫ | ೦೫ | ೬೦ |
| ೨೦೦೯ | ೬೯ | ೦೭ | ೭೬ |
| ೨೦೧೦ | ೨೭೨ | ೧೬ | ೧೮೮ |
| ೨೦೧೧ | ೪೦೨ | ೦೬ | ೪೦೮ |

*ಆಧಾರ: ಜಿಲ್ಲಾ ಕಾನೂನು ಪ್ರಾಧಿಕಾರ, ಚಾಮರಾಜನಗರ*

## ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ

ಈ ನಿರ್ದೇಶನಾಲಯವು ದಿನಾಂಕ ೨-೦೮-೧೯೭೪ ರಂದು "ರಾಜ್ಯದಲ್ಲಿ ನಾಗರಿಕ ಹಕ್ಕು ರಕ್ಷಣಾ ಕೋಶ" ವಾಗಿ ಕಾರ್ಯಾರಂಭ ಮಾಡಿತು. ೧೯೭೮ರಲ್ಲಿ ಇದಕ್ಕಾಗಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಪೊಲೀಸು ಉಪ ಮಹಾ ನಿರ್ದೇಶಕರು) ಹುದ್ದೆಯನ್ನು ಸೃಜಿಸಲಾಯಿತು. ೧೯೮೦ ರಲ್ಲಿ ಈ ಕೋಶವು ಪುನರ್ವಿಂಗಡಣೆ ಹೊಂದಿ ಬೆಂಗಳೂರು, ಬೆಳಗಾವಿ, ಮೈಸೂರು ಮತ್ತು ಗುಲಬರ್ಗಾಗಳಲ್ಲಿ ಪ್ರಾಂತೀಯ ಕೋಶಗಳು ಪ್ರಾರಂಭಗೊಂಡವು. ೧೯೮೮ ರಲ್ಲಿ ಪ್ರತಿಯೊಂದು ಕೋಶವು ಒಬ್ಬ ಐ.ಜಿ.ಪಿ. ಹುದ್ದೆಯ ಅಧಿಕಾರಿಯ ಆಡಳಿತಕ್ಕೊಳಪಟ್ಟಿತ್ತು. ಈ ಕೋಶವನ್ನು "ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ" ಎಂದು ಪುನರ್ನಾಮಕರಣ ಮಾಡಿ, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಹೆಚ್ಚುವರಿ ಪೊಲೀಸು ಮಹಾ ನಿರ್ದೇಶಕರು) ಹುದ್ದೆಯ ಅಧಿಕಾರಿಯನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿದೆ. ಒಟ್ಟು ಆರು ಕ್ಷೇತ್ರೀಯ ವಿಭಾಗಗಳು, ಬೆಂಗಳೂರು, ಮಂಗಳೂರು, ದಾವಣಗೆರೆ, ಬೆಳಗಾವಿ, ಗುಲಬರ್ಗಾ ಮತ್ತು ಮೈಸೂರುಗಳಲ್ಲಿ ಪೊಲೀಸ್ ಅಧೀಕ್ಷಕರ ಅಧೀನದಲ್ಲಿರುತ್ತವೆ. ಚಾಮರಾಜನಗರ ಜಿಲ್ಲೆಯು ಮೈಸೂರು ಕ್ಷೇತ್ರೀಯ ವಿಭಾಗದಡಿಯಲ್ಲಿರುತ್ತದೆ. ೧೯೫೫ ರ ನಾಗರಿಕ ಹಕ್ಕು ರಕ್ಷಣಾ ಕಾಯ್ದೆ ಹಾಗೂ ೧೯೮೯ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಯಿದೆಗಳನ್ನು, ಸಂಪೂರ್ಣ ಅನುಷ್ಠಾನಗೊಳಿಸುವ ಉದ್ದೇಶದಿಂದ ಸ್ಥಾಪಿತವಾದ ಈ ನಿರ್ದೇಶನಾಲಯವು ರಾಜ್ಯದಲ್ಲಿ ದಲಿತರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವ ಏಕೈಕ ಸರ್ಕಾರಿ ಸಂಸ್ಥೆಯಾಗಿದೆ. ದಲಿತರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಸಂಬಂಧಪಟ್ಟ ಪೊಲೀಸು ಠಾಣೆಗಳಲ್ಲಿ ದಾಖಲಿಸುವ ದೂರುಗಳನ್ನು ಈ ನಿರ್ದೇಶನಾಲಯವು ಪರಿಶೀಲಿಸಿ ಕಾನೂನು ಕ್ರಮಗಳ ಮೂಲಕ ಅವರಿಗೆ ಪರಿಹಾರ ಒದಗಿಸುತ್ತದೆ. ಜಿಲ್ಲೆಯಲ್ಲಿ ೨೦೦೯, ೨೦೧೦ ಹಾಗೂ ೨೦೧೧ನೇ ಸಾಲಿನಲ್ಲಿ ವರದಿಯಾಗಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕರಣಗಳ ವಿವರ ನೀಡಿದೆ.

**ಕೋಷ್ಟಕ ೧೦.೨೧: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕರಣಗಳ ವಿವರ**

| ಪ್ರಕರಣದ ವಿವರ | ವರ್ಷ | | |
|---|---|---|---|
| | ೨೦೦೯ | ೨೦೧೦ | ೨೦೧೧ |
| ವರದಿಯಾದ ಪ್ರಕರಣಗಳು | ೧೩ | ೨೦ | ೩೦ |
| ಬೇರೆಡೆಗೆ ವರ್ಗಾವಣೆ ಯಾದ ಪ್ರಕರಣಗಳು | ೦೧ | – | – |
| ಸುಳ್ಳು ಎಂದು ಕಂಡು ಬಂದ ಪ್ರಕರಣಗಳು | ೦೧ | ೦೩ | ೦೪ |
| ಸಾಬೀತಾದ ಪ್ರಕರಣಗಳು | ೧೧ | ೧೬ | ೨೬ |
| ಶಿಕ್ಷೆಯಾದ ಪ್ರಕರಣಗಳು | ೦೧ | ೦೧ | – |
| ಖುಲಾಸೆಯಾದ ಪ್ರಕರಣಗಳು | ೦೬ | ೦೫ | ೦೫ |
| ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಇರುವ ಪ್ರಕರಣಗಳು | ೦೪ | ೧೦ | ೨೦ |
| ಪೋಲೀಸ್ ಹಂತದಲ್ಲಿ ವಿಚಾರಣೆಗಾಗಿ ಬಾಕಿ ಇರುವ ಪ್ರಕರಣಗಳು | – | – | ೦೧ |
| ತಾತ್ಕಾಲಿಕವಾಗಿ ಪತ್ತೆಯಾಗದ ಪ್ರಕರಣಗಳು | – | ೦೧ | – |

*ಆಧಾರ: ಜಿಲ್ಲಾ ಪೊಲೀಸ್ ಇಲಾಖೆ, ಚಾಮರಾಜನಗರ*

**ಬಾರ್ ಅಸೋಸಿಯೇಷನ್:** ಕೊಳ್ಳೇಗಾಲದ ವಕೀಲರ ಸಂಘವು ಅವಿಭಜಿತ ಮೈಸೂರು ಜಿಲ್ಲೆಗೇ ಹಳೆಯದಾಗಿದ್ದು, ಆರಂಭದಲ್ಲಿ ಮೂರು ಸದಸ್ಯರನ್ನು ಹೊಂದಿದ್ದು, ೧೯೮೫ರ ವೇಳೆಗೆ ೧೫ ಸದಸ್ಯರನ್ನು ಹೊಂದಿತ್ತು. ಅಲ್ಲದೇ ಚಾಮರಾಜನಗರ ಜಿಲ್ಲಾ ಬಾರ್ ಅಸೋಸಿಯೇಷನ್ ೧೯೮೬ರ ವೇಳೆಗೆ ಅಸ್ತಿತ್ವದಲ್ಲಿತ್ತು.

## ಅಭಿಯೋಗ ಮತ್ತು ವ್ಯಾಜ್ಯಗಳ ಇಲಾಖೆ

ಕರ್ನಾಟಕ ಸರ್ಕಾರವು ಲಾ ಕಮೀಷನ್ನಿನ ೧೪ನೆಯ ಮತ್ತು ೪೧ನೆಯ ವರದಿಗಳಲ್ಲಿ ಇರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ೧೯೭೭ರಲ್ಲಿ ರಾಜ್ಯದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯವನ್ನು ಸ್ಥಾಪಿಸಿದೆ. ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಮತ್ತು ಮೊಕದ್ದಮೆಗಳಲ್ಲಿ ಪೊಲೀಸ್ ಇಲಾಖೆ ಸಂಗ್ರಹಿಸಿರುವ ಮಾಹಿತಿ ಮತ್ತು ದಾಖಲೆಗಳು ಸಮಗ್ರವಾಗಿವೆಯೇ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಪ್ರತ್ಯೇಕ ಮತ್ತು ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಈ ಇಲಾಖೆಯು ತಾಲೂಕು, ಜಿಲ್ಲೆ ಹಾಗೂ ವಿಭಾಗ ಮಟ್ಟದಲ್ಲಿ ಕಾರ್ಯ ಪ್ರವೃತ್ತವಾಗಿದ್ದು ಪ್ರಮುಖವಾಗಿ ಈ ಕೆಳಕಾಣಿಸಿದ ಕಾರ್ಯಗಳನ್ನು ನಿರ್ವಹಿಸುತ್ತಿದೆ.

೧) ಸತ್ರ ನ್ಯಾಯಾಲಯ ಸೇರಿದಂತೆ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಇರುವ ಮೊಕದ್ದಮೆಗಳಲ್ಲಿ ರಾಜ್ಯ ಪರವಾಗಿ ಅಭಿಯೋಜನೆಯನ್ನು ನಡೆಸುವ ವ್ಯವಸ್ಥೆ ಮಾಡುವುದು.

೨) ರಾಜ್ಯದ ಪೊಲೀಸ್ ಇಲಾಖೆಯ ತನಿಖಾಧಿಕಾರಿಗಳಿಗೆ ಮತ್ತು ಇತರೆ ಇಲಾಖೆಯ ಅಧಿಕಾರಿಗಳಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ವಿಷಯವೂ ಸೇರಿದಂತೆ ಕ್ರಿಮಿನಲ್ ಮೊಕದ್ದಮೆಗಳ ತನಿಖೆ ಮತ್ತು ಅಭಿಯೋಜನೆಗೆ ಸಂಬಂಧಪಟ್ಟಂತೆ ಸಲಹೆ, ಸೂಚನೆಗಳನ್ನು ನೀಡುವುದು.

೩) ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಪ್ರಥಮ ದರ್ಜೆ, ನ್ಯಾಯಿಕ ದಂಡಾಧಿಕಾರಿಗಳು, ಮ್ಯಾಜಿಸ್ಟ್ರೇಟ್ ಮತ್ತು ಸತ್ರ ನ್ಯಾಯಾಲಯಗಳು ನೀಡಿದ ತೀರ್ಪು ಮತ್ತು ಆದೇಶಗಳನ್ನು ಪರಿಶೀಲಿಸಿ ಅರ್ಹ ಪ್ರಕರಣಗಳಲ್ಲಿ ಮೇಲ್ಮನವಿ ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

೪) ನ್ಯಾಯಾಲಯಗಳಲ್ಲಿರುವ ಸರ್ಕಾರಿ ವ್ಯಾಜ್ಯಗಳ ಮೇಲ್ವಿಚಾರಣೆ, ತಾಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರನ್ನು ಸಹಾಯಕ ಸರ್ಕಾರಿ ವಕೀಲರೆಂದು ಪದನಾಮಗೊಳಿಸಿ ಸರ್ಕಾರಿ ವ್ಯಾಜ್ಯಗಳನ್ನು ನಡೆಸುವ ಜವಾಬ್ದಾರಿಯನ್ನು ವಹಿಸುವುದು.

೫) ಸರ್ಕಾರಿ ವ್ಯಾಜ್ಯಗಳ ಪ್ರಕರಣಗಳನ್ನು ಪರಿಶೀಲಿಸಿ ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಸಮರ್ಪಿಸಲು ಸಹಿ ಮಾಡುವುದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ನಿಯೋಜಿಸುವುದು.

ಚಾಮರಾಜನಗರ ಜಿಲ್ಲೆಯಲ್ಲಿ ಅಭಿಯೋಗ ಉಪನಿರ್ದೇಶಕರ ಕಚೇರಿ ಇರುವುದಿಲ್ಲ. ಚಾಮರಾಜನಗರ ಮಂಡ್ಯ, ಮೈಸೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧ ಪಟ್ಟಂತೆ ಮೈಸೂರಿನಲ್ಲಿ ಅಭಿಯೋಗ ಉಪನಿರ್ದೇಶಕರ ಕಚೇರಿ ಇರುತ್ತದೆ. ಈ ಇಲಾಖೆಗೆ ಸಂಬಂಧಿಸಿದಂತೆ ಚಾಮರಾಜನಗರ ಹಾಗೂ ಕೊಳ್ಳೆಗಾಲದಲ್ಲಿ ಸರ್ಕಾರಿ ಅಭಿಯೋಜನಕರ ಕಚೇರಿ, ತಾಲೂಕ ಕೇಂದ್ರಗಳಾದ ಕೊಳ್ಳೆಗಾಲ, ಗುಂಡ್ಲುಪೇಟೆ, ಹಾಗೂ ಯಳಂದೂರುಗಳಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕಚೇರಿ, ಜಿಲ್ಲೆಯ ಪೊಲೀಸ್ ಅಧೀಕ್ಷಕರಿಗೆ ನೆರವು ನೀಡುವುದಕ್ಕಾಗಿ ಚಾಮರಾಜನಗರದಲ್ಲಿ ಸಹಾಯಕ ಅಭಿಯೋಗ ನಿರ್ದೇಶಕರ ಕಚೇರಿಗಳು ಇರುತ್ತವೆ. ಜಿಲ್ಲೆಯಲ್ಲಿ ಈ ಇಲಾಖೆಗೆ ಸರ್ಕಾರಿ ಅಭಿಯೋಜಕರ ಎರಡು ಹುದ್ದೆಗಳು, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಒಂದು ಹುದ್ದೆ, ಸಹಾಯಕ ಅಭಿಯೋಗ ನಿರ್ದೇಶಕರ ಒಂದು ಹುದ್ದೆ, ಸಹಾಯಕ ಸರ್ಕಾರಿ ಅಭಿಯೋಜಕರ ಏಳು ಹುದ್ದೆಗಳು ಪೂರಕ ಸಿಬ್ಬಂದಿಯೊಂದಿಗೆ ಮಂಜೂರಾಗಿರುತ್ತವೆ.

ಸರ್ಕಾರಿ ಅಭಿಯೋಜಕರು ಜಿಲ್ಲಾ ಕೇಂದ್ರದಲ್ಲಿ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ತಾಲೂಕುಮಟ್ಟದಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಾರೆ. ಪ್ರಕರಣಗಳು ವಿಲೇವಾರಿಯಾದ ನಂತರ ತೀರ್ಪು ಮತ್ತು ಆದೇಶ ಪ್ರತಿಗಳಿಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಅವುಗಳನ್ನು ಪಡೆದು ಪರಿಶೀಲಿಸಿ ಅಭಿಪ್ರಾಯಗಳನ್ನು ನೀಡುವ ಕೆಲಸವನ್ನು ನಿರ್ವಹಿಸುತ್ತಾರೆ. ಅಭಿಪ್ರಾಯ ಕಡತಗಳನ್ನು ವಿಭಾಗೀಯ ಕಚೇರಿಗೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವುದಕ್ಕಾಗಿ ಪೂರ್ಣ ದಾಖಲೆಗಳೊಂದಿಗೆ ಸಲ್ಲಿಸುತ್ತಾರೆ. ಜಿಲ್ಲಾ ಮತ್ತು ತಾಲ್ಲೂಕು ಕಾನೂನು ನೆರವು ಸಮಿತಿಗಳಲ್ಲಿ ಈ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ಚಾಮರಾಜನಗರ ಜಿಲ್ಲೆಗೆ ಸಂಬಂದಿಸಿದಂತೆ ವಿಲೇವಾರಿಯಾದ ಪರಿಶೀಲಿಸಲಾದ ಮತ್ತು ಮೇಲ್ಮನವಿಗೆ ಹಾಗೂ ಪರಿಷ್ಕರಣೆಗೆ ಶಿಫಾರಸ್ಸು ಮಾಡಲಾದ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕಣಗಳ ವಿವರಗಳು ಈ ಕೆಳಗಿನಂತಿವೆ.

## ಕೋಷ್ಟಕ ೧೦.೨೨: ಕ್ರಿಮಿನಲ್ ಪ್ರಕಣಗಳ ವಿವರಗಳು

| ವರ್ಷ | ವಿಲೇವಾರಿ ಮಾಡಲಾದ ಪ್ರಕರಣಗಳ ಸಂಖ್ಯೆ | ಶಿಕ್ಷೆ ವಿಧಿಸಿದ ಪ್ರಕರಣಗಳ ಸಂಖ್ಯೆ | ಪರಿಶೀಲಿಸಲಾದ ಪ್ರಕರಣಗಳ ಸಂಖ್ಯೆ | ಮೇಲ್ಮನವಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕಣಗಳು | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣಗಳು | ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಪ್ರಕರಣಗಳ ಸಂಖ್ಯೆ | ಪೊಲೀಸ್ ಇಲಾಖೆ ಒಳಗೊಂಡಂತೆ ಇತರ ಇಲಾಖೆಗಳಿಗೆ ನೀಡಲಾದ ಅಭಿಪ್ರಾಯಗಳ ಸಂಖ್ಯೆ |
|---|---|---|---|---|---|---|---|
| ೨೦೦೫ | ೨೦೭೭ | ೨೯೯ | ೪೩೪ | ೦೧ | – | ೪೩೩ | – |
| ೨೦೦೬ | ೨೦೭೬ | ೩೨೬ | ೨೫೫ | ೦೫ | – | ೨೫೦ | – |
| ೨೦೦೭ | ೨೦೪೧ | ೩೧೧ | ೨೯೫ | ೧೨ | – | ೨೮೩ | – |
| ೨೦೦೮ | ೨೬೩೭ | ೩೬೬ | ೪೧೫ | ೦೩ | – | ೪೧೨ | – |
| ೨೦೦೯ | ೧೯೭೭ | ೩೧೯ | ೪೭೬ | ೧೦ | – | ೪೫೯ | – |
| ೨೦೧೦ | ೨೪೧೨ | ೫೪೦ | ೫೧೦ | ೦೮ | – | ೫೦೨ | – |
| ೨೦೧೧ | ೨೩೨೯ | ೪೪೧ | ೫೬೧ | ೦೯ | – | ೫೫೨ | – |
| ಒಟ್ಟು | ೧೫೨೯೧ | ೨೬೦೨ | ೨೯೩೯ | ೪೮ | – | ೨೮೯೧ | – |

## ಕೋಷ್ಟಕ ೧೦.೨೩: ಸಿವಿಲ್ ಪ್ರಕರಣಗಳ ವಿವರಗಳು

| ವರ್ಷ | ಪರಿಶೀಲಿಸಲಾದ ಪ್ರಕಣಗಳ ಸಂಖ್ಯೆ | ಮೇಲ್ಮನವಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣಗಳು | ಮೇಲ್ಮನವಿ ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಪ್ರಕರಣಗಳು | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಪ್ರಕರಣಗಳು |
|---|---|---|---|---|
| ೦೧ | ೦೨ | ೦೩ | ೦೪ | ೦೫ |
| ೧೯೯೭ | ೦೪ | ೦೦ | ೦೩ | ೦೧ |
| ೧೯೯೮ | ೦೩ | ೦೦ | ೦೩ | ೦೦ |
| ೧೯೯೯ | ೦೨ | ೦೦ | ೦೨ | ೦೦ |
| ೨೦೦೦ | ೦೫ | ೦೦ | ೦೪ | ೦೧ |
| ೨೦೦೧ | ೦೮ | ೦೦ | ೦೭ | ೦೧ |
| ೨೦೦೨ | ೦೩ | ೦೦ | ೦೩ | ೦೦ |
| ೨೦೦೩ | ೦೮ | ೦೦ | ೦೭ | ೦೧ |
| ೨೦೦೪ | ೦೭ | ೦೦ | ೦೭ | ೦೦ |
| ೨೦೦೫ | ೧೬ | ೦೧ | ೧೫ | ೦೦ |
| ೨೦೦೬ | ೧೩ | ೦೦ | ೧೨ | ೦೧ |
| ೨೦೦೭ | ೦೯ | ೦೦ | ೦೯ | ೦೦ |
| ೨೦೦೮ | ೧೦ | ೦೦ | ೧೦ | ೦೦ |
| ೨೦೦೯ | ೧೩ | ೦೦ | ೧೩ | ೦೦ |
| ೨೦೧೦ | ೧೬ | ೦೦ | ೧೬ | ೦೦ |
| ೨೦೧೧ | ೧೪ | ೦೦ | ೧೪ | ೦೦ |

*ಆಧಾರ: ಅಭಿಯೋಗ ಮತ್ತು ವ್ಯಾಜ್ಯಗಳ ನಿರ್ದೇಶನಾಲಯ, ಬೆಂಗಳೂರು.*

## ಅಗ್ನಿಶಾಮಕ ದಳ

ಸಾರ್ವಜನಿಕ ಆಸ್ತಿಪಾಸ್ತಿ ಹಾಗೂ ಜನರ ಪ್ರಾಣವನ್ನು ಅಗ್ನಿ ಆಕಸ್ಮಿಕದಲ್ಲಿ ಕಾಪಾಡುವ ಗುರುತರ ಜವಾಬ್ದಾರಿಯನ್ನು ಅಗ್ನಿಶಾಮಕ ದಳವು ಹೊಂದಿದೆ. ಇದಲ್ಲದೆ ಅನಿಲ ಸೋರಿಕೆ, ಕಟ್ಟಡ, ಸೇತುವೆಗಳ ಕುಸಿತ; ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ, ನೀರಿನಲ್ಲಿ ಮುಳುಗಿರುವವರ ರಕ್ಷಣೆ, ಪ್ರಾಣಿಗಳ ರಕ್ಷಣೆ ಹೀಗೆ ಹಲವಾರು ಸೇವೆಗಳನ್ನು ಒದಗಿಸಲಾಗುತ್ತದೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯ ಬೆಂಗಳೂರು ಇವರ ನಿಯಂತ್ರಣದಲ್ಲಿ ಎಲ್ಲಾ ಜಿಲ್ಲಾ ಘಟಕಗಳು ಕೆಲಸ ಮಾಡುತ್ತವೆ. ಅಗ್ನಿಶಾಮಕ ಠಾಣಾಧಿಕಾರಿಗಳು ಠಾಣೆಯ ನಿಯಂತ್ರಣಾಧಿಕಾರಿಯಾಗಿರುತ್ತಾರೆ. ಇವರ ಕೆಳಗೆ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ, ಪ್ರಮುಖ ಅಗ್ನಿಶಾಮಕರು, ಅಗ್ನಿಶಾಮಕ ಚಾಲಕರು ಹಾಗೂ ಅಗ್ನಿಶಾಮಕರು ಕರ್ತವ್ಯ ನಿರ್ವಹಿಸುತ್ತಾರೆ. ಜಿಲ್ಲಾ ಹಂತದಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು ನಿಯಂತ್ರಣಾಧಿಕಾರಿಯಾಗಿರುತ್ತಾರೆ. ಕರ್ನಾಟಕ ರಾಜ್ಯ ಅಗ್ನಿ ಶಾಮಕ ಸೇವೆಗಳ ಅಧಿನಿಯಮ ೧೯೬೪ ರಂತೆ ಅಗ್ನಿಶಾಮಕ ಮತ್ತು ತುರ್ತು ಸೇವಾ ನಿರ್ದೇಶನಾಲಯವನ್ನು ೫-೧೧-೧೯೬೫ರಲ್ಲಿ ಆರಂಭಿಸಲಾಗಿದ್ದು, ಅಲ್ಲಿಯವರೆಗೂ ಪೊಲೀಸ್ ಇಲಾಖೆಯ ನಿಯಂತ್ರಣದಲ್ಲಿ ಅಗ್ನಿಶಾಮಕ ದಳವು ಕಾರ್ಯನಿರ್ವಹಿಸುತ್ತಿತು. ಪ್ರಸ್ತುತ ಇಲಾಖೆಯು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಅಗ್ನಿಶಾಮಕ ದಳವು ಕೋಮುಗಲಭೆ, ಗಣ್ಯ ವ್ಯಕ್ತಿಗಳ ಭೇಟಿ, ಸಭೆ, ಸಮಾರಂಭ, ಚುನಾವಣಾ ಮತ ಎಣಿಕೆ ಹಾಗೂ, ಪ್ರಕೃತಿ ವಿಕೋಪದಂತಹ ಸನ್ನಿವೇಶಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಕರ್ತವ್ಯ ನಿರ್ವಹಿಸುತ್ತದೆ. ಇಲಾಖೆಯ ಸಿಬ್ಬಂದಿಗಳಿಗೆ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಆರ್.ಎ.ಮುಂಡ್ಕುರು ಅಗ್ನಿಶಾಮಕ ತುರ್ತು ಸೇವಾ ಮಹಾವಿದ್ಯಾಲಯದಲ್ಲಿ ತರಬೇತಿ ನೀಡಲಾಗುತ್ತದೆ.

ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲೂಕು ಕೇಂದ್ರಗಳಲ್ಲಿ ತಲಾ ಒಂದೊಂದು ಅಗ್ನಿಶಾಮಕ ಠಾಣೆಗಳಿವೆ. ಚಾಮರಾಜನಗರ ಠಾಣೆಯಲ್ಲಿ ಎರಡು ಹಾಗೂ ಗುಂಡ್ಲುಪೇಟೆ ಠಾಣೆಯಲ್ಲಿ ಒಂದು ಅಗ್ನಿಶಾಮಕ ಜಲವಾಹನಗಳು ೨೦೦೮-೦೯ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿ ೨೦೦೦-೦೧ ರಿಂದ ೨೦೦೮-೦೯ರ ವರೆಗಿನ ಅವಧಿಯಲ್ಲಿ ಅಗ್ನಿ ಆಕಸ್ಮಿಕ ಅಥವಾ ಇತರ ರೀತಿಯ ರಕ್ಷಣೆಗಾಗಿ ೧೧೫೯ ತುರ್ತು ಕರೆಗಳನ್ನು ಸ್ವೀಕರಿಸಲಾಗಿದ್ದು, ಸುಮಾರು ₹ ೧೦೨೩.೨೬೧ ಲಕ್ಷ ಮೌಲ್ಯದ ಆಸ್ತಿಯನ್ನು ಸಂರಕ್ಷಿಸಲಾಗಿದೆ. ೨೦೧೦ ಮಾರ್ಚ್ ಅಂತ್ಯಕ್ಕೆ ಚಾಮರಾಜನಗರ ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ತಾಲೂಕ ಕೇಂದ್ರಗಳಲ್ಲಿ ಒಂದೊಂದು ಅಗ್ನಿಶಾಮಕ ಠಾಣೆಗಳಿದ್ದು, ಚಾಮರಾಜನಗರ ಠಾಣೆಯಲ್ಲಿ ೦೩, ಗುಂಡ್ಲುಪೇಟೆ ಠಾಣೆಯಲ್ಲಿ ೦೨, ಹಾಗೂ ಕೊಳ್ಳೇಗಾಲ ಠಾಣೆಯಲ್ಲಿ ೦೧, ಅಗ್ನಿಶಾಮಕ ವಾಹನಗಳಿದ್ದವು. ೨೦೦೯-೧೦ನೇ ಸಾಲಿನಲ್ಲಿ ಒಟ್ಟು ೧೬೩ ಅಗ್ನಿ ಶಾಮಕ ತುರ್ತುಕರೆಗಳನ್ನು ಸ್ವೀಕರಿಸಿದ್ದು, ಸುಮಾರು ₹ ೧೦೦.೧೨೭ ಲಕ್ಷ ಮೌಲ್ಯದ ಆಸ್ತಿಯನ್ನು ಸಂರಕ್ಷಿಸಲಾಗಿತ್ತು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖಾ ಸಿಬ್ಬಂದಿಯ ಕ್ಷೇಮ ನಿಧಿಯಿದ್ದು, ಈ ನಿಧಿಯಿಂದ ಸಿಬ್ಬಂದಿ ವರ್ಗದವರ ಮಕ್ಕಳ ವಿದ್ಯಾಭ್ಯಾಸ. ಮೃತಪಟ್ಟ ಸಿಬ್ಬಂದಿಯ ಅಂತ್ಯಸಂಸ್ಕಾರ, ವೈದ್ಯಕೀಯ ವೆಚ್ಚ ಮುಂತಾದ ಬಾಬ್ತುಗಳಿಗೆ, ಸಹಾಯಧನ ನೀಡಲಾಗುತ್ತಿದೆ. ಅಗ್ನಿ ಆಕಸ್ಮಿಕಗಳ ಬಗ್ಗೆ ಮುಂಜಾಗ್ರತೆ ತಿಳುವಳಿಕೆ ನೀಡುವುದಕ್ಕಾಗಿ ಸಾರ್ವಜನಿಕರು ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಪ್ರತೀ ವರ್ಷ ಉಪನ್ಯಾಸ ಹಾಗೂ ಅಣಕು ಪ್ರದರ್ಶನಗಳನ್ನು ನೀಡಲಾಗುತ್ತದೆ. ಪ್ರತೀ ವರ್ಷ ಅಗ್ನಿಶಾಮಕ ದಿನಾಚರಣೆ ಅಂಗವಾಗಿ ಏಪ್ರಿಲ್ ೧೪ ರಿಂದ ೨೦ರವರೆಗೆ ಅಗ್ನಿಶಾಮಕ ಸಪ್ತಾಹವನ್ನು ಆಚರಿಸಲಾಗುತ್ತದೆ.

*****